


ಕಲ್ಯಾಣ ಕಿರಣ

ಬಸವ ಭಕ್ತರ ಪ್ರಾಣ ಜೀವಾಳ

₹ 20

ಫೆಬ್ರವರಿ-2013



ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರಿಂದ
ಬಸವ ಧರ್ಮ ಪೀಠದ ಪೀಠಾರೋಹಣ



ಹೈ. ಕ.ಹೋ. ಸಮಿತಿ ಅಧ್ಯಕ್ಷ ವೈಜನಾಥ ಪಾಟೀಲರಿಗೆ ಅಭಿನಂದನೆ



ಪೂಜ್ಯ ಮಾತಾಜಿಯವರು ಪೀಠಾರೋಹಣ ಸಂದೇಶ ನಿಡುತ್ತಿರುವುದು



"ಬಸವ ಧರ್ಮದ ಉದಯ ಮತ್ತು ಪುನರುತ್ಥಾನ" ರೂಪಕ ನಡೆಸಿಕೊಟ್ಟ ಬೆಳಗಾವಿ ರ.ಬಿ.ದಳದ ತಂಡ

ಸಂಪಾದಕೀಯ :

ಮೂಢನಂಬಿಕೆ ಬಿಡಬೇಕು

ಬಸವ ತತ್ತ್ವದ ವಿವಾಹವೊಂದಕ್ಕೆ ಹೋಗಿದ್ದೆ. ಎರಡು ಜೋಡಿಯ ವಿವಾಹ. ವಧುಗಳ ತಾಯಂದಿರು ಧಾರೆ ಎರೆಯಲು ಬರಲಿಲ್ಲ. ಆ ಸಂದರ್ಭದಲ್ಲಿ ನನ್ನ ಗಮನಕ್ಕೆ ಬರಲಿಲ್ಲ ಉಳಿದ ಅನೇಕರು ಧಾರೆ ಎರೆಯುವಾಗ ತಟ್ಟನೆ ನೆನಪಾಯಿತು. ಏಕೆ ಬರಲಿಲ್ಲ ಎಂದು ಆಲೋಚಿಸಿದೆ. ಬಹುಶಃ ವಿಧವೆ ಎಂಬ ಕಾರಣಕ್ಕೆ ಇರಬಹುದು. ಎನ್ನಿಸಿ ಒತ್ತಾಯಪೂರ್ವಕವಾಗಿ ಕರೆದು "ಗುರು ಬಸವಾನುಯಾಯಿಗಳಾದ ನಾವು ಹೀಗೆಲ್ಲ ಮೂಢನಂಬಿಕೆಯಿಂದ ವರ್ತಿಸಬಾರದು" ಎಂದು ಹೇಳಿ ಧಾರೆ ಎರೆಸಿದೆ.

ಎಮ್ಮವರಿಗೆ ಸಾವಿಲ್ಲ, ಎಮ್ಮವರು ಸಾವನರಿಯರು.
ಸಾವೆಂಬುದು ಸಯವಲ್ಲ.
ಲಿಂಗದಲ್ಲಿ ಉದಯವಾದ ನಿಜೈಕ್ಯರಿಗೆ
ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆಯಿಲ್ಲ.
ಲಿಂಗದೇವರ ಶರಣ ಸೊಡ್ಡಳ ಬಾಚರಸರು
ನಿಜಲಿಂಗದ ಒಡಲೊಳಗೆ ಬಗಿದು ಹೊಕ್ಕಡೆ,
ಉಪಮಿಸಬಲ್ಲವರ ಕಾಣೆನು. – ಬವದೀ 1259

ಲಿಂಗಾಯತ ಧರ್ಮದ ಜನಕ ಬಸವಣ್ಣನವರ ವಾಣಿಯಂತೆ ಶರಣರಿಗೆ ಸಾವಿಲ್ಲ. ಅವರು ಲಿಂಗದೇವನ ಒಡಲಲ್ಲಿ ಒಳಹೋಗುವರು. ಮೈಲಿಗೆ, ಅಮಂಗಲ, ಅಪಶಕುನ ಎಂಬ ಪದಗಳು ಶರಣ ಧರ್ಮದ ನಿಘಂಟುವಿನಲ್ಲಿ ಇರಲೇಬಾರದು. ವಿಧವೆಯನ್ನು ಲಿಂಗಾಯತ ಧರ್ಮ ಅಮಂಗಲೆ ಎಂದು ಎಂದೂ ಭಾವಿಸದು. ಆದ್ದರಿಂದ ಹೆತ್ತ ತಾಯಿ ವಿಧವೆಯಾಗಿದ್ದರೂ ಕೂಡ ಆಕೆಯೇ ತನ್ನ ಮಕ್ಕಳನ್ನು ಧಾರೆ ಎರೆದು ಕೊಡಬೇಕು. ಗುರು ಲಿಂಗ ಜಂಗಮದ ಎಲ್ಲಾ ಪೂಜಾ ಕ್ರಿಯೆಗಳಲ್ಲೂ ಭಾಗವಹಿಸಬಹುದು.

ಅಕ್ಕಿಯನ್ನು ಕಾಲಲ್ಲಿ ಒದೆಯುವುದು

ಮದುವೆಯ ನಂತರ ಕಲ್ಯಾಣ ಮಂಟಪದಿಂದ ಪತಿ–ಪತ್ನಿಯರನ್ನು ಕರೆದುಕೊಂಡು ಬಂದು ಮನೆ ತುಂಬಿಸುವ ಶಾಸ್ತ್ರ ಮಾಡಲಾಗುವುದು. ಸೇರಿನಲ್ಲಿ ಅಥವಾ ಚೆಂಬಿನಲ್ಲಿ ಅಕ್ಕಿ(ಜೋಳ)ಯನ್ನು ತುಂಬಿ ಸೊಸೆ ಕಡೆಯಿಂದ ಕಾಲಲ್ಲಿ ಒದೆಸುವರು. ಅವಳು ಆ ಅಕ್ಕಿ ತುಂಬಿದ ಸೇರನ್ನು ಕಾಲಲ್ಲಿ ಜಾಡಿಸಿ ಒದ್ದು ಒಳಗೆ ಹೆಜ್ಜೆ ಇಡುವಳು. ಈ ಅನಿಷ್ಠ ಸಂಪ್ರದಾಯವು ಯಾರಿಂದ ಹೇಗೆ ಪ್ರಾರಂಭವಾಯಿತೊ! ಇದು ಪ್ರಸಾದ ದ್ರೋಹವೇ ಸರಿ. ಪರಮ ಶ್ರೇಷ್ಠ ಆಹಾರವಾದ ಅಕ್ಕಿ(ಜೋಳ)ಯನ್ನು ಈ ರೀತಿ ಅಗೌರವದಿಂದ ಒದೆಯುವುದು ಪಾಪವೇ ಸರಿ. ಇಂಥ ಅನಿಷ್ಠ ಆಚರಣೆಯನ್ನು ಬಸವ ಭಕ್ತರು ಮೊದಲು ಬಿಡಬೇಕು; ಎಲ್ಲರೂ ಬಿಡಬೇಕು. ಗುರು ಬಸವಣ್ಣನವರ ಭಾವಚಿತ್ರದೊಡನೆ ದಂಪತಿಗಳು ಬಾಗಿಲಲ್ಲಿ ನಿಲ್ಲಬೇಕು. ಆಗ ಬಾಗಿಲಿನ ಒಳಗಡೆ ನಿಂತವರು ಜೋಡಿ ಆರತಿಯನ್ನು ಬೆಳಗಬೇಕು. "ಜಯ ಬಸವರಾಜ" ಮಂಗಲ ಘೋಷವನ್ನು ಮಾಡುತ್ತ ಒಳಗೆ ಕಾಲಿಡಬೇಕು. ನಡು ಮನೆಯಲ್ಲಿ ಒಂದು ಟೇಬಲ್ ಮೇಲೆ ತಂದಿರುವ ಬಸವ ಭಾವಚಿತ್ರವನ್ನು ಇಟ್ಟು ಅದರ ಪೂಜೆ ಮಾಡಿಸಬೇಕು.

ಒನಕೆ, ಬೀಸುವಕಲ್ಲು, ಒರಳುಕಲ್ಲು ಪೂಜೆ ಬಿಡಬೇಕು.

ಒಬ್ಬ ಮೂಢ ಭಕ್ತರಿದ್ದಾರೆ. ಅವರ ಮಗಳ ಮದುವೆ ನಡೆದಿತ್ತು. ಆಶೀರ್ವದಿಸಲು ನಮ್ಮನ್ನು ಕರೆದಿದ್ದರು. ವಧುವರ ಇಬ್ಬರೂ ಎಂ.ಡಿ. ಓದಿದ ವೈದ್ಯರುಗಳು. ಮದುವೆ ಬೆಂಗಳೂರಿನಂಥ ಹೈಟೆಕ್ ನಗರದಲ್ಲಿ. ಒಂದು ಕಡೆ ಬೀಸುವಕಲ್ಲು, ಒರಳುಕಲ್ಲು, ಒನಕೆ ಇತ್ಯಾದಿಗಳನ್ನಿಟ್ಟು ಅವಕ್ಕೆಲ್ಲ ಸೀರೆ ಉಡಿಸಿ, ಪಂಚೆ ಉಡಿಸಿ ಪೂಜಿಸಿದ್ದರು. ಇವೆಲ್ಲ ಮಾಯವಾಗಿ ಮಿಕ್ಸಿಗಳು ಬಂದು ಎಷ್ಟೋ ವರ್ಷಗಳಾಗಿವೆ. ಯಾವುದೋ ಕಾಲದಲ್ಲಿ ಗ್ರಾಮೀಣ ಜನರು ದಿನ ನಿತ್ಯದ ಬಳಕೆಯ ವಸ್ತುಗಳನ್ನು ಪೂಜಿಸುವ ರೂಢಿ ಬೆಳೆಸಿಕೊಂಡರು. ಅದನ್ನು ಇಂದಿನ ವಿಜ್ಞಾನ ಯುಗದಲ್ಲಿ ಮುಂದುವರಿಸಿಕೊಂಡು ಹೋಗುವುದು ಎಷ್ಟರ ಮಟ್ಟಿಗೆ ಸರಿ. ಆದ್ದರಿಂದ ಶರಣ ಧರ್ಮಾನುಯಾಯಿಗಳು ಇಂಥ ವಸ್ತುಗಳನ್ನು ಪೂಜಿಸುವುದನ್ನು ಬಿಡಬೇಕು. *****

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

866666

ಸಂಪುಟ-43 ಬಸವ ಶಕೆ -879 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-2 ಫೆಬ್ರವರಿ-2013 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಫೆಬ್ರವರಿ-ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಬರುವ ಹಬ್ಬ-ಹುಣ್ಣಿಮೆ-ಉತ್ಸವಗಳು

1. ಚನ್ನಹುಣ್ಣಿಮೆ-ಚನ್ನಬಸವಣ್ಣನವರ ಲಿಂಗೈಕ್ಯ ಸಂಸ್ಮರಣೆ ಬೆಳುದಿಂಗಳ ಊಟ- ಫೆಬ್ರವರಿ 25
2. ಶಿವರಾತ್ರಿ –ಗಣಮೇಳ – ಮಾರ್ಚ್ 10
3. ಪೂಜ್ಯ ಮಾತಾಜಿಯವರ 68ನೆಯ ವರ್ಧಂತಿ ಅಭಿನಂದನ ಕಾರ್ಯಕ್ರಮ(ಬೆಂಗಳೂರು) – ಮಾರ್ಚ್13
4. ಅಭಿನಂದನ ಕಾರ್ಯಕ್ರಮ (ಪೂಜ್ಯ ಮಾತಾಜಿ ಹುಟ್ಟಿದ ಗ್ರಾಮವಾದ ಸಾಸಲಟ್ಟಿಯ ಅಕ್ಕಮಹಾದೇವಿ ಮಠದಲ್ಲಿ. (ತಾ-ಚಿತ್ರದುರ್ಗ) – ಮಾರ್ಚ್ 24
5. ಮಹಾರಾಷ್ಟ್ರದ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳ – ಏಪ್ರಿಲ್ 11,12,13
6. ಅಕ್ಕಮಹಾದೇವಿ ಜಯಂತಿ – ಏಪ್ರಿಲ್ 25
7. ಧಾರವಾಡದ ಅಕ್ಕಮಹಾದೇವಿ ಮಠದಲ್ಲಿ – ಶರಣೋತ್ಸವ – ಏಪ್ರಿಲ್ 27,28,29

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್
ಬೆಂಗಳೂರು-560010
ದೂರವಾಣಿ : 080-23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com

ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ 817ನೆಯ ಲಿಂಗೈಕ್ಯ ಸಂಸ್ಮರಣೆ

ನಿಮಿತ್ತ ಚನ್ನಹುಣ್ಣಿಮೆ (ಬೆಳುದಿಂಗಳ ಪ್ರಸಾದ) ಹಾಗೂ

ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುಗಳಾದ ಪರಮ ಪೂಜ್ಯಶ್ರೀ ಮಹಾಜಗದ್ಗುರು

ಮಾತೆ ಮಹಾದೇವಿಯವರ ಅಭಿನಂದನಾ ಸಮಾರಂಭ

ದಿನಾಂಕ: 25-02-2013 ಸ್ಥಳ: ಬ್ಯಾಕ್ವರ್ಡ್ ಕ್ಲಾಸ್ ಹಾಸ್ಟೆಲ್ ಮೈದಾನ
ಶಿವ(ಸೋಮ)ವಾರ ಸಂಜೆ : 6-00 ನೆಹರು ಕ್ರೀಡಾಂಗಣ ಹತ್ತಿರ, ಬೀದರ್

ಆದರದ ಆಮಂತ್ರಣ

ಆತ್ಮೀಯ ಶರಣ ಬಾಂಧವರೇ,

ಬೀದರ ಜಿಲ್ಲಾ ರಾಷ್ಟ್ರೀಯ ಬಸವ ದಳ ಹಾಗೂ ಲಿಂಗಾಯತ ಸಮಾಜ ಬಸವ ಮಂಟಪ ಬೀದರ್ ಮತ್ತು ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಪ್ರತಿವರ್ಷದಂತೆ ವಚನ ಸಾಹಿತ್ಯವನ್ನು ರಕ್ಷಿಸಲು ಹೋರಾಡಿ ಎಳೆವಯಸ್ಸಿನಲ್ಲೇ ಉಳವಿಯಲ್ಲಿ ಲಿಂಗೈಕ್ಯರಾದ ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಲಿಂಗೈಕ್ಯ ಸಂಸ್ಮರಣಾ ದಿನವನ್ನು ಚನ್ನಹುಣ್ಣಿಮೆಯನ್ನಾಗಿ ಆಚರಿಸುತ್ತ ಬಂದಿದ್ದು, ಈ ಸಲವೂ ಕೂಡ ಬರುವ ಚನ್ನಹುಣ್ಣಿಮೆಯನ್ನು ನಗರದ ಬ್ಯಾಕ್ವರ್ಡ ಕ್ಲಾಸ್ ಹಾಸ್ಟೆಲ್ ಮೈದಾನದಲ್ಲಿ ಆಚರಿಸಲು ನಿರ್ಧರಿಸಲಾಗಿದೆ. ಈ ಸಲದ ಚನ್ನಹುಣ್ಣಿಮೆಯು ಈ ತಿಂಗಳ ದಿನಾಂಕ 25ರಂದು ಶಿವ(ಸೋಮ)ವಾರ ಒದಗಿ ಬಂದಿದೆ.

ಷಟ್‌ಸ್ಥಲ ಚಕ್ರವರ್ತಿ ಎಂಬ ಬಿರುದು ಪಡೆದ ಧೀರ ತರುಣ ಸನ್ಯಾಸಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ನೇತೃತ್ವದಲ್ಲಿ ವೀರಗಣಾಚಾರಿ ಮಡಿವಾಳ ಮಾಚಿದೇವರು ಹಾಗೂ ಕ್ರಾಂತಿಗಂಗೋತ್ರಿ ಅಕ್ಕನಾಗಲಾಂಬಿಕಾ ತಾಯಿಯವರು ಮೊದಲಾದ ಅಸಂಖ್ಯಾತ ಶರಣರು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ನಮಗಾಗಿ ಅಮೂಲ್ಯವಾದ ವಚನ ಸಾಹಿತ್ಯವನ್ನು ರಕ್ಷಿಸಿ ಉಳಿಸಿಕೊಟ್ಟಿದ್ದಾರೆ. ಅಂಥ ಶರಣರ ಸ್ಮರಣೆ ನಮ್ಮೆಲ್ಲರ ಕರ್ತವ್ಯ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಶರಣಬಂಧುಗಳು ಕಾರ್ಯಕ್ರಮಕ್ಕೆ ಸೇರಬೇಕು.

ಈ ಸಲದ ಚನ್ನಹುಣ್ಣಿಮೆಯ ವಿಶೇಷವೆಂದರೆ, ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುಗಳು, ಬಸವ ಧರ್ಮ ಪೀಠಾಧ್ಯಕ್ಷರೂ, ಉತ್ತುಂಗ ಸಾಹಿತಿಗಳೂ ಹಾಗೂ ಕ್ರಾಂತಿಕಾರಿ ಧರ್ಮ ಪ್ರಸಾರಕರೂ ಆಗಿರುವ ಪರಮ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ಅಭಿನಂದನಾ ಸಮಾರಂಭ ಜರುಗಲಿದೆ.

ಪೂಜ್ಯ ಮಾತಾಜಿ ಎಂದೇ ವಿಖ್ಯಾತರಾಗಿರುವ ಪರಮ ಪೂಜ್ಯರು ಇದುವರೆಗೆ 170ಕ್ಕೂ ಅಧಿಕ ಪುಸ್ತಕಗಳನ್ನು ಬರೆದು ಪ್ರಕಟಿಸಿರುವುದಲ್ಲದೆ, ನೂರಾರು ಡಿವಿಡಿ ಹಾಗೂ ಸಿಡಿಗಳು, ಪ್ರವಚನ, ಹಾಡುಗಳ ಕೆಸೆಟ್ಟುಗಳನ್ನು ತಯಾರಿಸಿ, ಗುರು ಬಸವಣ್ಣನವರ, ಆದಿಶರಣರ ತತ್ತ್ವಗಳನ್ನು ವಿಶ್ವದಾದ್ಯಂತ ಬಿತ್ತರಿಸಿದ್ದಾರೆ. ಪರಮ ಪೂಜ್ಯ ಮಾತಾಜಿಯವರ ಮಹತ್ಸಾಧನೆಗಳಲ್ಲಿ ಒಂದಾದ 108 ಅಡಿ ಎತ್ತರದ ಬಸವ ಪುತ್ಥಳಿ ಕಳೆದ ಅಕ್ಟೋಬರ್ 28ರಂದು ಲೋಕಾರ್ಪಣೆಯಾದದ್ದು ಎಲ್ಲರಿಗೂ ತಿಳಿದಿರುವ ಸಂಗತಿ. ಜಗತ್ತಿನಲ್ಲಿಯೇ ಅತಿ ಎತ್ತರದ ಬಸವ ಪುತ್ಥಳಿ ಇದಾಗಿದ್ದು ಈ ಪುತ್ಥಳಿಯನ್ನು ನಿರ್ಮಿಸುವ ಮೂಲಕ ಶರಣಭೂಮಿ ಬಸವಕಲ್ಯಾಣ ಕ್ಷೇತ್ರವನ್ನು ಅಂತರರಾಷ್ಟ್ರೀಯ ಐತಿಹಾಸಿಕ ಕ್ಷೇತ್ರಗಳ ಸಾಲಿನಲ್ಲಿ ನಿಲ್ಲಿಸಿದ್ದಾರೆ. ಇದು ಬಸವ ಭಕ್ತರೆಲ್ಲ ಹೆಮ್ಮೆ ಪಡುವ ಸಂಗತಿಯಾಗಿದೆ.

ಬನ್ನಿ ಶರಣ ಬಂಧುಗಳೆ, ಶರಣ ಭೂಮಿಯಾಗಿರುವ ಬೀದರ, ಕಲ್ಬುರ್ಗಿ, ಮತ್ತು ನೆರೆರಾಜ್ಯಗಳ ಶರಣ ಬಂಧುಗಳು ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ನಡೆಯಲಿರುವ ಈ ಅಭಿನಂದನಾ ಸಮಾರಂಭಕ್ಕೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬಂದು ಭಾಗವಹಿಸಿ ಪೂಜ್ಯ ಮಾತಾಜಿಯವರನ್ನು ಅಭಿನಂದಿಸಿ ಕೃತಾರ್ಥರಾಗೋಣ.ಶರಣರ ಬರುವೆಮಗೆ ಪ್ರಾಣ ಜೀವಾಳ.

ರಾಷ್ಟ್ರೀಯ ಬಸವ ದಳ, ಲಿಂಗಾಯತ ಸಮಾಜ
ಬಸವ ಮಂಟಪ, ಬೀದರ್

ದೂರವಾಣಿ : 98802 96108

ಪೂಜ್ಯ ಮಾತಾಜಿಯವರ 68ನೆಯ ವರ್ಧಂತಿ ಆಚರಣೆ

ಪ್ರಥಮ ಮಹಿಳಾ ಜಗದ್ಗುರುಗಳಾದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ದಿ.13-3-2013ರಂದು 67 ವರ್ಷಗಳನ್ನು ಪೂರೈಸಿ 68ನೆಯ ವರ್ಷಕ್ಕೆ ಪಾದಾರ್ಪಣ ಮಾಡಲಿದ್ದಾರೆ. ಅಂದು ಬೆಳಿಗ್ಗೆ 10-30 ರಿಂದ ಧಾರ್ಮಿಕ ಕಾರ್ಯಕ್ರಮಗಳನ್ನು ಬೆಂಗಳೂರಿನ ಬಸವ ಮಂಟಪದಲ್ಲಿ ಏರ್ಪಡಿಸಲಾಗಿದೆ. ಪಾದಪೂಜೆ, ಪುಷ್ಪವೃಷ್ಟಿ ಮುಂತಾದ ಕಾರ್ಯಕ್ರಮಗಳು ಬುಧವಾರ ದಿ.13-3-2013ರಂದು ನಡೆಯುತ್ತವೆ. ಶರಣ(ಶನಿ)ವಾರ ದಿ.16-3-2013 ರಂದು ಸಾರ್ವಜನಿಕ ಅಭಿನಂದನ ಸಮಾರಂಭವನ್ನು ಏರ್ಪಡಿಸಲಾಗಿದೆ. ಈ ಅಭಿನಂದನ ಸಮಾರಂಭವು ಶನಿ(ಶರಣ)ವಾರ ದಿ.16-3-2013ರಂದು ಬೆಳಿಗ್ಗೆ 10-30ರಿಂದ ಜರುಗಲಿದೆ.

ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಿ
ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಮೆಜೆಸ್ಟಿಕ್‌ನಿಂದ ರೂಟ್‌ನಂ. 78, 80, 89, ಬಸ್ಸುಗಳು ಬಸವ ಮಂಟಪದ ಸಮೀಪದಲ್ಲಿರುವ ನವರಂಗ್ ಟಾಕೀಸ್ ಬಳಿ ನಿಲ್ಲುತ್ತವೆ.

ಯಲಹಂಕ ಕಡೆಯಿಂದ ರೂ.ನಂ. 401 ಬಿ, 401 ಕೆ, 401 ಆರ್. ಬಸ್ಸುಗಳು ಬಂದು ಬಸವ ಮಂಟಪದ ಮುಂದೆ ನಿಲ್ಲುತ್ತವೆ.

ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ
ಪೀಠಾಧ್ಯಕ್ಷರು, ಚನ್ನಬಸವೇಶ್ವರ ಜ್ಞಾನಪೀಠ
ಬಸವ ಮಂಟಪ, 2035, 20ನೇ ಮುಖ್ಯರಸ್ತೆ, 2ನೆ ಬ್ಲಾಕ್, ರಾಜಾಜಿನಗರ, ಬೆಂಗಳೂರು

8ನೆಯ ಲಿಂಗಾಯತ ಗಣ ಮೇಳಾವ – ಸ್ಥಳ ಬದಲಾವಣೆ

ಪ್ರತಿವರ್ಷ ಯುಗಾದಿಯಿಂದ ಮೂರು ದಿವಸಗಳ ಕಾಲ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಗಲೆ ತಾಲ್ಲೂಕಿನ ಆಳತೆಗ್ರಾಮ ವ್ಯಾಪ್ತಿಯಲ್ಲಿ ಬರುವ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣ ಮೇಳವನ್ನು 2006ನೆಯ ಇಸವಿಯಿಂದಲೂ ನಡೆಸಿಕೊಂಡು ಬರಲಾಗುತ್ತಿದೆಯಷ್ಟೆ. 2013ನೆಯ ಸಾಲಿನ ಗಣ ಮೇಳವು ಏಪ್ರಿಲ್ 11, 12, 13ರಂದು ಒದಗಿ ಬಂದಿದೆ. ಕಳೆದ ವರ್ಷ ಮಳೆಯು ಸರಿಯಾಗಿ ಆಗದೆ ಅಲ್ಲಮಗಿರಿಯ ಗುಡ್ಡದ ಮೇಲೆ ಬೋರ್‌ಗಳು ಬತ್ತಿ ಹೋಗಿವೆ. ರಸ್ತೆಯು ಪೂರಾ ಕೆಟ್ಟುಹೋಗಿದ್ದು ನೀರನ್ನು ಒದಗಿಸುವ ಲಾರಿಗಳವರು ನೀರು ಒದಗಿಸಲು ನಿರಾಕರಿಸುತ್ತಿದ್ದಾರೆ. ಈ ವರ್ಷ ಸರಿಯಾಗಿ ಮಳೆಯಾಗಿ ಮುಂದಿನ ವರ್ಷ ಪರಿಸ್ಥಿತಿ ಸುಧಾರಿಸಬಹುದು ಎಂಬ ನಿರೀಕ್ಷೆಯಿಂದ ಈ ವರ್ಷದ ಗಣ ಮೇಳದ ಸ್ಥಳವನ್ನು ಬದಲಾಯಿಸಲಾಗಿದೆ.

2013ರ ಏಪ್ರಿಲ್ 11, 12, 13ರಂದು 8 ನೆಯ ಲಿಂಗಾಯತ ಗಣಮೇಳ ನಡೆಯುವ ಸ್ಥಳ : **ರಘು ಜಾನಕಿ ಸಾಂಸ್ಕೃತಿಕ ಭವನ, ಹಾತ್‌ಕಣಂಗಲೆ-ಇಚಲ ಕರಂಜಿ ರಸ್ತೆ, ಹಾತ್‌ಕಣಂಗಲೆ ಕೊರೋಚಿ(ಗ್ರಾಮ)** ಹತ್ತಿರ.

ಶರಣ ಬಂಧುಗಳು ಅಲ್ಲಮಗಿರಿಗೆ ಹೋಗದೆ ಸೀದಾ ಫಂಕ್ಷನ್‌ಹಾಲ್‌ಗೆ ಬರಬೇಕೆಂದು ಕೋರುತ್ತೇವೆ. ಹಾತ್‌ಕಣಂಗಲೆವರೆಗೆ ರೇಲ್ವೆ ಅನುಕೂಲತೆ ಇದೆ. ರಾಣಿ ಚನ್ನಮ್ಮ ಎಕ್ಸ್‌ಪ್ರೆಸ್ ಹಾತಕಣಂಗಲೆಗೆ ಬರುತ್ತದೆ.

ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು
ಸಂಪರ್ಕಿಸುವ ದೂರವಾಣಿ: 09212627150, 09880296108
ಪೂಜ್ಯ ಶ್ರೀ ಸದ್ಗುರು ಬಸವಲಿಂಗ ಸ್ವಾಮಿಗಳು 09420585881

ಬಸವ ವಚನಾಮೃತ

- ಮಾತಾಜಿ

1099. ಸಮಾನ ಸಂಸ್ಕಾರ ಅಗತ್ಯ

ಬೆಟ್ಟದ ಕಲ್ಲು ಸೋರೆಯ ಕೂಡಿ ಆಡಿದಂತಾಯಿತ್ತಯ್ಯ,
ಜಾತಿಯಲ್ಲದ ಜಾತಿಯ ಕೂಡಿ.
ಅದರ ಪರಿಯಂತೆ ಸಂಗವಲ್ಲದ ಸಂಗವ ಮಾಡಿದಡೆ
ಭಂಗ ತಪ್ಪದು ಲಿಂಗದೇವಾ.

ಬೆಟ್ಟದ ಕಲ್ಲಿನ ಜಾತಿಯೇ ಬೇರೆ, ಮಣ್ಣಿನ ಸೋರೆ (ಮಡಿಕೆ)ಯ ಜಾತಿಯೇ ಬೇರೆ. ಮಣ್ಣಿನ ಸೋರೆ ಕಲ್ಲಿನ ಒಡನಾಡಿದರೆ ಪುಡಿಪುಡಿಯಾಗುವುದು. ಹಾಗೆ ಸಮಾನ ಸಂಸ್ಕಾರವಿಲ್ಲದವರ ಸಂಗವನ್ನು ಮಾಡಿದರೆ ತನ್ನ ಧರ್ಮನಿಷ್ಠೆಗೆ ಚ್ಯುತಿ ಬರುವುದು. ಉದಾಹರಣೆಗೆ ಒಬ್ಬ ಆಸ್ತಿಕ ಸತತವಾಗಿ ನಾಸ್ತಿಕನ ಜೊತೆ ಒಡನಾಡಿದರೆ ತಾನೂ ದೇವರಲ್ಲಿ ನಂಬಿಕೆ ಕಳೆದುಕೊಳ್ಳುವ ಸಾಧ್ಯತೆ ಇದೆ.

1100. ಸಂದೇಹ, ಚಿಂತೆ ಬೇಡ.

ಮನ್ನಣೆ ತಪ್ಪಿದ ಬಳಿಕ ಅಲ್ಲಿರಬಹುದೆ ?
ಸಲಿಗೆ ತಪ್ಪಿದ ಬಳಿಕ ಸಲುವುದೆ ಮಾತು ?
ತಿವಿದು ತಪ್ಪಿದಡೆ ಸಾವೊಂದು ತಪ್ಪದು
ಬರಿದೆ ಚಿಂತಿಸಿ ಬಳಲಿ ಕೆಡಬೇಡ ಮನವೆ
ಅಹುದು ಆಗದೆಂಬ ಸಂದೇಹವುಳ್ಳಡೆ ಅಹುದೆ ?
ಲಿಂಗದೇವಯ್ಯ ಕೊಟ್ಟಲ್ಲದಿಲ್ಲ.

ಗೌರವ ಸಿಗದ ಸ್ಥಳದಲ್ಲಿ ಇರಬಾರದು. ಸ್ನೇಹದ ಸಲುಗೆ ತಪ್ಪಿದಲ್ಲಿ ಮಾತನ್ನಾಡಬಾರದು. ಏಕೆಂದರೆ ಏನು ಮಾತನಾಡಿದರೂ ಸಂದೇಹ ಪಡಲಾಗುವುದು. ಎದುರಾಳಿಯೊಡನೆ ಕಾದುವಾಗ ತಿವಿದುದು ತಪ್ಪಿದರೆ ಆಗ ಎದುರಾಳಿ ಇವನನ್ನು ಇರಿದು ಕೊಲ್ಲುವನು. ಎಲೈ ಮನಸ್ಸೇ, ಮುಂದೆ ಏನಾಗುತ್ತದೋ ಎಂದು ಚಿಂತಿಸಿ, ಕಳವಳಗೊಳ್ಳಬೇಡ. (ನಾನು ಬಯಸಿದ್ದು) ಆಗುತ್ತದೋ ಇಲ್ಲವೋ ಎಂದು ಹೊಯ್ದಾಡಬೇಡ ಲಿಂಗದೇವರು ಏನನ್ನು ಕೊಡುತ್ತಾನೋ ಅದನ್ನು ಸ್ವೀಕರಿಸು.

1101. ಚತುರ್ವಿಧ ಕ್ರಿಯೆ ಅಗತ್ಯ.

ತನುವಿಡಿದಿಹುದು ಪ್ರಕೃತಿ, ಪ್ರಕೃತಿವಿಡಿದಿಹುದು ಪ್ರಾಣ,
ಪ್ರಾಣವಿಡಿದಿಹುದು ಜ್ಞಾನ, ಜ್ಞಾನವಿಡಿದಿಹುದು ಗುರು
ಇಂತೀ ಗುರುಲಿಂಗಜಂಗಮಪ್ರಸಾದವ
ಸಗುಣವೆಂದು ಹಿಡಿದು ನಿರ್ಗುಣವೆಂದು ಕಂಡ
ಸಂದೇಹಿ ವ್ರತಗೇಡಿಗಳನೇನೆಂಬೆ?
ಅಂಥವರ ಮುಖವ ತೋರದಿರಾ, ಲಿಂಗದೇವಾ. –ಬವದೀ. 1101

ಶರೀರವು ಪಂಚಭೂತಾತ್ಮಕ ಪ್ರಕೃತಿ. ಪ್ರಕೃತಿಯ ಗುಣಧರ್ಮ ಹಸಿವು, ತೃಷೆ, ನಿದ್ರೆ ಎಂಬವು. ಪ್ರಕೃತಿಗೆ ಚೈತನ್ಯವನ್ನು ನೀಡಿರುವುದು ಪ್ರಾಣ. ಅದರ ಚಟುವಟಿಕೆಯಿಂದಲೇ ಶರೀರದ ಕ್ರಿಯೆಗಳು, ಹಸಿವು, ತೃಷೆ, ನಿದ್ರೆಗಳು ಜರುಗುವುವು. ಈ ಪ್ರಾಣದ ಸಚೇತಕ ಶಕ್ತಿಯಾಗಿ ಇರುವುದು ಜ್ಞಾನ. ಇಲ್ಲಿ ಜ್ಞಾನವನ್ನು ಗುಣವಾಚಕವಾಗಿ **Knowledge** ಎಂದು ತಿಳಿಯದೆ ಪ್ರಜ್ಞೆ ಎಂದು ಅರ್ಥ ಮಾಡಬೇಕು. ಪ್ರಜ್ಞೆ ಅರ್ಥಾತ್ **Consciousness** ಇದ್ದರೆ ತಾನೆ ಪ್ರಾಣ. ಶರೀರ ಕೆಲಸ ಮಾಡುವುದು ? ಈ ಪ್ರಜ್ಞೆಗೆ ಸೂತ್ರಧಾರಕ ಶಕ್ತಿಯಾಗಿದೆ 'ಗುರು' ತತ್ತ್ವ ಅಂದರೆ

ಅರಿವು. ಆದ್ದರಿಂದ ಈ ಅರಿವು **Conscience** ಅತಿ ಅಮೂಲ್ಯವಾದುದು. ಇದು ಎಲ್ಲರಲ್ಲೂ ಜಾಗೃತಗೊಳ್ಳಬೇಕು. ಜಾಗೃತಗೊಂಡ ಅರಿವು ಅರ್ಥಾತ್ ಅಂತರಾತ್ಮ ಇದ್ದವನೇ ನಿಜ ಶರಣ. ಇದು ಜಾಗೃತಗೊಳ್ಳಲು ಬಹಿರಂಗದಲ್ಲಿ ಗುರು ಲಿಂಗ ಜಂಗಮ ಪ್ರಸಾದ ಎಂಬ ಚತುರ್ವಿಧ ಸ್ವಾಯತವನ್ನು ಸಾಧಿಸಬೇಕು.

ಬಹಿರ್‌ಅಷ್ಟಾವರಣವಾದ ಗುರುವಿನಿಂದ ಅರಿವು ಉಂಟಾಗುವುದು; ಬಹಿರ್ ಅಷ್ಟಾವರಣದಲ್ಲಿ ಒಂದಾದ ಜಂಗಮದಿಂದ ಜ್ಞಾನಪ್ರಾಪ್ತಿಯಾಗುವುದು. ಬಹಿರ್ ಅಷ್ಟಾವರಣದಲ್ಲಿ ಒಂದಾದ ಇಷ್ಟಲಿಂಗದಿಂದ ಪ್ರಾಣಶುದ್ಧಿ ಮತ್ತು ಪ್ರಾಣಸಿದ್ಧಿಯಾಗುವುದು. ಬಹಿರ್ ಅಷ್ಟಾವರಣವಾದ ಪ್ರಸಾದದಿಂದ ಶರೀರ ಶುದ್ಧಿಯಾಗುವುದು. ಹೀಗೆ ಬಹಿರ್ ಅಷ್ಟಾವರಣಗಳು ಸಗುಣ ರೂಪದಲ್ಲಿದ್ದು ಸಾಧನೆಗೆ ನೆರವಾಗುತ್ತವೆ. ಆದರೆ ಕೆಲವರು ತಾವು ನಿರ್ಗುಣೋಪಾಸಕರೆಂದು ತಮಗೆ ಬಹಿರ್ ಅಷ್ಟಾವರಣಗಳು ಅಗತ್ಯವಿಲ್ಲವೆಂದು ಹೇಳುವರು. ಗುರು ಲಿಂಗ ಜಂಗಮ ಅಗತ್ಯವಿಲ್ಲವೆಂದು ತಮ್ಮ ಅರಿವೇ ಗುರುವೆಂದು ಹೊರಗಿನ ಗುರುವಿನ ಅಗತ್ಯ ತಮಗಿಲ್ಲವೆಂದು ಆತ್ಮಲಿಂಗ ಆರಾಧಕರು ತಾವಾದ್ದರಿಂದ ಇಷ್ಟಲಿಂಗದ ಧಾರಣೆ – ಪೂಜೆ ಅಗತ್ಯವಿಲ್ಲವೆಂದು, ಜ್ಞಾನಿಗಳು ತಾವಾದ್ದರಿಂದ ಜಂಗಮಾರಾಧನೆ ಬೇಕಿಲ್ಲವೆಂದು, ಸ್ವಯಂ ಜ್ಞಾನಿಗಳಾದ್ದರಿಂದ ಪ್ರಸಾದಶುದ್ಧಿ ಅಗತ್ಯವಿಲ್ಲವೆಂದು ಹೇಳುವರು. ಇಂಥವರನ್ನು ಗುರು ಬಸವಣ್ಣನವರು ಸಂದೇಹಿಗಳು, ವ್ರತಗೇಡಿಗಳೆಂದು ಕರೆದಿದ್ದಾರೆ. ಅಂಥವರಿಂದ ದೂರವಿರಿಸಲು ಲಿಂಗದೇವನಲ್ಲಿ ಬೇಡಿದ್ದಾರೆ.

1102. ಲಿಂಗದೇವರ ಕರೆ ಎಂದಿಗೆ ?

ತಿಂಬ ಗಂದೆಯ ಮೇಲೆ ಉಗುರು ಬಿದ್ದಂತಾಯಿತು
ಎನ್ನ ಹಿಂದನೆಚ್ಚರಿಸಿ, ಮುಂದಣ ಸ್ಥಿತಿಗತಿಯನರುಹಿ
ಸಂದೇಹವ ಬಿಡಿಸಿದೆ.
ಎನ್ನ ಕಂದುಕಲೆಯ ಕಳೆವ ತಂದೆ ನೀನಿರುತ್ತಿರಲು
ಎನಗಿನ್ನಾವ ದಂದುಗವೂ ಇಲ್ಲ ನೋಡಾ.
ಬಂದ ಕಾರ್ಯದ ಹದನಿನ್ನೆಂದು ಸಯವಪ್ಪುದು ?
ಲಿಂಗದೇವರು ಎನ್ನನಿತ್ತ ಬಾರೆಂಬ
ಕಾಲವ ತಿಳುಹಾ ಚನ್ನಬಸವಣ್ಣ.

ಈ ವಚನ ಓದಿದಾಗ ಧರ್ಮಪಿತ ಬಸವಣ್ಣನವರು ಮತ್ತು ಚಿನ್ಮಯ ಜ್ಞಾನಿ ಚನ್ನಬಸವಣ್ಣನವರೆಂಬ ಗುರು ಶಿಷ್ಯರು ಆತ್ಮೀಯವಾಗಿ, ಪ್ರೌಢವಾಗಿ ಸಂಭಾಷಣೆ ಮಾಡುವ ದೃಶ್ಯ ಕಣ್ಣಿಗೆ ಕಟ್ಟುತ್ತದೆ. ಇಚ್ಛಾಮರಣತ್ವ ಎನ್ನುವುದು ಯೋಗದ ಅಂತಿಮ ಸಿದ್ಧಿ. ಅದನ್ನು ಪ್ರಯೋಗಿಸಬೇಕೆನ್ನುವವರು ಅಂತಿಮ ಕ್ಷಣಕ್ಕಾಗಿ ಕಾಯಬೇಕಾಗುತ್ತದೆ. ಒಮ್ಮೆ ಅದರ ಪ್ರಯೋಗಕ್ಕೆ ಕುಳಿತರೆ ಪುನಃ ಪ್ರಜ್ಞೆಯನ್ನು ಬಹಿರ್ಮುಖಗೊಳಿಸಲು ಸಾಧ್ಯವಿಲ್ಲ. ಇಂಥ ಒಂದು ಆಸೆ ಧರ್ಮಪಿತರಲ್ಲಿ ಮೂಡಿದೆ. "ಚನ್ನಬಸವಣ್ಣ, ಅಧ್ಯಾತ್ಮದ ಎಲ್ಲ ಅನುಭವಗಳನ್ನೂ ಪಡೆದಾಯಿತು. ಸಗುಣ ಸಾಕ್ಷಾತ್ಕಾರ, ನಿರ್ಗುಣ ಸಾಕ್ಷಾತ್ಕಾರ ಎರಡೂ ಸಾಧ್ಯವಾಯಿತು. ಇನ್ನು ಒಂದು ಪ್ರಯೋಗ ಉಳಿದಿದೆ. ಅದೇ ಕಾಯಜೀವದ ಹೊಲಿಗೆಯನ್ನು ಬಿಚ್ಚಿ ಆತ್ಮವನ್ನು ಪರಮಾತ್ಮನಲ್ಲಿ ವಿಲೀನ ಮಾಡುವ, ಅಂಗವನ್ನು ಲಿಂಗದಲ್ಲಿ ಸಮರಸ ಮಾಡುವ ಇಚ್ಛಾಮರಣದ ಪ್ರಯೋಗ. ಅದನ್ನು ಪ್ರಯೋಗಿಸಲು ಮನಸ್ಸು ತುಡಿಯುತ್ತಿದೆ." ಗುರು ಚನ್ನಬಸವಣ್ಣನವರಿಗೆ ಆಶ್ಚರ್ಯವಾಗುತ್ತದೆ. "ಗುರುದೇವರೆ, ಏನಿದು ಇಂಥ ಅಪೇಕ್ಷೆ ನಿಮ್ಮಲ್ಲಿ ಮೂಡಿಬಂದಿದೆ ! ನೀವು ಒಂದು ಮಣಿಹ ಹೊತ್ತು ಬಂದ ಕಾರಣಿಕರು. ನಿಮ್ಮಿಂದ ಇನ್ನೂ ಬಹಳಷ್ಟು ಕಾರ್ಯ ಆಗುವುದಿದೆ. ಆದ್ದರಿಂದ ಈಗಲೇ ಇಚ್ಛಾಮರಣದ ಪ್ರಯೋಗಕ್ಕೆ ಹಾತೊರೆಯ ಬೇಡಿರಿ. ಲಿಂಗದೇವನ ಕರೆ ಬರುವವರೆಗೆ

ತಾವು ಮರ್ತ್ಯಲೋಕದಲ್ಲಿ ಕಾರ್ಯೋನ್ಮುಖರಾಗಿರುವುದು ಅವಶ್ಯವಿದೆ." ಗುರು ಚನ್ನಬಸವಣ್ಣನವರು ಹೇಳುತ್ತಾರೆ. ಆಗ ಧರ್ಮಪಿತರು ನುಡಿಯುತ್ತಾರೆ: "ಚನ್ನಬಸವಣ್ಣಾ" ಎಂಥಾ ಮಾತನ್ನಾಡಿದೆ! ಸಣ್ಣಸಣ್ಣ ಗುಳ್ಳೆಗಳು ಎದ್ದು ತುಂಬಾ ನವೆಯನ್ನು ಕೊಡುತ್ತವೆ. ಆಗ ಉಗುರಿನಿಂದ ಕೆರೆದಾಗ ಒಂದು ಬಗೆಯ ಹಿತಾನುಭವವಾಗುತ್ತದೆ. ನಿನ್ನ ಮಾತು ಹಾಗಿವೆ. ನನ್ನ ಮನದಲ್ಲಿ ಇಚ್ಛಾಮರಣದ ಪ್ರಯೋಗ ಮಾಡಬೇಕೆಂಬ ಆಸೆ ಆಗಾಗ ಉಂಟಾಗುತ್ತಿತ್ತು. ನಿನ್ನ ಮಾತು ಆ ಬಯಕೆಯನ್ನು ಅಡಗಿಸುತ್ತಿದೆ. ನಾನು ಹುಟ್ಟಿ ಬಂದ ಮಣಿಹವನ್ನು ಎಚ್ಚರಿಸಿದೆ, ಮುಂದಿನ ಗುರಿಯನ್ನು ಅರಿವು ಮಾಡಿಕೊಟ್ಟೆ. ನನ್ನಲ್ಲಿದ್ದ ಸಂದೇಹ ಬಿಡಿಸಿದೆ. ನನ್ನ ಮನದಲ್ಲಿ ಮೂಡುವ ಓರೆಕೋರೆ, ಕುಂದು ಕೊರತೆಗಳನ್ನು ಕಳೆಯುವ ತಂದೆ ನೀನು. ಹೀಗಾಗಿ ನನಗೆ ಯಾವ ಚಿಂತೆಯೂ ಇಲ್ಲ. ನಾನು(ಅವತರಿಸಿ)ಬಂದ ಕಾರ್ಯವು ಎಂದು ಮುಗಿಯುತ್ತದೆ. ಲಿಂಗದೇವರು ನನ್ನನ್ನು ಇತ್ತ ಬಾ ಎಂದು ನಿರೂಪವನ್ನು ಕೊಟ್ಟು ಕರೆಯುವ ಕಾಲ ಎಂದಿಗೆ ಬರುತ್ತದೆ ಎಂಬುದನ್ನು ತಿಳಿಸಬಲ್ಲೆಯಾ?

1103. ಭಕ್ತಿ ವಿಚಿತ್ರವಾದುದು.

ಭಕ್ತಿಯೆಂಬುದು ಅನಿಯಮ ನೋಡಯ್ಯಾ
ಅದು ವಿಷದ ಕೊಡ ತುಡುಕಬಾರದು :
ಅಂಗಕ್ಕೆ ಹಿತವಲ್ಲ, ಸಿಂಗಿ ನೋಡಯ್ಯಾ
ಅದು ವಿಚಿತ್ರ ವಿಸ್ಮಯ ಲಿಂಗದೇವಾ.

ಭಕ್ತಿ ಒಂದು ಸಾಧನ. ಇದು ಹೀಗೇ ಇರಬೇಕು ಎಂದು ಒಂದು ಚೌಕಟ್ಟು ಹಾಕಲು ಬರದು. ಇದು ನಿಯಮಕ್ಕೆ ಅತೀತವಾದುದು. ಸಾಮಾನ್ಯ ಜನರು ಮಾಡುವಂತೆ ಗುಡಿಗೆ ಹೋಗುವುದು, ಗಂಟೆ ಬಾರಿಸುವುದು, ದರ್ಶನಕ್ಕೆ ಸಾಲಿನಲ್ಲಿ ನಿಲ್ಲುವುದು, ಎಂಜಲು ಎಲೆ ಮೇಲೆ ಹೊರಳಾಡುವುದು ಭಕ್ತಿಯಲ್ಲ. ದೇವನಿಗೆ ತನ್ನನ್ನು ತಾನು ಸಮರ್ಪಿಸಿಕೊಳ್ಳುವುದು ಭಕ್ತಿ. ಭಕ್ತಿಯ ಜೀವನ ಮೌಲ್ಯಯುತವಾದುದು. ಹೀಗಾಗಿ ಇದು ವಿಷದ ಕೊಡದಂತೆ. ಅದಕ್ಕೆ ಕೈಹಾಕಬಾರದು ಶರೀರಕ್ಕೆ ಹಿತವಲ್ಲ; ಒಂದು ಭಯಂಕರ ವಿಷದಂತೆ. ಭಕ್ತಿಯ ಮಾರ್ಗ ಬಹಳ ವಿಚಿತ್ರ ಮತ್ತು ವಿಸ್ಮಯವಾದುದು. ಹಾಗೆಂದ ಮಾತ್ರಕ್ಕೆ ಸಾಧಕರು ಅದರಿಂದ ದೂರವಿರಲೂ ಆರರು. ಭಕ್ತಿಯು ಸಾಧಕರ ಜೀವನದ ಜೀವಾಳ.

1104. ಡಾಂಭಿಕನ ಭಕ್ತಿ

ಹೇಡಿ ಬಿರಿದ ಕಟ್ಟಿದಡೆ ಕಲಿಯಪ್ಪನೆ?
ಒರೆಯ ಕಟ್ಟಿ ಇರಿಯದಿದ್ದಡೆ ಲೋಕ ಮೆಚ್ಚುವುದೆ?
ಚೆಲ್ಲಣವನುಟ್ಟು ಹೊಟ್ಟೆಯ ಹಿಡಿದು
ಗರುಡಿಯ ಕಟ್ಟಿ ಸಾಧನೆಯ ಮಾಡುವಂತೆ
ತನ್ನ ತಪ್ಪಿಸಿಕೊಂಡಡೆ ಶಿವನು ಮೆಚ್ಚುವನೆ ?
ಅರಿಯದವರಿಗೆ ಒಳ್ಳೆ ಹೆಡೆಯನೆತ್ತಿ ತೋರಿದಂತೆ
ಬೊಳ್ಳೆಗನ ಭಕ್ತಿ ಲಿಂಗದೇವಾ.

ಒಬ್ಬ ಹೇಡಿಗೆ ಮಹಾಶೂರ ಎಂದು ಬಿರುದು ಕೊಟ್ಟರೆ ಅವನೇನೂ ಶೂರನಾಗುವುದಿಲ್ಲ. ಮತ್ತೊಬ್ಬ ಸೊಂಟದಲ್ಲಿ ಒಂದು ಒರೆಯನ್ನು–ಕತ್ತಿಯನ್ನು ಇಡುವ ಚರ್ಮದ ಚೀಲ, ಕಟ್ಟಿಕೊಂಡು ಓಡಾಡುತ್ತಿದ್ದು ಪ್ರಸಂಗ ಬಂದಾಗ ವೈರಿಯನ್ನು ಇರಿಯದಿದ್ದರೆ ಜಗತ್ತು ಮೆಚ್ಚುವುದಿಲ್ಲ. ವ್ಯಾಯಾಮ ಮಾಡುವಾಗ ಹಾಕಿಕೊಳ್ಳುವ ಚಡ್ಡಿ, ಚಲ್ಲಣವನ್ನು ಹಾಕಿಕೊಂಡು, ಹೊಟ್ಟೆಯ ಹಿಡಿದು ಗರುಡಗಂಬದ ಮೇಲೆ ವಿವಿಧ ಸಾಧನೆ ಮಾಡುತ್ತ ಎದುರಾಳಿಯನ್ನು ಎದುರಿಸಬೇಕಾದರೆ ತಪ್ಪಿಸಿಕೊಳ್ಳುವುದಾದರೆ ದೇವರು ಮೆಚ್ಚುವುದಿಲ್ಲ. ಒಳ್ಳೆ ಎಂಬುದು ಒಂದು ಜಾತಿಯ (ನೀರು)

ಹಾವು. ಅದರ ಹೆಡೆಯನ್ನು ನೋಡಿ ಅರಿಯದ ಜನರು ಅದು ನಾಗರಹಾವು ವಿಷಪೂರಿತ ಎಂದು ಗಾಬರಿಗೊಳ್ಳುವರು. ಆದರೆ ಈ ಹಾವು ಕಡಿಯುವಂತಹುದಲ್ಲ. ಡಾಂಭಿಕನು ಥಾಳಾಗಿ ವಿಭೂತಿ ಧರಿಸಿ, ರುದ್ರಾಕ್ಷಿ ಮಾಲೆ ಹಾಕಿ, ಇಷ್ಟಲಿಂಗ ಧರಿಸಿ, ಭಕ್ತನಂತೆ ವೇಷ ಹಾಕುವನು ಆದರೆ ಪರೀಕ್ಷಿಸಿದಾಗ ಅವನು ಡಾಂಭಿಕ. ಹೇಡಿಯು ವೈರಿಯನ್ನು ಎದುರಿಸದಂತೆ, ಮಲ್ಲನು ಎದುರಾಳಿಯೊಡನೆ ಸೆಣಸುವುದನ್ನು ತಪ್ಪಿಸಿಕೊಳ್ಳುವಂತೆ, ಒಳ್ಳೆಯು ಹೆಡೆಯನ್ನು ಆಡಿಸುವಂತೆ ಭಕ್ತನ ಕರ್ತವ್ಯಗಳಿಂದ ತಪ್ಪಿಸಿಕೊಳ್ಳುವನು.

1105. ಅಟಮಟದ ಭಕ್ತರು

ಹುತ್ತವ ಕಂಡಲ್ಲಿ ಹಾವಾಗಿ, ನೀರ ಕಂಡಲ್ಲಿ
ಹೊಳೆಯಾದವನ ಮಚ್ಚುವನೆ ?
ಬಾರದ ಭವಂಗಳಲ್ಲಿ ಬರಿಸುವನಲ್ಲದೆ ಮಚ್ಚುವನೆ. ?
ಅಘೋರನರಕವನುಣಿಸುವನಲ್ಲದೆ ಮಚ್ಚುವನೆ ?
ಅಟಮಟದ ಭಕ್ತರ ಕಂಡಡೆ
ಕೋಟಲೆಗೊಳಿಸುವ ಲಿಂಗದೇವ.

ಹುತ್ತವನ್ನು ಕಾಣುತ್ತಲೇ ಅದಕ್ಕೆ ಹಾಲೆರೆದು, ಕುಂಕುಮ-ಅರಿಶಿಣ ಹಚ್ಚಿ ಪೂಜಿಸುವರು. ಹೊಳೆಯನ್ನು ಕಾಣುತ್ತಲೇ ಮೂಗು ಹಿಡಿದು ಮುಳುಗು ಹಾಕುವರು. ಇಂಥ ಅರೆಬರೆ ಭಕ್ತರನ್ನು ಅನೇಕ ಜನ್ಮದಲ್ಲಿ ದೇವರು ಹುಟ್ಟಿಸುವನೇ ಹೊರತು ಪ್ರೀತಿಸುವುದಿಲ್ಲ. ಅಘೋರ ನರಕದ ಶಿಕ್ಷೆ ನೀಡುವನಲ್ಲದೆ ಪ್ರೀತಿಸುವುದಿಲ್ಲ. ಲಿಂಗನಿಷ್ಠೆ, ತತ್ತ್ವನಿಷ್ಠೆ ಇಲ್ಲದ ಭಕ್ತರನ್ನು ಕಂಡರೆ ಲಿಂಗದೇವನು ಅನೇಕ ಸಂಕಷ್ಟಗಳಿಗೆ ಈಡು ಮಾಡುವನು.

1106. ವ್ರತಗೇಡಿ ಭಕ್ತನಲ್ಲ

ಒಡೆದ ಹಂಚು ಮರಳಿ ಮಡಕೆಯಾಗಬಲ್ಲುದೆ ?
ಕೆಟ್ಟ ವ್ರತಗೇಡಿ ಭಕ್ತನಾಗಬಲ್ಲನೆ ?
ಬಾಳೆಗೆ ಫಲವೆ ಕಡೆ, ಚೇಳಿಗೆ ಗರ್ಭವೆ ಕಡೆ,
ಕೂಳು ಮಾರೆಡೆಯುಂಟು, ಸೀರೆ ಮಾರೆಡೆಯುಂಟು
ಭಕ್ತಿ ಮಾರೆಡೆಯುಂಟೆ ಲಿಂಗದೇವಾ..

ಒಂದು ಮಡಕೆ ಒಡೆದು ಹಂಚು ಹರಿಯಾಗುತ್ತದೆ. ಆ ತುಂಡುಗಳು ಸೇರಿ ಪುನಃ ಮಡಿಕೆಯಾಗುವುದಿಲ್ಲ. ಅದೇ ರೀತಿ ದೀಕ್ಷೆ ಪಡೆದು ಭಕ್ತನಾದವನು ವ್ರತಗೇಡಿಯಾದರೆ ಅವನು ಭಕ್ತ ಎನ್ನಿಸಿಕೊಳ್ಳುವುದಿಲ್ಲ. ಬಾಳೆ ಒಂದು ಗೊನೆಯನ್ನು ಬಿಟ್ಟ ಬಳಿಕ ಗೊಡ್ಡಾಗುತ್ತದೆ, ಮತ್ತೆ ಫಲವನ್ನು ಕೊಡುವುದಿಲ್ಲ. ಚೇಳು ಬಸಿರಾಗಿ ಮರಿಗಳನ್ನು ಹಾಕುತ್ತಲೇ ಸಾಯುತ್ತದೆ. ಕೂಳನ್ನು ಮಾರುವ ಸ್ಥಳಗಳುಂಟು, ಬಟ್ಟೆಯನ್ನು ಮಾರುವ ಸ್ಥಳಗಳುಂಟು. ಭಕ್ತಿಯನ್ನು ಮಾರುವ ಸ್ಥಳಗಳು ಇರುವುದುಂಟೆ?

1107. ತೋರಿಕೆಯ ಭಕ್ತ

ಅಯ್ಯಾ ಭಕ್ತನೆಂತೆಂಬೆನಯ್ಯಾ ಯುಕ್ತಿಶೂನ್ಯನ ?
ಅದೇನು ಕಾರಣವೆಂದಡೆ,
ಅವನು ತನು ಮನ ಧನ ವಂಚಕನಾದ ಕಾರಣ.
ಧನವ ಕೊಟ್ಟು ಜಂಗಮವನೊಲಿಸಬೇಕು.
ಮನವ ಕೊಟ್ಟು ಲಿಂಗವನೊಲಿಸಬೇಕು
ತನುವ ಕೊಟ್ಟು ಪ್ರಸಾದವನೊಲಿಸಬೇಕು.

ಇಂತೀ ತನು ಮನ ಧನವನೆಲ್ಲವ ಬೈಚಿಟ್ಟುಕೊಂಡು
ಬರಿಯ ಹರೆಯನೆ ಬಾರಿಸಿ ಕುರುಹನೆ ಪೂಜಿಸುವ
ಗೊರವರ ಮೆಚ್ಚುವನೆ ನಮ್ಮ ಲಿಂಗದೇವರು ?

ಇಲ್ಲಿ ಯುಕ್ತಿ ಎಂದರೆ ವಿವೇಕ ಜ್ಞಾನ ಎಂದರ್ಥ. ವಿವೇಕ ಜ್ಞಾನವಿಲ್ಲದವನನ್ನು ಭಕ್ತ ಎಂದು ಹೇಗೆ ಕರೆಯುವುದು? ಏಕೆಂದರೆ ಆತ ತನುಮನಧನ ವಂಚಕನಾಗಿದ್ದಾನೆ ಧನವನ್ನು ಜಂಗಮನಿಗೆ ಕೊಡಬೇಕು, ಏಕೆಂದರೆ ಅದು ಸಮಾಜ ಸೇವೆಗೆ ವಿನಿಯೋಗವಾಗಬೇಕು. ಮನಸ್ಸನ್ನು ಲಿಂಗದೇವನಿಗೆ ಸಲ್ಲಿಸಬೇಕು. ತನುವನ್ನು ಪ್ರಸಾದಕ್ಕೆ ಒಪ್ಪಿಸಬೇಕು. ಹೇಗೆಂದರೆ ಪ್ರಸಾದ ಸ್ವೀಕಾರದಲ್ಲಿ ಶಿಸ್ತು, ಸಂಯಮ ಇರಬೇಕು. ಅತಿಯಾಗಿ ಉಣ್ಣುವುದು, ಪ್ರಸಾದದಲ್ಲಿ ಅಶುಚಿ, ಮಾಂಸಾಹಾರ ಮುಂತಾದ ಅನಾಚಾರ ಇವೆಲ್ಲ ಭಕ್ತನಿಗೆ ಸಲ್ಲದ ನಡೆ. ತನು ಮನ ಧನವನೆಲ್ಲವ ಬಚ್ಚಿಟ್ಟುಕೊಂಡು ಜೋರಾಗಿ ಡೊಳ್ಳು ಬಾರಿಸಿ ಬರೀ ಕುರುಹನ್ನು ಪೂಜಿಸುವ ಗೊರವರನ್ನು ಲಿಂಗದೇವನು ಮೆಚ್ಚಿಕೊಳ್ಳನು.

1108. ಅಪ್ರಾಮಾಣಿಕ ಜಂಗಮ ಭಕ್ತದ್ರೋಹಿ.

ಗುರುಲಿಂಗಜಂಗಮದ ಹೆಸರಿನಿಂದ
ಕಾಯಕವ ಮಾಡಿ ಗುರು ಚರಕೆ ವಂಚಿಸಿ
ತಾಯಿ ತಂದೆ, ಬಂಧು ಬಳಗ, ಹೆಂಡತಿ ಒಡಹುಟ್ಟಿದವರು
ಎಂದು ಸಮಸ್ತ ಪದಾರ್ಥವ ಚಾಗೆಯ ಮಾಡುವವನೊಬ್ಬ
ಭಕ್ತ ದ್ರೋಹಿ ನೋಡಾ, ಲಿಂಗದೇವಾ..

ಗುರುಲಿಂಗ ಜಂಗಮಕ್ಕೆ ವಿನಿಯೋಗಿಸುತ್ತೇನೆ ಎಂದು, ಅಂದರೆ ಸಾರ್ವಜನಿಕ ಕೆಲಸಕ್ಕೆ ಉಪಯೋಗಿಸುತ್ತೇನೆ ಎಂದು ನಂಬಿಸಿ ಹಣವನ್ನು ಸಂಗ್ರಹಿಸಿ ಗುರು ಜಂಗಮಕ್ಕೆ ವಂಚಿಸಿ ಆ ರೀತಿ ಸಂಗ್ರಹಿಸಿದ ಹಣವನ್ನು ತನ್ನ ಕುಟುಂಬಕ್ಕೆ ತಾಯಿತಂದೆ, ಬಂಧುಬಳಗ, ಅಣ್ಣ-ತಮ್ಮ, ಹೆಂಡತಿ ಮುಂತಾದವರ ಹಿತರಕ್ಷಣೆಗಾಗಿ ಬಳಸುವ ವ್ಯಕ್ತಿ ಸಮಾಜ ದ್ರೋಹಿಯಾಗುವನು.

ಕೆಲವು ಜನರಿಗೆ ಸಮಾಜದ ದುಡ್ಡನ್ನು ತಿನ್ನುವ ಅಭ್ಯಾಸ ಬಹಳ. ವಿವಿಧ ಯೋಜನೆ ಹಮ್ಮಿಕೊಂಡು, ಗುಡಿಗೋಪುರಗಳನ್ನು ಕಟ್ಟುವುದಾಗಿ ಹೇಳಿ ಸಾರ್ವಜನಿಕರಿಂದ ಹಣ ಸಂಗ್ರಹಿಸುವರು. ಆ ಹಣವನ್ನು ಲೆಕ್ಕ ಕೊಡದೆ ತಮ್ಮ ಸ್ವಂತ ಕೆಲಸಕ್ಕೆ, ಹೆಂಡತಿ -ಮಕ್ಕಳಿಗಾಗಿ ಬಳಸುವರು. ಇವರು ಭಕ್ತದ್ರೋಹಿಗಳು ಅರ್ಥಾತ್ ಸಮಾಜ ವಂಚಕರು. ಇನ್ನು ಕೆಲವರು ವಿರಕ್ತರಿರುವರು, ಮಠಗಳ ಅಧಿಕಾರಿಗಳಾಗಿರುವರು. ಸಮಾಜ ಕಾರ್ಯಕ್ಕೆಂದು ಭಕ್ತರು ಕಾಣಿಕೆ ಕೊಟ್ಟಿದ್ದನ್ನು ತಮ್ಮ ಪೂರ್ವಾಶ್ರಮದ ಮನೆಗೆ ತಂದೆ-ತಾಯಿ, ಬಂಧುಬಳಗ, ಅಣ್ಣ-ತಮ್ಮ, ಹೆಂಡತಿ ಮುಂತಾದವರ ಹಿತ ರಕ್ಷಣೆಗೆ ಬಳಸುವರು. ಕೆಲವೊಮ್ಮೆ ಕಳ್ಳತನದಲ್ಲಿ ಇಟ್ಟುಕೊಂಡ ಹೆಂಗಸಿನ ಏಳ್ಗೆಗೆ ಮಠದ ಆದಾಯವನ್ನು ವ್ಯಯಿಸುವರು. ಇಂಥ ವಿರಕ್ತರೂ ಭಕ್ತದ್ರೋಹಿಗಳೇ ಸರಿ!

1109. ಕ್ರಿಯಾಚಾರ ಬಹು ಮುಖ್ಯ

ಕ್ರಿಯಾಚಾರವಿಲ್ಲದ ಗುರುವಿನ ಕೈಯಿಂದ
ದೀಕ್ಷೆ ಉಪದೇಶವ ಕೊಳ್ಳಲಾಗದು
ಕ್ರಿಯಾಚಾರವಿಲ್ಲದ ಶಿಲೆಯ ಲಿಂಗವೆಂದು ಪೂಜಿಸಲಾಗದು
ಕ್ರಿಯಾಚಾರವಿಲ್ಲದ ಭೂತ ಪ್ರಾಣಿಗಳಲ್ಲಿ
ಜಂಗಮವೆಂದು ಪಾದೋದಕ ಪ್ರಸಾದವ ಕೊಳಲಾಗದು
ಇಂತಪ್ಪ ಆಚಾರವಿಲ್ಲದ, ಅನಾಚಾರವ ಬಳಸುವ ದುರಾಚಾರಿಗಳಲ್ಲಿ

ಉಪದೇಶವ ಪಡೆದು, ಪಾದೋದಕ ಪ್ರಸಾದವ ಕೊಂಡವಂಗೆ
ಅಘ ನಾಸ್ತಿಯಾಗದು, ಮುಂದೆ ಅಘೋರ ನರಕ ತಪ್ಪದು
ಕಾಣಾ, ಲಿಂಗದೇವಾ.

ಧರ್ಮದಲ್ಲಿ ಕೆಲವು ಕಟ್ಟುನಿಟ್ಟುಗಳಿವೆ; ಆಚಾರ ಸಂಹಿತೆ ಎಂದು ಇರುತ್ತದೆ. ಅದರ ಪ್ರಕಾರ ಗುರುವಿಗೆ ವಿಶಿಷ್ಟ ದೀಕ್ಷೆ ಇರುತ್ತದೆ. ದೀಕ್ಷೆ ಪಡೆದ ಗುರುವು ಉರಿಯುವ ದೀಪವಿದ್ದಂತೆ ಉರಿಯುವ ದೀಪ ಇನ್ನೊಂದು ದೀಪವನ್ನು ಹಚ್ಚಬಲ್ಲದು. ಯಾವುದೇ ದೀಕ್ಷೆ ಪಡೆಯದೆ ಇರುವ ವ್ಯಕ್ತಿ ಇನ್ನೊಬ್ಬರಿಗೆ ಹೇಗೆ ದೀಕ್ಷೆ ನೀಡಬಲ್ಲನು? ಕೆಲವು ಲಿಂಗಾಯತರು ಇಷ್ಟಲಿಂಗವನ್ನು ಇಷ್ಟಲಿಂಗಧಾರಿಯಲ್ಲದ ಸ್ವಾಮಿ-ಸನ್ಯಾಸಿಗಳ ಕೈಯಲ್ಲಿ ಕೊಟ್ಟು ಆಶೀರ್ವದಿಸಿ ಕೊಡಿ ಎನ್ನುವರು, ಇದು ತಪ್ಪು. ಆತನು ಇಷ್ಟಲಿಂಗಧಾರಿಯಲ್ಲದ ಕಾರಣ ಇಷ್ಟಲಿಂಗಕ್ಕೆ ಚಿತ್ಕಳೆ ತುಂಬಲು ಅಧಿಕಾರಿಯಾಗನು. ಅಂಥ ಗುರುವಿನಿಂದ ದೀಕ್ಷೆ, ಮಂತ್ರೋಪದೇಶ ಮಾಡಿಸಿಕೊಳ್ಳಬಾರದು. ಅಂಗಡಿಗಳಲ್ಲಿ ಲಭ್ಯವಾಗುವ ಇಷ್ಟಲಿಂಗವನ್ನು ಕೊಂಡು ಕೆಲವರು ಧರಿಸಿ, ಪೂಜಿಸುವರು. ಅಂಥ ಲಿಂಗಕ್ಕೆ ಚಿತ್ಕಳೆಯು ತುಂಬಲ್ಪಟ್ಟಿರುವುದಿಲ್ಲ. ಆದ್ದರಿಂದ ಸದ್ಗುರುವಿನಿಂದ ಚಿತ್ಕಳೆ ತುಂಬಲ್ಪಟ್ಟದು ಮಾತ್ರ ಧಾರಣ ಮತ್ತು ಪೂಜೆಗೆ ಯೋಗ್ಯ. ಕಾವಿಯನ್ನು ಧರಿಸಿದವರೆಲ್ಲ ಜಂಗಮರಲ್ಲ. ಆಚಾರ ಸಂಪನ್ನನಾಗಿರುವ, ಗುರುವಿನಿಂದ ದೀಕ್ಷಿತನಾಗಿರುವ ವ್ಯಕ್ತಿ ನಿಜ ಜಂಗಮನು. ಅವನಿಂದ ಪದೋದಕ-ಪ್ರಸಾದವನ್ನು ಸ್ವೀಕರಿಸಬೇಕೇ ವಿನಾ ಯಾರ್‍ಯಾರಿಂದಲೋ ಪಾದೋದಕ-ಪ್ರಸಾದ ಸ್ವೀಕರಿಸಬಾರದು.

ಆದ್ದರಿಂದ ಆಚಾರವಿಲ್ಲದ, ಅನಾಚಾರಿಗಳು ದುರಾಚಾರಿಗಳೂ ಆದ ಕಾವಿಧಾರಿಗಳನ್ನು ಗುರು-ಜಂಗಮ ಎಂದು ಭಾವಿಸಿ ಅವರಲ್ಲಿ ದೀಕ್ಷೆ, ಉಪದೇಶಗಳನ್ನು ಪಡೆದು ಅವರಿಂದ ಪಾದೋದಕ-ಪ್ರಸಾದವನ್ನು ಕೊಂಡರೆ ಪಾಪವು ತಪ್ಪದು. ಮತ್ತು ಮುಂದೆ ನರಕವು ಪ್ರಾಪ್ತಿಯಾಗುವುದು.

1110. ಸಹಜ ಭಕ್ತರ ಘನತೆ

ಗುರು ಉಪದೇಶವುಳ್ಳವರ ಗುರುವೆಂದೇ ಕಾಂಬೆನು
ಲಿಂಗಾಂಗಸಂಗಿಗಳ ನಿಜಲಿಂಗವೆಂದೇ ಕಾಬೆನು
ಜಂಗಮಾರ್ಚಕರ ಸರ್ವಾಂಗಲಿಂಗಿಗಳೆಂದೇ ಕಾಬೆನು
ಲಿಂಗದೇವರಲ್ಲಿ ಸಹಜ ಭಕ್ತರ ಕಂಡಡೆ,
ಅವರ ನೀನೆಂದೆ ನಚ್ಚಿ ಮೆಚ್ಚಿ ಅಚ್ಚೊತ್ತಿದಂತಿಪ್ಪೆನಯ್ಯಾ ಚನ್ನಬಸವಣ್ಣ.

ಜಗತ್ತಿನಲ್ಲಿ ಎಲ್ಲ ಪ್ರಾಣಿಗಳು, ಪಶುಪಕ್ಷಿಗಳಿಗೆ ತಾಯಿತಂದೆ, ಹೆಂಡತಿ-ಮಕ್ಕಳು, ಅಣ್ಣ-ತಮ್ಮ, ಅಕ್ಕ-ತಂಗಿ ಮುಂತಾದವರುಂಟು ಆದರೆ ಗುರು ಇರುವುದಿಲ್ಲ. ಮಾನವನಿಗೆ ಮಾತ್ರ ಗುರುವಿನ ಕರುಣೆಯ ಭಾಗ್ಯ ಉಂಟು. ಆದರೆ ಎಲ್ಲ ಮಾನವರಿಗೂ ದೀಕ್ಷೆ ಪಡೆಯುವ ಪ್ರೇರಣೆ ಬಂದಿರುವುದಿಲ್ಲ. ಆದ್ದರಿಂದ ಗುರುವಿನಿಂದ ದೀಕ್ಷೆ, ಉಪದೇಶ ಪಡೆದ ವ್ಯಕ್ತಿ ಧನ್ಯನು. ಅಂಥ ದೀಕ್ಷಿತನನ್ನು ಗುರು ಬಸವಣ್ಣನವರು ತುಂಬು ಹೃದಯದಿಂದ ಗೌರವಿಸುವರು. ಲಿಂಗಾಯತ ಧರ್ಮದಲ್ಲಿ, ಜ್ಯೋತಿ ಮುಟ್ಟಿ ಜ್ಯೋತಿ ಬೆಳಗುವಂತೆ ಗುರು ಮುಟ್ಟಿ ಗುರುವಾಗುವ ತತ್ತ್ವವಿದೆ. ಗುರು ಒಂದು ಜ್ಯೋತಿ, ಶಿಷ್ಯನ ಕಾಯವೆಂಬ ಪ್ರಣತಿಯಲ್ಲಿ ಭಕ್ತಿ ಎಂಬ ತೈಲ, ಸದಾಚಾರವೆಂಬ ಬತ್ತಿ ಇದ್ದಾಗ ಗುರುವಿನಿಂದ ದೀಕ್ಷಾನುಗ್ರಹದ ಜ್ಯೋತಿಯ ಸ್ಪರ್ಶನವಾದಾಗ ಶಿಷ್ಯನು ಗುರುವಾಗುವನು. ಆದ್ದರಿಂದ ದೀಕ್ಷೆಯನ್ನು ಪಡೆದವನ ಗುರುವೆಂದೇ ಕಾಣುವೆನು" ಎನ್ನುತ್ತಾರೆ ಗುರು ಬಸವಣ್ಣನವರು. ಇಷ್ಟಲಿಂಗವನ್ನು ಅಂಗದ ಮೇಲೆ ದೀಕ್ಷೆ ಪಡೆದು ಧರಿಸಿದವರನ್ನು ಲಿಂಗಸ್ವರೂಪರೆಂದು ಭಾವಿಸುತ್ತಾರೆ. ಜಂಗಮ ಸೇವೆ ಮಾಡುವವರನ್ನು ಸರ್ವಾಂಗವೂ ದೈವೀಮಯವಾದವರು ಎಂದು ಆದರಿಸುತ್ತಾರೆ. ಸಹಜವಾಗಿ ಭಕ್ತಿಯನ್ನು ಮಾಡುವವರನ್ನು

ಕಂಡರೆ ಅವರು ಲಿಂಗದೇವನ ಪ್ರತಿನಿಧಿಗಳೆಂದು ನಂಬಿ, ಮೆಚ್ಚಿಕೊಂಡು, ಅತ್ಯಂತ ಸ್ನೇಹ-ಗೌರವಭಾವದಿಂದ ಕಾಣುವರು.

1111. ಅನಾಚಾರಿ ಜಂಗಮ-ಮೂರ್ಖ ಭಕ್ತ

ಸದ್ಗುರು ಮಾರ್ಗಾಚಾರದ ನೆಲೆಕಲೆಯನರಿಯದೆ
ಸದಾಚಾರ ಸದ್ಭಕ್ತನಲ್ಲಿ ಆಡಂಬರ ಲಾಂಛನದ ವೇಷವ ಧರಿಸಿ
ಗ್ರಾಸವ ಹೊರೆದು, ಗುಹ್ಯಲಂಪಟ ಹೆಚ್ಚಿ
ಆ ಭಕ್ತನ ಕ್ರಿಯಾಶಕ್ತಿಗೆ ಭ್ರಮಿಸುವವನೊಬ್ಬ ಚರಪ್ರಾಣಿಯ
ಜಡಜಂತುವೆಂಬೆನಯ್ಯಾ
ಅಂತಾ ಕಾಮವಿಕಾರ ಭ್ರಾಂತನ ಕಾಮವ ಪರಿಹರಿಸಿ
ಲಿಂಗಾಂಗ ನಿಷ್ಠಾಪರತ್ವದ ಹೇಳದೆ
ತಾ ಭೋಗಿಸುವ ಸ್ತ್ರೀಯಳ ಕೊಡುವವನೊಬ್ಬ ಸ್ಥಾವರ ಪ್ರಾಣಿಯ
ಕ್ರಿಮಿಕೀಟಕಪ್ರಾಣಿಯೆಂಬೆನಯ್ಯಾ
ಇಂತು ತನುಮನಧನಂಗಳ ಕೊಟ್ಟುಕೊಂಬ ವಿಚಾರವನರಿಯದೆ
ಬಿಂದುವೆ ನಿಜಶೇಷವೆಂದು ತಿಳಿಯುವ
ಮೂಳನಿಗೆಲ್ಲಿಯದೋ ತ್ರಿವಿಧ ಪ್ರಸಾದ?
ಸ್ಥಲದಿಂದ ಸ್ಥಲವನರ್ಪಿಸುವುದು ಒಡಲ ಗುಣ
ನಿಃಸ್ಥಲದಿಂದ ನಿಃಸ್ಥಲವನರ್ಪಿಸುವುದು ಪ್ರಾಣನ ಗುಣ
ನೋಡಿ ಆರೈವುದೆ ಅರ್ಪಿತ ಗುಣ
ಇಂತಹ ಮಹಾಂತರ ತೋರಿ ಬದುಕಿಸಯ್ಯಾ ಲಿಂಗದೇವಾ.

ಗುರುವಾದವನು ಸದ್ಗುರುವಾಗಿರಬೇಕು, ಅವನು ನಡೆಯಬೇಕಾದ ಪಥ ಸದಾಚಾರದಿಂದ ಕೂಡಿರಬೇಕು ಎಂಬುದನ್ನರಿಯದೆ ಆಡಂಬರದ ಲಾಂಛನಗಳ ವೇಷವನ್ನು ತೊಟ್ಟು ಬಗೆಬಗೆಯ ಭಕ್ಷ್ಯಭೋಜ್ಯವನ್ನುಂಡು ಅದರಿಂದ ಕಾಮವಿಕಾರ ಹೆಚ್ಚಿ, ಉಪಚರಿಸಿದ ಭಕ್ತನ ಹೆಂಡತಿಯ ಮೇಲೆ ಕಣ್ಣು ಹಾಕುವ ಅಲೆಮಾರಿ(ಜಂಗಮ)ಯನ್ನು ಗುರು ಬಸವಣ್ಣನವರು ಜಡಜಂತು ಎಂದು ಕರೆಯುವರು.

ಅಂತಹ ಕಾಮವಿಕಾರ ಭ್ರಾಂತನ ಹುಚ್ಚಾಟವನ್ನು ನಿಷ್ಕ್ರಿಯಗೊಳಿಸಿ ಅವನಿಗೆ ಲಿಂಗಾಂಗ ಯೋಗದ ಮಾರ್ಗವನ್ನು ಬೋಧೆ ಮಾಡದೆ ತನ್ನ ಹೆಂಡತಿಯನ್ನು ಒಪ್ಪಿಸುವ ಮೂರ್ಖ ಭಕ್ತನನ್ನು ಕ್ರಿಮಿಕೀಟಕ ಪ್ರಾಣಿ ಎನ್ನುತ್ತಾರೆ ಗುರು ಬಸವಣ್ಣನವರು. ಭಕ್ತನು ಗುರುಲಿಂಗಜಂಗಮಕ್ಕೆ ತನುಮನಧನಗಳನ್ನು ಅರ್ಪಿಸುವುದು ತ್ರಿವಿಧ ದಾಸೋಹ ಎಂಬ ತತ್ತ್ವದ ಮರ್ಮವನ್ನರಿಯದೆ, ಗುರುವಿಗೆ ತನುವನ್ನು ಕೊಡಬೇಕೆಂದರೆ ಹೆಂಡತಿಯನ್ನು ಒಪ್ಪಿಸುವುದು; ಪ್ರಸಾದವೆಂದರೆ ವೀರ್ಯವಿಸರ್ಜನೆ ಎಂದು ತಿಳಿಯುವ ಮೂಳನಿಗೆ ತ್ರಿವಿಧ ಪ್ರಸಾದ ಲಭ್ಯವಾಗುವುದುಂಟೆ?

ಭೌತಿಕ ವಸ್ತುಗಳನ್ನು ಭೌತಿಕವಾಗಿ ಅರ್ಪಿಸುವುದು ಶರೀರದ ಗುಣ; ಅದಕ್ಕೆ ಸಂಬಂಧಿಸಿದ ಸದ್ಗುಣಗಳಿಂದ(ನಿಃಸ್ಥಲ) ಆತ್ಮನಿಗೆ ಅರ್ಪಿಸುವುದು ಪ್ರಾಣನ ಗುಣ; ಜೀವನದಲ್ಲಿ ಸಂತೃಪ್ತಿಯನ್ನು ಹೊಂದಿರುವುದೇ ನಿಜವಾದ ಅರ್ಪಿತ ಗುಣ. ಇಂಥ ಸ್ಥಿತಿಯನ್ನು ಹೊಂದಿದವನೇ ಮಹಾಂತ. ಇಂತಹ ಮಹಾಂತರನ್ನು ತೋರಿ ಬದುಕಿಸಯ್ಯಾ ಲಿಂಗದೇವ" ಎಂದು ದೇವರಲ್ಲಿ ಗುರು ಬಸವಣ್ಣನವರು ಬೇಡಿಕೊಳ್ಳುತ್ತಾರೆ.

ಧರ್ಮದ ಹೆಸರಿನಲ್ಲಿ ಮುಗ್ಧ ಭಕ್ತರನ್ನು ಶೋಷಿಸುವ ಸಾಧು, ಸನ್ಯಾಸಿಗಳು ವಿಪುಲವಾಗಿದ್ದರು. ಅವರು ತಮ್ಮ ಮನೋವಿಕಾರಗಳನ್ನು ಭಕ್ತಿಯ ಹೆಸರಿನಲ್ಲಿ ತೃಪ್ತಿಪಡಿಸಿಕೊಳ್ಳುತ್ತಿದ್ದರು. ಉದಾ: ನರಮಾಂಸವನ್ನು ಅಡಿಗೆ ಮಾಡಿಡಬೇಕೆಂದು ಸಿರಿಯಾಳನನ್ನು

ಕೇಳಿದ ಕಾಪಾಲಿಕ; ನಿನ್ನ ಹೆಂಡತಿಯನ್ನು ಕೊಡು ಎಂದು ಸಿಂಧುಬಲ್ಲಾಳ ರಾಜನನ್ನು ಕೇಳಿದ ಶೈವ ಸನ್ಯಾಸಿ; ಅವರ ಕೇಳಿಕೆಗಳಲ್ಲಿ ವಿಶ್ವಾಸವಿಟ್ಟ ಸಿರಿಯಾಳ ಮಗ ಚೀಲಾಳನನ್ನು ಕಡಿದು, ಅಡಿಗೆ ಮಾಡಿ ಉಣಬಡಿಸಿದ; ಸಿಂಧುಬಲ್ಲಾಳ ತನ್ನ ಹೆಂಡತಿಯನ್ನು ನೀಡಿದ. ಹೀಗೆ ಜಂಗಮರು ಮುಗ್ಧ ಭಕ್ತರ ಮುಂದೆ ತಮ್ಮ ಅವೈಚಾರಿಕ ಬಯಕೆಗಳನ್ನು ವ್ಯಕ್ತಪಡಿಸಿ ತೃಪ್ತಿಮಾಡಿಕೊಳ್ಳುತ್ತಿದ್ದರು. ಈ ಆಚರಣೆ ಸಹ್ಯವಾಗದೆ ಗುರು ಬಸವಣ್ಣನವರು ಮೇಲ್ಕಂಡ ವಚನದಲ್ಲಿ ತೀಕ್ಷ್ಣವಾಗಿ ಟೀಕಿಸಿದ್ದಾರೆ.

ಹರಿಹರನು ಬಸವರಾಜ ದೇವರ ರಗಳೆ ಎಂಬ ಕಾವ್ಯದಲ್ಲಿ ಇಂಥದೇ ಒಂದು ಪ್ರಸಂಗವನ್ನು ಚಿತ್ರಿಸಿ, ಗುರು ಬಸವಣ್ಣನವರಿಗೆ ಕಲಂಕ ತರುವ ಕೆಲಸವನ್ನು ಮಾಡಿದ್ದಾನೆ. ಒಂದು ದಿನ ತುಂಬಾ ಸುಂದರನಾದ ಒಬ್ಬ ಜಂಗಮ ಬರುತ್ತಾನೆ ಅವನ ಪೂಜೆ-ಪ್ರಸಾದ ಮುಗಿಯುತ್ತದೆ. ಅವನು, "ಹೆಂಗೂಸಿಲ್ಲದೆ ಇದ್ದುದಿಲ್ಲ" ಎನ್ನುತ್ತಾನೆ. ಊರಲ್ಲೆಲ್ಲ ಹುಡುಕಿಸಿದರೂ ಒಬ್ಬ ವೇಶ್ಯೆಯೂ ಸಿಗುವುದಿಲ್ಲ. ಪಟ್ಟಣದ ಪಣ್ಯಾಂಗನೆ(ವೇಶ್ಯೆ)ಯರೆಲ್ಲರೂ ಪುಣ್ಯಾಂಗನೆ(ಪತ್ನಿ)ಯರಾಗಿರುತ್ತಾರೆ. ಸೇವಕರು ನಿರಾಶೆಯಿಂದ ಹಿಂತಿರುಗುತ್ತಾರೆ. ಆಗ ಗುರು ಬಸವಣ್ಣನವರು ತಮ್ಮ ಪತ್ನಿ ನೀಲಾಂಬಿಕೆಯನ್ನೇ ಒಪ್ಪಿಸುತ್ತಾರೆ. ಇದು ಎಂದೂ ಸಾಧ್ಯವಿಲ್ಲದ ಮಾತು. 1111ನೆಯ ವಚನದಲ್ಲಿ ಗುರು ಬಸವಣ್ಣನವರು ವಿಲಾಸಿ ಜಂಗಮವನ್ನು "ಜಡಜಂತು" ಎಂದು ಕರೆಯುತ್ತಾರೆ. ಅಂತಾ ಕಾಮವಿಕಾರ ಭ್ರಾಂತನ ಕಾಮವ ಪರಿಹರಿಸಿ ಲಿಂಗಾಂಗ ನಿಷ್ಠಾಪರತ್ವವ ಹೇಳದೆ ತಾ ಭೋಗಿಸುವ ಸ್ತ್ರೀಯಳನ್ನು ಕೊಡುವವನನ್ನು ಕ್ರಿಮಿ ಕೀಟಕ ಪ್ರಾಣಿ ಎಂದು ಕರೆಯುತ್ತಾರೆ. ಅಂದಾಗ ಪ್ರಜ್ಞಾವಂತರಾದ ಗುರು ಬಸವಣ್ಣನವರು ಅಂಥಾ ಜಂಗಮನಿಗೆ ಪತ್ನಿಯನ್ನು ಒಪ್ಪಿಸುವುದುಂಟೆ?

ಈ ಪ್ರಸಂಗ ಭಾವುಕ ಕವಿಯಾದ ಹರಿಹರನ ಸ್ವಕಲ್ಪಿತ ಪ್ರಸಂಗ ಎನ್ನದೇ ಗತ್ಯಂತರವಿಲ್ಲ. ಇಂಥ ಧಾರ್ಮಿಕ ಅತ್ಯಾಚಾರಗಳು ಮುಗ್ಧಭಕ್ತರ ಮೇಲೆ ನಡೆಯುತ್ತಿದ್ದುದರಿಂದಲೇ ಗುರು ಬಸವಣ್ಣನವರು ಅವನ್ನು ತೀಕ್ಷ್ಣವಾಗಿ ಟೀಕಿಸಿರುವುದು.

1112. ಸಮಯಾಚಾರ

ಕಂಗಳಿಲ್ಲದ ನೋಟ, ಲಿಂಗವಿಲ್ಲದ ಮಾಟ ಜಂಗಮವಿಲ್ಲದೂಟ
ಪ್ರಸಾದವಿಲ್ಲದ ವರ ; ಹಿಂಗಿತ್ತು ; ಶಿವಲೋಕವಿನ್ನೆಲ್ಲಿಯದೋ ?
ಲಿಂಗಕ್ಕೆ ಮಾಡಿದ ಬೋನವ ಸಿಂಬಕ ತಿಂಬಂತೆ
ಹಿಂಗಿತ್ತು ; ಶಿವಲೋಕವಿನ್ನೆಲ್ಲಿಯದೋ ?
ಬಂದ ಸಮಯವನರಿಯದೆ ಉದರವ ಹೊರೆವವರ ಕಂಡಡೆ
ನರಕದಲ್ಲಿಕ್ಕನೆ ಲಿಂಗದೇವಾ ?

ಕಣ್ಣುಗಳು ಇಲ್ಲದೆ ಇರುವ ನೋಟ, ಇಷ್ಟಲಿಂಗಧಾರಣೆ ಇಲ್ಲದಿರುವ ಕೆಲಸಗಳು ವ್ಯರ್ಥ ಮತ್ತು ಅರ್ಥರಹಿತ. ಕನಿಷ್ಠ ಒಬ್ಬರಾದರೂ ಜಂಗಮ(ಅತಿಥಿ)ರು ಇಲ್ಲದೆ ಊಟ ಮಾಡುವಿಕೆ, ಪ್ರಸಾದವಿಲ್ಲದೆ ಕೊಡುವ ವರ ಸಹಿತ ವ್ಯರ್ಥ. ಒಬ್ಬರಿಗಾದರೂ ಪ್ರಸಾದ ನೀಡಿ ತಾನು ಉಣ್ಣಬೇಕು ಎಂಬುದನ್ನು ಧರ್ಮಪಿತರು ಕಲಿಸುತ್ತಿದ್ದಾರೆ. ಧರ್ಮಪಿತರ ಕಾಲದಲ್ಲಿ ಧರ್ಮ ಪ್ರಚಾರಕ ಜಂಗಮರು ವಿಪುಲವಾಗಿದ್ದರು. ಊರೂರು ತಿರುಗಿ ಬೋಧೆ ಮಾಡುತ್ತಿದ್ದರು, ದೀಕ್ಷೆ ನೀಡುತ್ತಿದ್ದರು, ಸಾಹಿತ್ಯ ಓದಿಸುತ್ತಿದ್ದರು. ಇಂಥ ಸ್ವಯಂ ಸೇವಕ ಜಂಗಮರನ್ನು ಹುಡುಕಿ ಕರೆತಂದು, ಪೂಜೆ-ಪ್ರಸಾದ ಮಾಡಿಸಿ ಭಕ್ತರು ಉಪಚರಿಸುತ್ತಿದ್ದರು. ಲಿಂಗಾಯತ ಧರ್ಮವು ಹೊಸದಾಗಿ ಬೆಳೆಯುತ್ತಿತ್ತು. ಜಂಗಮರು ದೀಕ್ಷಿತರಾದ ಲಿಂಗಾಯತರ ಮನೆಯಲ್ಲಿ ಮಾತ್ರ ಉಣ್ಣಬೇಕಾಗಿತ್ತು. ಹೀಗಾಗಿ ಲಿಂಗಾಯತರ ಮನೆಯನ್ನು ಜಂಗಮರು ಹುಡುಕಿದರೆ, ಜಂಗಮರನ್ನು ಹುಡುಕಿ ಲಿಂಗಾಯತ ಭಕ್ತರು ಆಶ್ರಯ, ಊಟ ನೀಡುತ್ತಿದ್ದರು. ಅದಕ್ಕಾಗಿ ಜಂಗಮರೊಡನೆ ಪ್ರಸಾದ ಸ್ವೀಕರಿಸಬೇಕೆಂಬ ನಿಯಮವನ್ನು ಧರ್ಮಪಿತರು ಹಾಕುತ್ತಾರೆ.

ಗುರು ಅಥವಾ ಜಂಗಮರು ಭಕ್ತರನ್ನು ಅನುಗ್ರಹಿಸಬೇಕು ವರ ನೀಡಿ. ಆ ವರವನ್ನು ಯಾವುದಾದರೂ ವಸ್ತುವಿನ ಮೂಲಕ ಕೊಡಬೇಕು. ಕಲ್ಲು ಸಕ್ಕರೆಯೋ, ದ್ರಾಕ್ಷಿಯೋ, ಉತ್ತುತ್ತಿಯೋ-ಹೀಗೆ ಪ್ರಸಾದದ ಮೂಲಕ ವರ(ಅನುಗ್ರಹ) ಕೊಡಬೇಕು. ಲಿಂಗವಿಲ್ಲದ ಮಾಟ, ಜಂಗಮವಿಲ್ಲದ ಊಟ, ಪ್ರಸಾದವಿಲ್ಲದ ವರ-ಇವುಗಳಿಂದಾಗಿ ಶಿವಲೋಕ ದೂರವಾಗುವುದು. ಯಜಮಾನರ ಲಿಂಗಕ್ಕೆ(ಊಟಕ್ಕೆ) ಸಿದ್ಧಪಡಿಸಿದ ಅಡಿಗೆಯನ್ನು ಮನೆಯ ಸೇವಕ ಮೊದಲೇ ತಿಂದಂತೆ ಆಗುತ್ತದೆ. ಜಂಗಮರು ಅತಿಥಿಗಳು ಆಗಮಿಸಿದಾಗ ಅವರನ್ನು ಹೊರಗೆ ಹಸಿದ ಹೊಟ್ಟೆಯಲ್ಲಿ ಕುಳ್ಳಿರಿಸಿ ಒಳಗೆ ಕುಳಿತು ತಾನು ಹೊಟ್ಟೆ ತುಂಬ ಉಂಡರೆ ಲಿಂಗದೇವನು ಅಂಥವರನ್ನು ನರಕದಲ್ಲಿ ಇಕ್ಕುವನು. ಆದ್ದರಿಂದ ಬಂದ ಸಮಯವನ್ನರಿತು ನಡೆಯುವುದು ಭಕ್ತನಿಗೆ ವಿಹಿತ.

1113. ಭೂರಿ ಭೋಜನವೇ ಸಿದ್ಧಿಯೆ?

ಇಷ್ಟಲಿಂಗಕ್ಕರ್ಪಿಸಿ ಮೃಷ್ಟಾನ್ನವನುಂಡು
ಇಷ್ಟಾರ್ಥ ಸಿದ್ಧಿಯ ಪಡೆದೆಹೆವೆಂಬ ಮರುಳುಗಳು ನೀವು ಕೇಳಿರೆ
ಪ್ರಾಣಲಿಂಗಸ್ಥಲ ನಿಮಗೆಲ್ಲಿಯದು ? ಪ್ರಸಾದಸ್ಥಲ ನಿಮಗೆಲ್ಲಿಯದು?
ಓಗರವನುಂಡು ಆಗಾದೆವೆಂದಡೆ,
ಮೂಗ ಕೊಯ್ಯದೆ ಮಾಣ್ಬನೆ ನಮ್ಮ ಲಿಂಗದೇವನು ?

ಭಕ್ತರು ಮೃಷ್ಟಾನ್ನವನ್ನು ಸಿದ್ಧಪಡಿಸಿ ಜಂಗಮರಿಗೆ ಭಕ್ತಿಯಿಂದ ಉಣ್ಣಿಸುತ್ತಾರೆ ಎಂದುಕೊಳ್ಳುವ. ಅದನ್ನು ಅವರು ಇಷ್ಟಲಿಂಗಕ್ಕೆ ಅರ್ಪಿಸಿ ಸಂತೋಷದಿಂದ ಉಂಡು, "ಇಂದು ನಮಗೆ ಇಚ್ಛಾ ಭೋಜನ ಮಾಡಿಸಿದಿರಿ. ನಮ್ಮ ಇಷ್ಟಾರ್ಥ ಸಿದ್ಧಿಯಾಯಿತು" ಎಂದರೆ ಅವರು ಅಲ್ಪತೃಪ್ತರು ಎಂದರ್ಥ. ಇವರು ಹೊಟ್ಟೆಪಾಡಿನ ಜಂಗಮರೇ ವಿನಾ ಪ್ರಾಣಲಿಂಗಿಸ್ಥಲವಾಗಲೀ, ಪ್ರಸಾದಿ ಸ್ಥಲವಾಗಲಿ ಇವರಿಗೆ ಅಳವಟ್ಟಿರುವುದಿಲ್ಲ. ಜ್ಞಾನವನ್ನು ಸಂಪಾದಿಸದೆ ಭಕ್ತರಿಗೆ ಬೋಧಿಸದೆ ಭಕ್ತರ ಮನೆಯಲ್ಲಿ ಓಗರ(ಅನ್ನ)ವನ್ನುಂಡು ಪರಿಪೂರ್ಣರಾದೆವು ಎಂದು ಬೀಗುವ ಅಲ್ಪ ತೃಪ್ತರ ಮೂಗನ್ನು ಕೊಯ್ಯದೆ ಲಿಂಗದೇವನು ಬಿಡುವನೆ?

1114. ಸೇವೆಯಲ್ಲಿ ಶುದ್ಧಿ

ಮಾಡುವಲ್ಲಿ ಎನ್ನ ನಾನರಿದು ಮಾಡಿದೆನಾದಡೆ
ನೀಡುವಲ್ಲಿ ಎನ್ನ ನಾನರಿದು ನೀಡಿದೆನಾದಡೆ
ನೀಡುವಲ್ಲಿ ರುಚಿಗೆ ಮನವೆಳೆಸಿ ಹಾರೈಸಿದೆನಾದಡೆ
ನಿಮಗಂದೆ ದ್ರೋಹವಯ್ಯಾ,
ಮಾಡುವಲ್ಲಿ ನೀಡುವಲ್ಲಿ ಕೂಡೆ ಶುದ್ಧನಲ್ಲದಿರ್ದಡೆ
ನೀನಂದೆ ಮೂಗ ಕೊಯ್ಯಿ, ಲಿಂಗದೇವಾ.

'ಕಾರ್ಯವನ್ನು ಮಾಡುವಲ್ಲಿ "ನಾನು ಮಾಡುತ್ತಿದ್ದೇನೆ" ಎಂಬ ಅಹಂ ಪ್ರಜ್ಞೆ ಹೊಂದಿ ಮಾಡುವುದಿಲ್ಲ; ಜಂಗಮಕ್ಕೆ ನೀಡುವಲ್ಲಿ "ನಾನು ನೀಡುತ್ತಿದ್ದೇನೆ" ಎಂಬ ಹಮ್ಮು ಹೊಂದಿ ನೀಡುವುದಿಲ್ಲ' ಎಂದು ದಾಸೋಹಂ ಭಾವವನ್ನು ಧರ್ಮಪಿತ ಬಸವಣ್ಣನವರು ವ್ಯಕ್ತಪಡಿಸುತ್ತಿದ್ದಾರೆ. ಜಂಗಮರಿಗೆ, ಮನೆಯ ಹಿರಿಯರಿಗೆ ಮೊದಲು ಪ್ರಸಾದವನ್ನು ಎಡೆಮಾಡಿ, ನಂತರ ಉಳಿದವರು ಉಣ್ಣುವುದು ಧಾರ್ಮಿಕ ಶಿಷ್ಟಾಚಾರ. ಅಡಿಗೆ ತಯಾರಾಗುವಾಗ, ಎಡೆಮಾಡಲು ತರುವಾಗ ಭಕ್ಷ್ಯಗಳ ಘಮಘಮ ರುಚಿಯು ಮೂಗನ್ನು ಕೆರಳಿಸುತ್ತದೆ, ನಾಲಿಗೆಯಲ್ಲಿ ನೀರೂರುತ್ತದೆ. ಹೀಗಾಗದಂತಹ ಸಂಯಮ ಸೇವೆ ಮಾಡುವವರಲ್ಲಿ ಇರಬೇಕು. ಮಾನಸಿಕವಾಗಿ ರುಚಿಗೆ ಎಳೆಸಿದರೂ ಅದು ಎಂಜಲು ಮಾಡಿದಂತಾಗುತ್ತದೆ. ಹಾಗೆ ರುಚಿಗೆ

ಎಳೆಸಿದರೆ ಅದು ಲಿಂಗದ್ರೋಹ, ಪ್ರಸಾದದ್ರೋಹವಾಗುತ್ತದೆ. ಆದ್ದರಿಂದ ಸೇವೆ ಮಾಡುವಲ್ಲಿ, ಪ್ರಸಾದ ನೀಡುವಲ್ಲಿ ಶುದ್ಧನಾಗದಿದ್ದರೆ ಮೂಗುಕೊಯ್ಯುವ ಶಿಕ್ಷೆ ನೀಡುವ ಲಿಂಗದೇವ.

1115. ಪ್ರಸಾದವೇ ಚಿಕಿತ್ಸೆ

ಒಡಲುಗೊಂಡು ಹುಟ್ಟಿದ ಘಟಕ್ಕೆ ಅಷ್ಟೋತ್ತರಶತ ವ್ಯಾಧಿ
ಅದಕ್ಕೆ ನಾನಾ ಔಷಧಿಯ ತಂದು ಹೊರೆವರು.
ಆ ಪರಿಯ ನಾನದ ಹೊರೆಯೆನು.
ಅದೇನು ಕಾರಣವೆಂದಡೆ ;
ಭವರೋಗ ವೈದ್ಯ, ಭವಹರನೆಂಬ ಬಿರಿದು ನಿಮ್ಮದಾಗಿ
ಇದು ಕಾರಣ ಲಿಂಗದೇವಾ,
ನಿಮ್ಮ ಪುರಾತರ ಪ್ರಸಾದವಲ್ಲದೆ ಕೊಂಡಡೆ ನಿಮ್ಮಾಣೆ.

"ಶರೀರವನ್ನು ಹೊತ್ತು ಹುಟ್ಟಿದ ಮಾನವ ಜೀವಕ್ಕೆ ನೂರೆಂಟು ರೋಗಗಳು ಕಾಡುತ್ತವೆ. ಆ ರೋಗಗಳನ್ನು ನಿವಾರಣೆ ಮಾಡಿಕೊಳ್ಳಲು ಬಗೆಬಗೆಯ ಔಷಧಿಗಳನ್ನು ತಿನ್ನುವರು. ನಾನು ಆ ರೀತಿ ಮಾಡುವುದಿಲ್ಲ. ಏಕೆಂದರೆ ದೇವಾ ನಿನಗೆ ಭವರೋಗ ವೈದ್ಯ, ಭವಹರ ಎಂಬ ಬಿರುದು ಉಂಟು. ಆದ್ದರಿಂದ ಲಿಂಗದೇವಾ, ನಿಮ್ಮ ಪುರಾತರ ಪ್ರಸಾದವನ್ನಲ್ಲದೆ ಬೇರೆ ಏನನ್ನಾದರೂ ಕೊಂಡರೆ ನಿಮ್ಮಾಣೆಯಾದೀತು!"

ರೋಗಗಳು ಬಂದರೆ ತಾವು ಔಷಧಿಯನ್ನು ತಿನ್ನದೆ ಕೇವಲ ತೀರ್ಥ-ಪ್ರಸಾದದ ಮೇಲೆ, ಶರಣರು ಕೊಡುವ ಪ್ರಸಾದದ ಮೇಲೆ ಜೀವಿಸಿ, ವಾಸಿ ಮಾಡಿಕೊಳ್ಳುವುದಾಗಿ ಧರ್ಮಪಿತ ಬಸವಣ್ಣನವರು ಹೇಳುತ್ತಾರೆ. ಕಾಯಿಲೆ ಬಂದಾಗ ಸ್ನಾನ-ಪೂಜೆ ಮಾಡಿ ಇಷ್ಟಲಿಂಗ ತೀರ್ಥ ಮತ್ತು ಕರುಣ ಪ್ರಸಾದವನ್ನು ಮಾತ್ರ ಸ್ವೀಕರಿಸಿ ಉಪವಾಸ ಮಾಡುವ ಪದ್ಧತಿಯನ್ನು ಗುರು ಬಸವಣ್ಣನವರ ಆದಿಯಾಗಿ ಶರಣರು ಅಳವಡಿಸಿಕೊಂಡಿದ್ದರು. "ಲಂಘನಂ ಪರಮೌಷಧಂ"- ಉಪವಾಸ ಒಂದು ಶ್ರೇಷ್ಠ ಚಿಕಿತ್ಸೆ ಎಂದು ನಂಬಿದ್ದರು. ಜಂಗಮರು, ಶರಣರು(ಪುರಾತರು) ಬಂದರೆ ಅವರಿಂದ ಕರುಣ ಪ್ರಸಾದವನ್ನು ಮಾತ್ರ ಪಡೆದುಕೊಳ್ಳುತ್ತಿದ್ದರು. ದೇವರು ಸರ್ವಶಕ್ತ, ಅವನ ಇಚ್ಛೆಯಂತೆ ಎಲ್ಲವೂ ನಡೆಯುವುದು ಎಂದು ಕಾಯಿಲೆ ಬಂದರೆ ದೇವರ ಮೇಲೆ ಭಾರಹಾಕಿ ಇದ್ದುಬಿಡುತ್ತಿದ್ದರು. ಬರೀ ತೀರ್ಥ ಪ್ರಸಾದ ಮಾತ್ರ ಸ್ವೀಕರಿಸುತ್ತಿದ್ದುದರಿಂದ ಶರೀರಕ್ಕೆ ಉಪವಾಸ ದೊರೆತು ಕಾಯಿಲೆಗಳು ವಾಸಿಯಾಗುತ್ತಿದ್ದಿರಬಹುದು.

1116. ಜಂಗಮ ದಾಸೋಹದಿಂದಲೇ ಮುಕ್ತಿ

ಪಂಚಮುಖವ ಪೂಜಿಸುವ ಅಯ್ಯಗಳು ನೀವು ಕೇಳಿರಯ್ಯಾ
ಪಂಚಲಿಂಗವಾವುದೆಂಬುದ ನೀವು ಕೇಳಿರೆ !
ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶವೆಂಬ
ಈ ಐವರಲ್ಲಿ ನೊಂದುಬೆಂದಯ್ಯಗಳು ನೀವು ಕೇಳಿರೆ !
ನಾನವನೊಲ್ಲೆ ನಾನವನಂಗವಿಸುವವನಲ್ಲ, ನಾನವ ಹಿಡಿವವನಲ್ಲ !
ಸನ್ಯಾಸದೊಳಗಾಡಿ ಸಮೀಪಕ್ಕೆ ಬಾಹಾತನಲ್ಲ
ಕ್ಷಪಣರೊಳಗಾಡಿ ಲಜ್ಜೆದೋರುವವನಲ್ಲ
ಲಿಂಗದೊಳಗಾಡಿ ಅಂಗವ ಬಿಡುವವನಲ್ಲ;
ಸರ್ವದೊಳಗಾಡಿ ಅಧೋಗತಿಗಿಳಿವವನಲ್ಲ;
ನಾನು ಜಂಗಮ ದಾಸೋಹದೊಳಗಾಡಿ
ನಿಮ್ಮ ಕಂಡೆ ಲಿಂಗದೇವಾ.

ಸ್ಥಾವರ ಲಿಂಗದ ಚುಳುಕಾದ ರೂಪವಾಗಿ ಚರಲಿಂಗವನ್ನು ಇಟ್ಟುಕೊಂಡು ಅದಕ್ಕೆ ಐದು

ಮುಖಗಳಿರುವ ಹಿತ್ತಾಳೆಯ ಕವಚವನ್ನು ತೊಡಿಸಿ, ಶಿವನು ಪಂಚಮುಖಗಳಿಂದ ಕೂಡಿದ್ದಾನೆ ಇದು ಪಂಚಲಿಂಗ ಎಂದು ಪೂಜೆ ಮಾಡುವವರನ್ನು ಈ ವಚನದಲ್ಲಿ ವಿಡಂಬಿಸಲಾಗಿದೆ. ಈ ಪಂಚಮುಖಗಳು ಪೃಥ್ವಿ, ಅಪ್ಪು, ತೇಜ, ವಾಯು ಮತ್ತು ಆಕಾಶ ಎಂಬ ಪಂಚಭೂತಗಳನ್ನು ಪ್ರತಿನಿಧಿಸುತ್ತವೆ ಎಂದು ಇದರ ಪೂಜಕರು ಹೇಳುವುದುಂಟು. ಭೌತಿಕ ವಸ್ತುಗಳಾದ ಪಂಚ ಭೂತಗಳನ್ನು ಪೂಜಿಸುವವರೆ ನೀವು ಕೇಳಿರೆ. ನಾನು ಇದನ್ನು ಒಲ್ಲೆ, ನಾನಿವನ್ನು ಅಳವಡಿಸಿಕೊಳ್ಳುವವನಲ್ಲ. ನಾನು ಈ ಮಾರ್ಗ ಹಿಡಿಯುವವನಲ್ಲ ನನ್ನ ಮಾರ್ಗ ಬೇರೆಯದೇ ಆಗಿದೆ. ಸನ್ಯಾಸವನ್ನು ಆಶ್ರಯಿಸಿ ಎಲ್ಲ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವಂಥದಲ್ಲ; ಜೈನ ಧರ್ಮಾನುಯಾಯಿಯಾಗಿ ದಿಗಂಬರನಾಗಿ ಇನ್ನೊಬ್ಬರಿಗೆ ನಾಚಿಕೆ ಉಂಟು ಮಾಡುವಂಥದಲ್ಲ. ವೀರಶೈವದಂತೆ ಲಿಂಗವೇನಾದರೂ ಕಳೆದುಹೋದರೆ ಪ್ರಾಣಬಿಡುವಂಥ ಮತಾಂಧತೆಯದಲ್ಲ; ಇನ್ನು ಎಲ್ಲ ಮಾರ್ಗಗಳಿಗೂ ಹೋಗಿ ಅಧೋಗತಿಗೆ ಇಳಿಯುವಂಥದಲ್ಲ. ಇಲ್ಲಿ ಮುಖ್ಯವಾಗಿರುವುದು ಜಂಗಮದಾಸೋಹ ಅರ್ಥಾತ್ ಸಮಾಜಸೇವೆ ಈ ಜಂಗಮದಾಸೋಹದ ಮೂಲಕವೇ ಲಿಂಗದೇವ ನಿಮ್ಮನ್ನು ಕಂಡೆನು.

1117. ಜಂಗಮಕ್ಕೆ ಗೌರವ

ಕುಲವ ನೋಡದೆ ಛಲವ ನೋಡದೆ
ನಿಲವ ನೋಡದೆ ಕೂಡಿದ ಬಳಿಕ
ಅಲ್ಲಿ ಹೆಚ್ಚು ಕುಂದನರಸಲುಂಟೆ ?
ಮುಂದುವರಿದು ಜಂಗಮಕ್ಕೆ ಭಕ್ತಿ ಮಾಡೆಂದು
ನಿಮ್ಮ ಕಾರುಣ್ಯವನುಪದೇಶವ ಮಾಡಿದ ಬಳಿಕ
ಬಂದುದ ಬಂದಂತೆ ಸಮನಿಸಿಕೊಳ್ಳಬೇಕಲ್ಲದೆ
ಅಂತಿಂತೆನಬಾರದು ಕೇಳಯ್ಯಾ.
ನೀನು ನಿರಾಕಾರ, ಸಾಕಾರವೆಂಬೆರಡು ಮೂರ್ತಿಯ ಧರಿಸಿಪ್ಪೆಯಾಗಿ
ಒಂದ ಜರಿದು ಒಂದ ಹಿಡಿದಿಹೆನೆಂದಡೆ
ಅದೆ ಕೊರತೆ ನೋಡಾ ಲಿಂಗದೇವಾ

ಜಂಗಮತ್ವಕ್ಕೆ ಆಯ್ಕೆ ಮಾಡುವಾಗ ಹುಟ್ಟಿದ ಕುಲವನ್ನು ಅವನ ಛಲವನ್ನು ಮತ್ತು ನಿಲುವು (ಭೌತಿಕ ದೇಹದಾರ್ಢ್ಯ)ನ್ನು ಗಮನಿಸದೆ ಆಯ್ಕೆಮಾಡಿ ಅಧಿಕಾರ ಕೊಟ್ಟ ಬಳಿಕ ಅಲ್ಲಿ ಕುಂದನ್ನು ಹುಡುಕಲು ಹೋಗಬಾರದು. ವಿಶ್ವಾಸವಿಟ್ಟು ಜಂಗಮಕ್ಕೆ ಭಕ್ತಿಯನ್ನು ಮಾಡಬೇಕು. ಅವರಿಂದ ಹೆಚ್ಚಿನ ಸೇವೆಯಾಗುವುದು ಎಂದು ದೇವಾ, ನೀವು ಉಪದೇಶವನ್ನು ಮಾಡಿರುವುದರಿಂದ ಇರುವಂತೆ ಹೊಂದಿಕೊಂಡು ಹೋಗಬೇಕೇ ವಿನಾ ಹಾಗೆ ಹೀಗೆ ಎಂದು ಟೀಕಿಸಲು ಹೋಗಬಾರದು. ಲಿಂಗದೇವ, ನೀನು ನಿರಾಕಾರನು ನಿನ್ನ ಸಾಕಾರ ಮುಖವೇ ಜಂಗಮ ಆದ್ದರಿಂದ ನಿನ್ನನ್ನು ಗೌರವಿಸಿ ಸಾಕಾರ ಮುಖವಾದ ಜಂಗಮವನ್ನು ಜರಿದರೆ ಅದು ಧಾರ್ಮಿಕವಾಗಿ ಅಪರಾಧವಾಗುತ್ತದೆ.

ಗೌತಮ ಬುದ್ಧನು ಧರ್ಮ ಪ್ರಚಾರಕ ಭಿಕ್ಕುಗಳನ್ನು ನಿಯೋಜಿಸಿದಂತೆ ಗುರು ಬಸವಣ್ಣನವರು ಜಂಗಮರನ್ನು ತರಬೇತಿಗೊಳಿಸಿ ಧರ್ಮ ಪ್ರಚಾರಕ್ಕೆ ತೊಡಗಿಸಿದರು. ಇವರು ಸಮಾಜ ಪರಿವರ್ತನೆಯಲ್ಲಿ ತೊಡಗಿದ ಸ್ವಯಂ ಸೇವಕರು. ಸಾಮಾನ್ಯವಾಗಿ ಎಲ್ಲರೂ ಒಂದೇ ಮಟ್ಟದವರಾಗಿ ಇರುವುದಿಲ್ಲ. ಆಗ ಸಮಾಜವು ಅವರೊಡನೆ ಹೊಂದಿಕೊಳ್ಳಬೇಕಾಗುತ್ತದೆ, ತ್ಯಾಗಿಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಜಂಗಮರೆಲ್ಲರೂ ಪರಿಪೂರ್ಣರಾಗಿಯೇ ಇರಬೇಕು ಎಂದು ನಿರೀಕ್ಷಿಸಬಾರದು ಎಂಬುದು ಈ ವಚನದ ಅಂತರಾರ್ಥ

1118. ಕಳ್ಳರು ಯಾರು?

ಒಡನಿರ್ದ ಸತಿಯೆಂದು ನಚ್ಚಿರ್ದೆನಯ್ಯಾ !
ಕೈವಿಡಿದ ಸಜ್ಜನೆಯೆಂದು ನಂಬಿರ್ದೆನಯ್ಯಾ
ಅಯ್ಯೋ, ನಮ್ಮಯ್ಯನ ಕೈ ನೊಂದುದು
ತೆಗೆದುಕೊಡಾ ಎಲೇ ಚಂಡಾಲಗಿತ್ತಿ !
ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ
ಲಿಂಗದೇವನಲ್ಲದೆ ಆರೂ ಇಲ್ಲಾ.

ಇದು ಒಂದು ಮಹತ್ವಪೂರ್ಣವಾದ ಘಟನೆಯನ್ನು ಚಿತ್ರಿಸುತ್ತದೆ. ಒಮ್ಮೆ ಕಳ್ಳನೊಬ್ಬ ಗುರು ಬಸವಣ್ಣನವರ ಮಹಾಮನೆಯನ್ನು ಪ್ರವೇಶಿಸುತ್ತಾನೆ. ಮಲಗಿ ನಿದ್ರಿಸುತ್ತಿದ್ದ ತಾಯಿ ನೀಲಗಂಗಮ್ಮನವರ ಕಿವಿಯ ಓಲೆಗಳಿಗೆ ಕೈಹಾಕುತ್ತಾನೆ. ಎಚ್ಚರಗೊಂಡ ಅವರು "ಕಳ್ಳ ಕಳ್ಳ" ಎಂದು ಕೂಗುತ್ತಾರೆ ಧರ್ಮಪಿತರಿಗೆ ಎಚ್ಚರವಾಗುತ್ತದೆ. ಕಳ್ಳನು ಓಡಿ ಹೋಗುತ್ತಾನೆ. "ಕಳ್ಳ ಬಂದಿದ್ದ; ನನ್ನ ಕಿವಿಗೆ ಕೈ ಹಾಕಿ ಓಲೆಗಳನ್ನು ತೆಗೆದುಕೊಳ್ಳುತ್ತಿದ್ದ. "ಎಂದು ತಾಯಿಯವರು ಗಾಬರಿಯಿಂದ ಹೇಳುತ್ತಾರೆ. ಅಷ್ಟರಲ್ಲಿ ಹೊರಗೆ ಪಹರೆ ನಡೆಸುತ್ತಿದ್ದ ಕಾವಲುಭಟರು ಕಳ್ಳನನ್ನು ಹಿಡಿದುತಂದು ಗುರುಬಸವಣ್ಣನವರ ಮುಂದೆ ನಿಲ್ಲಿಸುತ್ತಾರೆ. ಆಗ ಅವರು "ಇವನನ್ನೇ ನೀನು ಕಳ್ಳನೆಂದದ್ದು? ಇವನು ಕಳ್ಳನಲ್ಲ. ನನ್ನನ್ನು ಪರೀಕ್ಷಿಸಲು ಬಂದ ಸಾಕ್ಷಾತ್ ದೇವರು." ಎಂದು ಹೇಳುತ್ತಾರೆ. ತಾಯಿ ನೀಲಗಂಗಮ್ಮನವರು ಬೆರಗಾಗಿ ನಿಂತಿರುವಾಗ ಧರ್ಮಪಿತರು ನುಡಿಯುತ್ತಾರೆ: "ಕಳ್ಳರು ಯಾರು? ಕಳವು ಮಾಡುವವ ಕಳ್ಳನಲ್ಲ ಅವನು ಬಡತನ, ಹಣ ಇಲ್ಲದ ಕೊರತೆಯಿಂದ ಕದಿಯಲು ಬರುತ್ತಾನೆ. ನಿಜವಾದ ಕಳ್ಳನೆಂದರೆ ಕಳವು ಮಾಡಲು ಪ್ರಚೋದನೆ ಕೊಡುವಂತೆ ಬಚ್ಚಿಟ್ಟುಕೊಳ್ಳುವವ ಕಳ್ಳನು." ಇದರಿಂದ ಕಳ್ಳನು ಪರಿವರ್ತನೆಗೊಂಡು ಶರಣನಾಗುತ್ತಾನೆ. ಹೀಗೆ ಈ ಘಟನೆ ಹೃದಯಸ್ಪರ್ಶಿಯಾಗಿದೆ.

"ಸದಾಕಾಲ ಕಾಯಾ ವಾಚಾ ಮನಸಾ ನನ್ನ ಜೊತೆಗಿರುವ ಸತಿ ಎಂದು ನಾನು ನೋಡಿಕೊಂಡಿರ್ದೆ. ಧರ್ಮ ಸಾಕ್ಷಿಯಾಗಿ ಕೈವಿಡಿದು ನಾನು ನಡೆವ ದಾರಿಯಲ್ಲಿ ನಡೆಯುವ ಸಜ್ಜನೆ ಎಂದು ನಂಬಿದ್ದೆ. ಆ ನಂಬಿಕೆ ಇಂದು ಹುಸಿಯಾಯಿತು. ಅಯ್ಯೋ, ನಮ್ಮಯ್ಯನ ಕೈ ನೊಂದಿತು. ನೀನಾಗಿ ತೆಗೆದುಕೊಟ್ಟಿದ್ದರೆ ಅವನು ಬಿಚ್ಚುವ ಶ್ರಮ ಏಕೆ ತೆಗೆದುಕೊಳ್ಳುತ್ತಿದ್ದ? ತೆಗೆದುಕೊಡು ಎಲೆ ನೀಲಾ [ತಾಯಿಯವರನ್ನು ಕೆಟ್ಟ ಬಯ್ಗುಳದಿಂದ ಬೈಯುವ ಪಾಪ ಮಾಡಬಾರದು ಎಂದು ಬಯ್ಗುಳವನ್ನು ಬಳಸಿಲ್ಲ. ಧರ್ಮಪಿತರಿಗೆ ಬಯ್ಯುವ ಹಕ್ಕಿದೆ. ಅನುಯಾಯಿಗಳಾದ ನಮಗೆ ಇಲ್ಲ.]

ಬಚ್ಚಿಟ್ಟುಕೊಂಡ ನಾನು ನಿಜವಾದ ಕಳ್ಳ; ಕಳವು ಮಾಡಲು ಬಂದ ಅವನು ತೋರಿಕೆಯ ಕಳ್ಳ, ಇವನು ಬೇರಾರೂ ಅಲ್ಲ ; ನನ್ನ ಆದರ್ಶವನ್ನು ಒರೆಗೆ ಹಚ್ಚಲು ಬಂದಿರುವ ಸಾಕ್ಷಾತ್ ಲಿಂಗದೇವರು."

ಗುರು ಬಸವಣ್ಣನವರು ಸ್ವಭಾವತಃ ಮೃದುಭಾಷಿಗಳು. ಇಂಥವರು ಹೆಂಡತಿಯನ್ನು ಚಂಡಾಲಗಿತ್ತಿ ಎಂದು ಬೈಯಬಹುದೆ ಎಂದು ಕೆಲವರು ಆಕ್ಷೇಪಿಸುತ್ತಾರೆ. ಈ ಪ್ರಸಂಗದಲ್ಲಿ ಗುರು ಬಸವಣ್ಣನವರ ಕೋಪವು ತಾರಕಕ್ಕೆ ಏರಿದೆ ಎಂಬುದು ಸ್ಪಷ್ಟವಾಗಿದೆ. ಕೋಪದ ಕಾರಣ ಒಂದು ಆದರ್ಶಕ್ಕೆ ಚ್ಯುತಿ ಬಂದಿರುವುದು. ಯಾವುದೇ ಸಂಪತ್ತನ್ನು ಹೊಂದಿರಬಾರದು ಎಂಬ ಸಮಾಜವಾದಿ ಸಿದ್ಧಾಂತಕ್ಕೆ ವಿರುದ್ಧವಾಗಿ ನೀಲಗಂಗಮ್ಮನವರು ಒಡವೆ (ಕಿವಿಯೋಲೆ)ಯನ್ನು ಧರಿಸಿರುವುದು. ಆ ಕೋಪದ ಭರದಲ್ಲಿ ಬಾಯಿಂದ ಬಯ್ಗುಳ ಬಂದಿರುವುದು ಅವರ ಧ್ಯೇಯ ಬದ್ಧತೆಯನ್ನು, ಬಡವರ ಬಗೆಗಿನ ಕಳಕಳಿಯನ್ನು, ಹೆಂಡತಿ ಸಮವೇಗದಿಂದ ಹೆಜ್ಜೆ ಹಾಕದಿರುವುದೂ ಕಾರಣವಾಗಿ ಕ್ಷಮ್ಯವೆನಿಸುತ್ತದೆ.

-- ಮುಂದುವರಿಯುವುದು.

'ನಾವು ಕನ್ನಡಿಗರು' ಪತ್ರಿಕೆಯ ಕೃಪೆಯಿಂದ

ಮಾನವ ಹಕ್ಕುಗಳು ಮತ್ತು ಬಸವ ತತ್ವ

-ಪ್ರೊ. ಎಸ್.ಮರುಳಸಿದ್ದಪ್ಪ
ಅರ್ಥಶಾಸ್ತ್ರ ಪ್ರಾಧ್ಯಾಪಕರು ಮತ್ತು ವಿಶ್ರಾಂತ ಪ್ರಾಂಶುಪಾಲರು

12ನೆ ಶತಮಾನದಲ್ಲಿ ಬಸವಾದಿ ಪ್ರಮಥರು ಮಾನವ ಹಕ್ಕುಗಳ ಪ್ರತಿಪಾದಕರಾಗಿ ಆಚರಣೆಗೊಳಿಸಿದ ಅವರ ಪಾತ್ರವು ಬಹಳ ಮಹತ್ವವುಳ್ಳದ್ದು. ಜೊತೆಗೆ ಅಭೂತಪೂರ್ವ ಸಾಧನೆ ಇದಾಗಿದೆ. ಭಾರತದ ಸಂವಿಧಾನವು ಕೂಡ ಈ ಮಾನವ ಹಕ್ಕುಗಳ ಅಂಶಗಳನ್ನು ಒಳಗೊಂಡಿರುವುದರಿಂದ ಬಸವಣ್ಣನವರ ವಚನಗಳು ಸಂವಿಧಾನದ ಜೀವಾಳವಾಗಿವೆ. ಅವರ ವಚನಗಳಂತೆ ನಡೆದರೆ ಅಂತರರಾಷ್ಟ್ರೀಯ ಮಟ್ಟದ ಮಾನವ ಹಕ್ಕುಗಳನ್ನು, ಮತ್ತೆ ನಮ್ಮ ದೇಶದ ಸಂವಿಧಾನವನ್ನು ಏಕ ಕಾಲಕ್ಕೆ ಗೌರವಿಸಿದಂತಾಗುತ್ತದೆ. ಬಸವಣ್ಣನವರ ವಚನಗಳಿಗೆ ವಿರುದ್ಧವಾಗಿ ನಡೆದರೆ ಸಂವಿಧಾನ ಬಾಹಿರ ಕೃತ್ಯವಾಗುತ್ತದೆ. ಅಲ್ಲದೆ ಅಂತರರಾಷ್ಟ್ರೀಯ ಮಾನವ ಹಕ್ಕುಗಳಿಗೆ ಅವಮಾನ ಮಾಡಿದಂತಾಗುತ್ತದೆ. ಕಲ್ಯಾಣ ಹತ್ಯಾಕಾಂಡಕ್ಕೆ ಕಾರಣವಾದ ಹರಳಯ್ಯ ಮಧುವರಸರ ಮಕ್ಕಳ ಮದುವೆಯನ್ನು ಇಂದು ಅಂತರರಾಷ್ಟ್ರೀಯ ಮಾನವ ಹಕ್ಕುಗಳು ಮತ್ತು ಭಾರತದ ಸಂವಿಧಾನ ಜೊತೆಯಾಗಿಯೇ ಗೌರವಿಸುತ್ತದೆ. ಅನುಭವ ಮಂಟಪದ ಮೂಲಕ ಸಂಸದೀಯ ಪ್ರಜಾಪ್ರಭುತ್ವದ ಬೀಜಗಳು ಈ ನೆಲದಲ್ಲಿ ಮೊಳಕೆ ಹೊಡೆದವು ಮತ್ತು ಮಾನವ ಹಕ್ಕುಗಳ ಹೂಗಳು ಅರಳಿ ಕಂಗೊಳಿಸಿದವು. ಹೀಗೆ ಬಸವಣ್ಣನವರು ಭಾರತದ ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಮೂಲ ಪುರುಷರಾದರು.

ಮಾನವ ಹಕ್ಕುಗಳು ಮಾನವನಿಗಾಗಿ ಪ್ರತಿಯೊಬ್ಬನು ಸ್ವತಂತ್ರವಾಗಿ, ಸುವ್ಯವಸ್ಥಿತವಾಗಿ, ಆರ್ಥಿಕ ಪ್ರಗತಿಗಾಗಿ, ರಾಜಕೀಯ ಸ್ವಾತಂತ್ರ್ಯಕ್ಕಾಗಿ, ಸಾಮಾಜಿಕ ಸ್ಥಿರತೆಗಾಗಿ, ಸಮಾನತೆಗಾಗಿ, ಒಳ್ಳೆಯ ವಾತಾವರಣಕ್ಕಾಗಿ, ರಾಷ್ಟ್ರೀಯ ಭಾವೈಕ್ಯತೆ ಹಾಗೂ ಸಹಕಾರ ಸಹಬಾಳ್ವೆ ಆರ್ಥಿಕ ಸಮಾನತೆ, ಸಾಮಾಜಿಕ ನ್ಯಾಯ ಸೋದರತ್ವದ ಸವಿಗಾಗಿ, ಸಂಯಮದ ಜೀವನಕ್ಕಾಗಿ, ಮಾನವನ ಹಸನಾದ ಬದುಕಿಗಾಗಿ, ಶಾಂತಿ, ಸಹನೆ, ಸಹಬಾಳ್ವೆ, 'ವಸುದೈವ ಕುಟುಂಬ'. 'ಸರ್ವೇಜನ ಸುಖಿನೋ ಭವಂತು' ಎಂಬ ಅಮೃತ ವಾಣಿಯಂತೆ, ಅರಿವು, ಆಚಾರ-ವಿಚಾರಗಳಿಂದ ಕೂಡಿ ನುಡಿ ನಡೆಗಳೊಂದಾದಂತೆ, 'ದಯವೇ ಧರ್ಮದ ಮೂಲವೆಂಬಂತೆ' ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವಂತೆ, ಪ್ರಸ್ತುತ ಹಾಗೂ ಮುಂದಿನ ಜನಾಂಗದ ಸಮೃದ್ಧ-ಆರ್ಥಿಕ ಬೆಳವಣಿಗೆಗೆ ಸಾರ್ವತ್ರಿಕ ಸುಸ್ಥಿರ ಕಲ್ಯಾಣಕ್ಕಾಗಿ, ರಚನೆಗೊಂಡಿರುವ ಬಸವ ತತ್ವಗಳು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಬುನಾದಿಯಾಗಿದೆ. ಬಸವಣ್ಣನವರ ಈ ವಿಚಾರಗಳು ಪಾಶ್ಚಿಮಾತ್ಯ ಜಗತ್ತಿಗೆ ಹೊಳೆಯಲು 20ನೇ ಶತಮಾನದವರೆಗೆ ಕಾಯಬೇಕಾಯಿತು.

ಜೊತೆಗೆ ಎರಡು ಮಹಾ ಯುದ್ಧಗಳನ್ನು ಎದುರಿಸಬೇಕಾಯಿತು. 1939-45ರ ಎರಡನೇ ಮಹಾಯುದ್ಧದಲ್ಲಿ ಸುಮಾರು ಐದು ಕೋಟಿ ಜನರು ಬಲಿಯಾದರು. ಈ ಯುದ್ಧದಲ್ಲಿ ಉಂಟಾದ ಭಾರೀ ಸಾವು ನೋವುಗಳು ವಿಧ್ವಂಸಕ ಕೃತ್ಯಗಳಿಂದುಂಟಾದ ಭಾರೀ ಪ್ರಮಾಣದ ಮನೆ, ಆಸ್ತಿ ಪಾಸ್ತಿಗಳ ನಾಶ ಇವುಗಳಿಂದ ಮನನೊಂದ ವಿಶ್ವನಾಯಕರು ಮುಂದೆ ಯುದ್ಧಗಳನ್ನು ಶಮನ ಮಾಡುವ ಮುಖ್ಯ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದ ವಿಶ್ವಸಂಸ್ಥೆ ಅಂತರ ರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಮೂಡಿಸುವಂತಹ ಘೋಷಣೆಯನ್ನು 1945ನೇ ಅಕ್ಟೋಬರ್ 24ರಂದು ಅಂಗೀಕರಿಸಿತು. ಅದಕ್ಕೆ 'ಚಾರ್ಟರ್ ಆಫ್ ದಿ ಯುನೈಟೆಡ್ ನೇಷನ್ಸ್' ಎಂದು ಕರೆಯುತ್ತಾನೆ.

ಮಾನವನ ಪ್ರಕೃತಿದತ್ತ ಹಕ್ಕುಗಳು, ರಾಜಕೀಯ, ಆರ್ಥಿಕ ಸಾಮಾಜಿಕ ನ್ಯಾಯ, ವಾಕ್ ಸ್ವಾತಂತ್ರ್ಯ, ಸರಿಸಮನಾದ ಗೌರವ, ಮನ್ನಣೆ, ಶೋಷಣೆ ವಿರುದ್ಧದ ಹಕ್ಕುಗಳು ಹಾಗೂ ಲಿಂಗ ಭೇದ, ಮತಭೇದ, ಧರ್ಮಭೇದ, ಭಾಷಾ ಭೇದದಂತಹ ತಾರತಮ್ಯಗಳನ್ನು ಕೊನೆಗಾಣಿಸಲು, ಮಾನವನ ಧಾರ್ಮಿಕ ನಂಬಿಕೆಗೆ, ಆಚರಣೆಗಳಿಗೆ, ವ್ಯವಸ್ಥೆಗೆ ತಡೆಯುಂಟಾಗದಂತೆ ಸವಿಸ್ತಾರವಾದ ಜನತೆಯ ಹಿತದೃಷ್ಟಿಯಿಂದ ವಿಶ್ವಸಂಸ್ಥೆಯ ಮಹಾಸಭೆಯು ಡಿಸೆಂಬರ್ 10, 1948ರಲ್ಲಿ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯನ್ನು ಒಕ್ಕೂಟದಿಂದ ಅಂಗೀಕರಿಸಿ ಅದೇ ದಿನದಂದು ಈ ಮಹಾಸಭೆಯು ಉದ್ಘೋಷಣೆ ಮಾಡಿತು. ಇದರ ಮೂಲಕ ವಿಶ್ವದ ಮಾನವರೆಲ್ಲರಲ್ಲಿ ನವ ಚೈತನ್ಯ ತುಂಬುವಂತಹ, ಜನರನ್ನು ಪ್ರೇರೇಪಿಸುವಂತಹ ಆಶಾ ಮನೋಭಾವವನ್ನು ಮೂಡಿಸುವ ಮೂಲಕ ಸದಸ್ಯ ರಾಷ್ಟ್ರಗಳು ತಮ್ಮ ತಮ್ಮ ಸಂವಿಧಾನಗಳು, ಕಾನೂನು ನೀತಿ ನಿಯಮಗಳನ್ನು ಇದಕ್ಕೆ ಸಂಬಂಧಿಸಿದ ಹಾಗೆ ರೂಪಿಸಿಕೊಂಡಿವೆ.

ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯು ತನ್ನದೇ ಆದ ಪ್ರಸ್ತಾವನೆಯನ್ನು ಹೊಂದಿದೆ. ಮಾನವ ಕುಲದ ಹಕ್ಕು ಮತ್ತು ಸ್ವಾತಂತ್ರ್ಯಕ್ಕಾಗಿ ನಡೆಸಿದ ಮೊದಲ ಅಂತರರಾಷ್ಟ್ರೀಯ ಪ್ರಯತ್ನ ಇದಾಗಿದೆ. ಎಲ್ಲಾ ದೇಶಗಳ ಜನ ಸಮುದಾಯಗಳನ್ನು ಮಾನವ ಘನತೆಯೊಂದಿಗೆ ಬೆಸೆಯುವ ಘೋಷಣೆ ಇದಾಗಿದೆ. ಮಹಿಳೆಯರು, ದಲಿತರು ಮತ್ತು ಕಾಯಕ ಜೀವಿಗಳ ಹಕ್ಕುಗಳನ್ನು ಬಸವಣ್ಣನವರ ಮಾನವ ಹಕ್ಕುಗಳು ಒಳಗೊಂಡಿವೆ.

12ನೇ ಶತಮಾನದಲ್ಲಿ ಜಗಜ್ಯೋತಿ ಬಸವೇಶ್ವರರು ಈ ಎಲ್ಲ ಹಕ್ಕುಗಳ ಬಗ್ಗೆ ವಚನಗಳ ರೂಪದಲ್ಲಿ ಪ್ರಸ್ತುತಪಡಿಸುವುದರ ಜೊತೆಗೆ ಆಚರಣೆಗೊಳಿಸಿದ ಅವರ ಕಾರ್ಯದಕ್ಷತೆ ಮತ್ತು ಕಾರ್ಯನಿಷ್ಠೆ ವಿಶ್ವದ ಇತಿಹಾಸದ ಪುಟಗಳಲ್ಲಿ ಸೇರಬೇಕಾಗಿದೆ. ಮಹಿಳೆಯರ, ಕಾರ್ಮಿಕರ ಮತ್ತು ಬಿಳಿಯರ ಹಕ್ಕುಗಳ ಬಗ್ಗೆ 20ನೇ ಶತಮಾನದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಬಸವ ಧರ್ಮ ಮೇಲ್ಪಂಕ್ತಿಯಾಗಿದೆ. ಮಾನವ ಹಕ್ಕುಗಳನ್ನು ಅಹಿಂಸಾ ಹೋರಾಟದ ಮೂಲಕ ಸಾಧಿಸಬೇಕಾದ ಕಲೆಯನ್ನು ಬಸವಣ್ಣನವರು ಕಲ್ಪಿಸಿಕೊಟ್ಟಿದ್ದಾರೆ. ಇತ್ತೀಚಿನ ದಿನಗಳಲ್ಲಿ ವಿಶ್ವದಲ್ಲಿಯೇ ಮಾನವ ಹಕ್ಕುಗಳನ್ನು ಭಾರೀ ಪ್ರಮಾಣದಲ್ಲಿ ಉಲ್ಲಂಘಿಸುತ್ತಿರುವುದರ ಬಗ್ಗೆ ಬಸವ ತತ್ವಗಳು ವಿಶ್ವಕ್ಕೆ ಈ ಎಲ್ಲಾ ರೀತಿಯ ಕ್ರೌರ್ಯಗಳಿಂದ ಮಾನವ ಜನಾಂಗವನ್ನು ರಕ್ಷಿಸುವುದು, ವರ್ಗ, ವರ್ಣ, ಜಾತಿ, ಕುಲ, ವೃತ್ತಿ(ಕಾಯಕ) ಮತ್ತು ಲಿಂಗ ಭೇದವಿಲ್ಲದೆ ಎಲ್ಲರನ್ನೂ ಸಮಾನತೆ ಸಾಧಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

1762ರಲ್ಲಿ ರೂಸೋನ ಸ್ವಾತಂತ್ರ್ಯ ಸಮಾನತೆ ಮತ್ತು ಸಹೋದರತ್ವದ ಘೋಷಣೆಯು ಫ್ರೆಂಚ್ ಕ್ರಾಂತಿಗೆ ಕಾರಣವಾಯಿತು. 'ಮೌಢ್ಯವು ಮಹಿಳೆಯರಿಗೆ ಸಂಪೂರ್ಣ ಲಾಭದಾಯಕವಾಗಿದೆ ಎಂದು ಪ್ರತಿಪಾದಿಸಿದ ರೂಸೋ ಮಹಿಳೆಯರು ರಾಜಕೀಯದಲ್ಲಿ ಇರಬಾರದು ಎಂದೂ ಸಹ ಹೇಳಿದ. ಹೀಗೆ ಜಗತ್ತಿನ ಎಲ್ಲ ರಾಷ್ಟ್ರಗಳು ಪುರುಷ ಪ್ರಧಾನವಾದ ಸಮಾಜವಾಗಿದ್ದು ಮಹಿಳೆಯರು ಪುರುಷರ ಅಡಿಯಾಳಾಗಿ ಜೀವಿಸಬೇಕಾಯಿತು. ಫ್ರೆಂಚ್ ಕ್ರಾಂತಿಯ ನಂತರ 1789ರಲ್ಲಿ ನಾಗರೀಕ ಹಕ್ಕುಗಳು ಸೇರ್ಪಡೆಯಾಗದಿದ್ದರಿಂದ ಫ್ರೆಂಚ್ ಕ್ರಾಂತಿ ಮೇಲ್ವರ್ಗದ ಪುರುಷ ಪ್ರಧಾನ ಕ್ರಾಂತಿಯಾಗಿ ಮಾರ್ಪಟ್ಟಿತು. ನಂತರ ಅಮೆರಿಕದ ಸ್ವಾತಂತ್ರ್ಯ ಘೋಷಣೆ ಕೂಡ ಮೇಲ್ವರ್ಗದ ಪುರುಷ ಪ್ರಧಾನವಾದ ರಾಷ್ಟ್ರವಾಗಿದ್ದು ಸ್ವಾತಂತ್ರ್ಯ ಮತ್ತು ಸಮಾನತೆ ಶ್ರೀಮಂತ ಪುರುಷರಿಗಾಗಿ ಮಾತ್ರ ಸೀಮಿತವಾಗಿದ್ದು ಮಹಿಳೆಯರು, ಗುಲಾಮರು ಮತ್ತು ಆಸ್ತಿ ಇಲ್ಲದ ಬಡವರು ಈ ಹಕ್ಕುಗಳಿಂದ ವಂಚಿತರಾಗಿದ್ದರು. ಮಾನವ ಹಕ್ಕುಗಳ ಜಾಗತಿಕ ಘೋಷಣೆಯ ಅಂಗೀಕಾರದ ಸಂದರ್ಭದಲ್ಲಿ ಮಹಿಳೆಯರ ಹಕ್ಕುಗಳು ಮತ್ತು ಲಿಂಗ ತಾರತಮ್ಯ ಸೇರ್ಪಡೆಯಾಗದ ಬಗ್ಗೆ ಮಹಿಳಾ ಪ್ರತಿನಿಧಿಗಳು ಪ್ರತಿಭಟನೆ ಮಾಡಿದರು. ಲಿಂಗ ಭೇದವಿಲ್ಲದ

ಮಾನವ ಹಕ್ಕುಗಳಿಗಾಗಿ ಒತ್ತಾಯಿಸಿದರು. ಈ ಹೋರಾಟದ ಯಶಸ್ಸಿನಿಂದ ಲಿಂಗ ಭೇದವಿಲ್ಲದ ಮಾನವ ಹಕ್ಕುಗಳ ವಿಚಾರವನ್ನು ವಿಶ್ವ ಸಂಸ್ಥೆಯ ಘೋಷಣೆಯಲ್ಲಿ ಸೇರಿಸಲಾಯಿತು. ಪುರುಷ ಮತ್ತು ಮಹಿಳೆಯರ ಮಧ್ಯೆ ಸಮಾನತೆ ಸಾರುವ ವಿಶ್ವದ ಮೊದಲ ಘೋಷಣೆಯಾಯಿತು. ಆದರೆ ಬಸವಣ್ಣನವರು 'ಶರಣ ಸತಿ ಲಿಂಗ ಪತಿ' ಘೋಷಣೆ ಮೂಲಕ ಲಿಂಗ ತಾರತಮ್ಯವನ್ನು ಆಧ್ಯಾತ್ಮಿಕವಾಗಿಯೂ ನಿವಾರಿಸಿ ಪುರುಷ ಮತ್ತು ಮಹಿಳೆಯರ ಮಧ್ಯೆ ಸಮಾನತೆ ಸಾಧಿಸಿದ್ದು ಕಾಯಕದ ಘೋಷಣೆಯೊಂದಿಗೆ ಯಾವುದೇ ಕಾಯಕ ಕೀಳಲ್ಲ ಎಂಬ ಅರಿವು ಮೂಡಿಸಿದರು. ಜೀವನ ನಿರ್ವಹಣೆಗೆ ಸತ್ಯ ಶುದ್ಧವಾದ ಕಾಯಕವೊಂದು ಇರಲೇಬೇಕು. ನಡೆಸುವ ಕಾಯಕದಲ್ಲಿ ಮೋಸ, ವಂಚನೆಗಳಿರಬಾರದು. ಕಾಯಕದಲ್ಲಿ ಎಲ್ಲರೂ, ಎಲ್ಲವೂ ಸಮಾನ, ಮೇಲು ಕೀಳೆಂಬುದಿಲ್ಲ. ಮಾನವನು ಅಹಂಕಾರದಿಂದ ಮುಕ್ತನಾಗಿ ಸೇವಾ ವೃತ್ತಿಯಿಂದ ಇದ್ದಾಗ ಸಮಾಜವು ಎಲ್ಲಾ ರೀತಿಯ ಕೊರತೆ ಮತ್ತು ಹಿಂಸೆಯಿಂದ ಮುಕ್ತವಾಗುವುದೆಂಬುದನ್ನು ದಾಸೋಹದ ಘೋಷಣೆಯೊಂದಿಗೆ ತೋರಿಸಿಕೊಟ್ಟರು. ಹೆಣ್ಣಿರಲಿ-ಗಂಡಿರಲಿ, ಬಡವನಿರಲಿ, ಶ್ರೀಮಂತನಿರಲಿ, ಸವರ್ಣೀಯನಿರಲಿ, ಅಸ್ಪೃಶ್ಯನಿರಲಿ, ಜಗತ್ತಿನ ಜನರೆಲ್ಲ ದೇವರ ಚೈತನ್ಯದಿಂದ ಕೂಡಿದವರು ಎಂಬುದನ್ನು ಜಂಗಮಲಿಂಗದ ಘೋಷಣೆಯ ಮೂಲಕ ಎತ್ತಿಹಿಡಿದರು. ಯಾವುದೇ ರೀತಿಯ ಅಸಮಾನತೆ, ತಾರತಮ್ಯ ಕೃತ್ರಿಮವಾದುದೆಂದು ಸಾರಿದರು. ಹೀಗಾಗಿ ಬಸವಣ್ಣನವರ ಶರಣ ಸಂಕುಲದಲ್ಲಿ ಅಸ್ಪೃಶ್ಯರು, ಮಹಿಳೆಯರು, ಬಡವರು ಮತ್ತು ಎಲ್ಲಾ ಕಾಯಕ ಜೀವಿಗಳು ಸರ್ವ ಸಮಾನತೆಯನ್ನು ಅನುಭವಿಸಿದರು. ಬ್ರಾಹ್ಮಣ ಕುಲದ ಮಧುವರಸರು ಶರಣರಾಗುವ ಮೂಲಕ ಮೇಲ್ಜಾತಿಯ ಅಹಂಕಾರದಿಂದ ಮುಕ್ತರಾಗಿದ್ದರು. ಸಮಗಾರ ಹರಳಯ್ಯನವರು ಶರಣರಾಗುವ ಮೂಲಕ ಕೀಳು ಜಾತಿಯ ಕೀಳರಿಮೆಯಿಂದ ಮುಕ್ತರಾಗಿದ್ದರು.

ಹೀಗೆ ವಿವಿಧ ಜಾತಿಗಳ ಸಂಕರವಾದಂತಹ ಶರಣ ಸಂಕುಲ ಎಲ್ಲಾ ರೀತಿಯ ಅಸಮಾನತೆಯನ್ನು ಮೆಟ್ಟಿ ನಿಂತು ಮಾನವ ಹಕ್ಕುಗಳ ಧ್ವಜವನ್ನು ಹಾರಿಸಿದ ಸರ್ವ ಸಮಾನತೆಯ ಸಮಾಜವಾಗಿತ್ತು. ಇವರೆಲ್ಲರೂ ತಮ್ಮ ಜಾತಿ, ಉಪಜಾತಿ, ಕುಲ, ಗೋತ್ರಗಳಿಂದ ಕೂಡಿದ ಜಾತಿಗಳನ್ನು ಮನಸ್ಸಿನಿಂದ ಅಳಿಸಿಹಾಕಿ ಕಾಯಕ ಯೋಗಿಗಳಾಗಿದ್ದರು. ಗಂಡ ಮತ್ತು ಹೆಂಡಂದಿರಲ್ಲಿ ಮೇಲು ಕೀಳಿನ ಅನುಚರ ಭಾವಹೋಗಿ ಸಮಾನತೆಯ ಸಮಚರ ಭಾವ ಮೂಡಿತ್ತು. ಹೀಗೆ ವರ್ಗ, ವರ್ಣ, ಜಾತಿ, ಕುಲ, ಕಾಯಕ ಮತ್ತು ಲಿಂಗ ಭೇದಗಳಿಲ್ಲದೆ ಎಲ್ಲರನ್ನೂ ಒಂದಾಗಿಸಿ ಸಮಾನತೆ ಸಾಧಿಸಿದ್ದು ಮಾನವ ಇತಿಹಾಸದ ಬಹು ಮುಖ್ಯ ಘಟನೆಗಳಲ್ಲಿ ಒಂದಾಗಿದೆ. 12ನೇ ಶತಮಾನದಲ್ಲಿ ಬಸವ ತತ್ವದ ವಿಚಾರಗಳು 20ನೇ ಶತಮಾನದ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಗಳ ಎಲ್ಲಾ 30 ಅಂಶಗಳನ್ನು ಒಳಗೊಂಡಿರುವುದರ ಬಗ್ಗೆ ಈ ಕೆಳಗಿನ ವಿಚಾರಗಳಿಂದ ತಿಳಿಸಲಾಗಿದೆ.

ನಾಗರಿಕ ಮತ್ತು ರಾಜಕೀಯ ಹಕ್ಕುಗಳು:

ಮಾನವ ಹಕ್ಕುಗಳ ವಿಶ್ವ ಘೋಷಣೆಯ ಮೊದಲನೆಯ ವಿಧಿಯು ತಿಳಿಸುವುದೇನೆಂದರೆ,

1. ಮಾನವರೆಲ್ಲರೂ ಜನ್ಮತಃ ಸ್ವತಂತ್ರರು ಹಾಗೂ ಗೌರವ ಮತ್ತು ಹಕ್ಕುಗಳಿಗೆ ಸಂಬಂಧಿಸಿದಂತೆ ಸಮಾನರಾಗಿದ್ದಾರೆ. ಅವರ ವಿಚಾರಶೀಲತೆ ಮತ್ತು ಆತ್ಮ ಸಾಕ್ಷಿಯಿಂದ ಸಂಪನ್ನರಾಗಿದ್ದು ಪರಸ್ಪರರೊಂದಿಗೆ ಸೋದರತ್ವದ ಅಂತಃಕರಣದ ಸ್ಫೂರ್ತಿಯನುಸಾರ ನಡೆದುಕೊಳ್ಳಬೇಕು. 'ಕೂಡಲಸಂಗನ ಶರಣರು ಸ್ವತಂತ್ರ ಧೀರರು' ಜನ್ಮತಃ ಸ್ವತಂತ್ರ ಸಮಾನರು ಎಂದು ಬಸವಣ್ಣನವರು ತಿಳಿಸಿದ್ದಾರೆ. 'ಕುಲಕ್ಕೆ ತಿಲಕ ನಮ್ಮ ಮಾದಾರ ಚನ್ನಯ್ಯ ನಿಮ್ಮಿಂದಧಿಕ ನೋಡಾ ಕೂಡಲಸಂಗಮದೇವಾ' ಎಂದು ಹೇಳುವ ಮೂಲಕ ಗೌರವ ಮತ್ತು ಹಕ್ಕುಗಳನ್ನು

ಸಮಾನಾಗಿ ಪಡೆದು ಮಾನವ ಘನತೆಯನ್ನು ಎತ್ತಿ ಹಿಡಿದಿದ್ದಾರೆ.

2. ಎರಡನೇ ವಿಧಿಯ ಪ್ರಕಾರ ಯಾವುದೇ ರೀತಿಯ ಭೇದಭಾವ ಇಲ್ಲದೆ ಪ್ರತಿಯೊಬ್ಬರೂ ಈ ಘೋಷಣೆಯಲ್ಲಿರುವ ಹಕ್ಕು ಮತ್ತು ಸ್ವಾತಂತ್ರ್ಯಗಳಿಗೆ ಅರ್ಹನು(ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ ಕೂಡಲ ಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯ) ಎಂದು ಬಸವಣ್ಣನವರು ಹೇಳಿದ್ದಾರೆ. ಕುದುರೆ ಸತ್ತಿಗೆಯವರು ಕಂಡಡೆ ಹೊರಳಿ ಬಿದ್ದು ಕಾಲ ಹಿಡಿವರು; ಬಡ ಭಕ್ತರು ಬಂದಡೆ ಎಡೆಯಿಲ್ಲ ಅತ್ತ ಸರಿ ಎಂಬರು' ಎಂದು ಸಾತ್ವಿಕ ಕೋಪ ತೋರಿಸಿದ್ದಾರೆ.

3. ರಾಷ್ಟ್ರದ ಪ್ರತಿಯೊಬ್ಬ ಪ್ರಜೆಗೂ ಜೀವಿಸುವ ಹಕ್ಕು, ಸ್ವಾತಂತ್ರ್ಯದ ಮತ್ತು ವೈಯಕ್ತಿಕ ರಕ್ಷಣೆಯ ಹಕ್ಕು ಇವೆ. (ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ ಕಾಗೆ ಕೋಳಿಯಿಂದ ಕರಕಷ್ಟ) ಎಂದು ಬಸವಣ್ಣನವರು ತಿಳಿಸಿದ್ದಾರೆ. ಬಸವಣ್ಣನವರ ಭಕ್ತಿ ಪಕ್ಷವು ಪ್ರತಿಯೊಬ್ಬರಿಗೂ ಬದುಕುವ ಸ್ವತಂತ್ರವಾಗಿರುವ ಮತ್ತು ಭದ್ರತೆಯ ಹಕ್ಕನ್ನು ಕೊಡುವುದು.

4. ಯಾರನ್ನೂ ಸಹ ಗುಲಾಮಗಿರಿಯಲ್ಲಿ ತೊಡಗಿಸಕೂಡದು ದಾಸ್ಯತ್ವ ಮತ್ತು ಗುಲಾಮರ ವ್ಯಾಪಾರಕ್ಕೆ ಸಂಬಂಧಿಸಿದ ಎಲ್ಲಾ ವಿಧಿಗಳನ್ನು ನಿಷೇಧಿಸಲಾಗಿದೆ. (ದಾಸಿಪುತ್ರನಾಗಲಿ, ವೇಶ್ಯಾಪುತ್ರನಾಗಲಿ, ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ, ಪೂಜಿಸಿ ಪಾದೋದಕ ಪ್ರಸಾದ ಕೊಂಬುದೇ ಯೋಗ ಎಂದು ಬಸವಣ್ಣನವರು ಎಲ್ಲರ ಘನತೆ ಒಂದೇ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

5. ಯಾರನ್ನೂ ಚಿತ್ರಹಿಂಸೆಗೆ ಅಥವಾ ಕ್ರೂರ, ಅಮಾನುಷ ಅಥವಾ ಹೀನಾಯವಾದ ನಡವಳಿಕೆ? ಶಿಕ್ಷೆಗೆ ಒಳಪಡಿಸತಕ್ಕದ್ದಲ್ಲ. (ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ನಮ್ಮ ಕೂಡಲ ಸಂಗಮ ಶರಣರೇ ಕುಲಜರು' ಎಂದು ಬಸವಣ್ಣನವರು ಹೇಳುವುದರ ಮೂಲಕ ಕ್ರೌರ್ಯ ಮತ್ತು ಅಮಾನುಷ ನಡವಳಿಕೆಯನ್ನು ವಿರೋಧಿಸಿದ್ದಾರೆ).

6. ಪ್ರತಿಯೊಬ್ಬನಿಗೂ ಎಲ್ಲ ಕಡೆಯಲ್ಲೂ ಕಾನೂನಿನ ಎದುರಿನಲ್ಲಿ ಒಬ್ಬ ವ್ಯಕ್ತಿಯಂತೆ ಗುರ್ತಿಸಿಕೊಳ್ಳುವಂತಹ ಹಕ್ಕು ಇದೆ (ಶರಣರು ಈ ಹಕ್ಕಿನ ಪರವಾಗಿದ್ದರು. ಆದರೆ ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆಗೆ ಸಂಬಂಧಿಸಿದಂತೆ ಅವರಿಗೆ ತಮ್ಮ ವಿಚಾರ ವ್ಯಕ್ತ ಪಡಿಸಲು ಅವಕಾಶ ಕೊಡದೆ ಚಿತ್ರಹಿಂಸೆ ನೀಡಲಾಯಿತು.

7. ಯಾವುದೇ ರೀತಿಯ ತಾರತಮ್ಯಯವಿಲ್ಲದೆ ಎಲ್ಲರೂ ಕಾನೂನಿನ ಮುಂದೆ ಸಮಾನರು ಮತ್ತು ಎಲ್ಲರಿಗೂ ಕಾನೂನಿನ ಸಮಾನ ರಕ್ಷಣೆಯಿರುತ್ತದೆ (ನ್ಯಾಯ ನಿಷ್ಠುರಿ, ದಾಕ್ಷಿಣ್ಯ ಪರ ನಾನಲ್ಲ, ಲೋಕವಿರೋಧಿ, ಶರಣನಾರಿಗಂಜುವುದಿಲ್ಲ. ಕೂಡಲ ಸಂಗಮದೇವರ ರಾಜತೇಜದಲ್ಲಿಪ್ಪೆನಾಗಿ) ಎಂದು ಹೇಳುವುದರ ಮೂಲಕ ಬಸವಣ್ಣನವರು ಕಾನೂನಿನ ಮುಂದೆ ಎಲ್ಲರೂ ಒಂದೇ ಎಂಬುದನ್ನು ಸಾರಿದ್ದಾರೆ.

8. ಸಂವಿಧಾನ ಅಥವಾ ಕಾನೂನುಗಳಿಂದ ಪ್ರತಿಯೊಬ್ಬ ವ್ಯಕ್ತಿಗೂ ಇರಬಹುದಾದ ಮೂಲಭೂತ ಹಕ್ಕುಗಳ ಉಲ್ಲಂಘನೆಯಾದರೆ, ಸಂಬಂಧಪಟ್ಟ ರಾಷ್ಟ್ರೀಯ ನ್ಯಾಯ ಮಂಡಳಿಯು ಸೂಕ್ತವಾದ ಪರಿಹಾರವನ್ನು ನೀಡಬೇಕು (ಆನೀ ಬಿಜ್ಜಳಂಗಜುವೆನೆ ಅಯ್ಯ? ಕೂಡಲ ಸಂಗಮದೇವ' ಎಂದು ಬಸವಣ್ಣನವರು ಪ್ರಧಾನಿಯಾಗಿ ಅರಸ ಬಿಜ್ಜಳನ ಬಗ್ಗೆ ಹೇಳುತ್ತಾ ತಮ್ಮ ಹಕ್ಕಿನ ಪ್ರತಿಪಾದನೆ ಮಾಡಿದ್ದಾರೆ).

9. ಕಾರಣವನ್ನು ತಿಳಿಸದೆ ಯಾರನ್ನೂ ಸ್ವೇಚ್ಛಾನುಸಾರವಾಗಿ ದಸ್ತಗಿರಿ ಮಾಡುವುದು, ಶಿಕ್ಷೆಗೆ ಗುರಿಪಡಿಸುವುದು, ಬಹಿಷ್ಕಾರ ಹಾಕುವುದು ಹಾಗೂ ಗಡಿಪಾರು ಮಾಡತಕ್ಕದ್ದಲ್ಲ

(ಶೀಲವಂತ ಮತ್ತು ಲಾವಣ್ಯವತಿಯರ ವಿವಾಹದ ಕಾರಣ ಬಿಜ್ಜಳನು ಅವರ ತಂದೆಯಂದಿರಾದ ಸಮಗಾರ ಹರಳಯ್ಯ ಮತ್ತು ಬ್ರಾಹ್ಮಣ ಮಧುವರಸರನ್ನು ಬಂಧಿಸಿದನು. ಶರಣ ತತ್ವದ ಪ್ರಕಾರ ಅವರಲ್ಲಿ ಜಾತಿಭೇದವಿಲ್ಲ. ಆದರೆ ಬಿಜ್ಜಳ ಒಪ್ಪಿದ ವೈದಿಕ ತತ್ವದ ಪ್ರಕಾರ ಅದು ಅಂತರ್ಜಾತೀಯ ವಿವಾಹವಾಗಿತ್ತು. ಹೀಗೆ ಆತ ತನ್ನ ಮನಸ್ಸಿಗೆ ಬಂದಂತೆ ಅಮಾಯಕರನ್ನು ಬಂಧಿಸಿ, ಶಿಕ್ಷೆಯನ್ನು ವಿಧಿಸಿದ).

10. ಹಕ್ಕು ಮತ್ತು ಬಾಧ್ಯತೆಗಳ ಅಪರಾಧದ ಆರೋಪದ ವಿಚಾರಗಳಲ್ಲಿ ಸ್ವತಂತ್ರ ಮತ್ತು ನಿಷ್ಪಕ್ಷಪಾತ ನ್ಯಾಯ ಮಂಡಳಿಯು ಮುಕ್ತವಾಗಿ ಮನವಿಯನ್ನು ಸ್ವೀಕರಿಸುವ ಹಕ್ಕನ್ನು ವ್ಯಕ್ತಿಯು ಹೊಂದಿದ್ದಾನೆ (ಬಿಜ್ಜಳನು ಶರಣರಿಗೆ ನ್ಯಾಯ ಪಡೆಯುವ ಹಕ್ಕನ್ನೂ ನಿರಾಕರಿಸಿ ಹಿಂಸೆಗೆ ಒಳಪಡಿಸಿದ ಕಾರಣ ಕಲ್ಯಾಣದಲ್ಲಿ ಶರಣರ ಹತ್ಯಾಕಾಂಡವಾಯಿತು).

11. ಅಪರಾಧವನ್ನು ನಿರೂಪಿಸಿ ನಿರ್ಧರಿಸುವಲ್ಲಿ, ಸಾರ್ವಜನಿಕವಾಗಿ ನ್ಯಾಯಾಂಗವೂ ಇತ್ಯರ್ಥ ಮಾಡುವುದರ ಹಾಗೂ ಅದು ಸಾಬೀತಾಗುವವರೆಗೂ ಕಾನೂನಿನ ಅನುಸಾರ ಅಪರಾಧವೆಂದು ಪರಿಗಣಿಸದ ಕೃತ್ಯಕ್ಕೆ ಶಿಕ್ಷಿಸುವಂತಿಲ್ಲ (ಈ ಹಕ್ಕು ಶರಣರಿಗೆ ಸಿಗುವಂತಹ ನ್ಯಾಯ ಪದ್ಧತಿ ಬಿಜ್ಜಳನ ರಾಜ್ಯದಲ್ಲಿ ಇರಲಿಲ್ಲ. ಏಕೆಂದರೆ ಆತ ಅನ್ಯಾಯ ಮತ್ತು ಅಸಮಾನತೆಯಲ್ಲಿ ನಂಬಿಕೆ ಇಟ್ಟವರ ಒತ್ತಡಕ್ಕೆ ಮಣಿದಿದ್ದ).

12. ಏಕಾಂತ, ಸಾಂಸಾರಿಕ ಗೃಹ ಅಥವಾ ಪತ್ರ ವ್ಯವಹಾರದ ಹಕ್ಕನ್ನು ವ್ಯಕ್ತಿ ಹೊಂದಿದ್ದಾನೆ (ಕೂಡಲ ಸಂಗಮದೇವಾ ಭಕ್ತರ ಕುಲವನರಸಿದಡೆ ನಿಮ್ಮ ರಾಣಿವಾಸದಾಣೆ) ಎಂದು ಬಸವಣ್ಣನವರು ಹೇಳುತ್ತಾರೆ.

13. ದೇಶದ ಎಲ್ಲೆಡೆ ಸಂಚಾರ ಮಾಡುವ ಸ್ವಾತಂತ್ರ್ಯ ಹಾಗೂ ತನ್ನ ವಾಸಸ್ಥಳವನ್ನು ಗಡಿಪ್ರದೇಶದೊಳಗೆ ತಾನೇ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯದ ಹಕ್ಕನ್ನು ವ್ಯಕ್ತಿಯು ಹೊಂದುತ್ತಾನೆ. ಮನುಸ್ಮೃತಿಯ ಪ್ರಕಾರ ಅಸ್ಪೃಶ್ಯರು ಈ ಹಕ್ಕನ್ನು ಕಳೆದುಕೊಂಡಿದ್ದರು. ಬಸವಣ್ಣನವರು 'ಜಾತಿಸಂಕರವಾದ ಬಳಿಕ ಕುಲವನರಸುವರೆ?' ಎಂದು ಪ್ರಶ್ನಿಸಿ ಎಲ್ಲರಿಗೂ ಮುಕ್ತವಾಗಿ ಸಂಚರಿಸುವ ಹಕ್ಕು ಬರುವಂತೆ ಮಾಡಿದರು.

14. ದೇಶದೊಳಗಡೆ ದ್ವೇಷ, ಅಸೂಯೆಗಳಿಂದ ಕಿರುಕುಳ ನೀಡುತ್ತಿದ್ದರೆ ಅನ್ಯ ರಾಷ್ಟ್ರದಲ್ಲಿ ಆಶ್ರಯ ಪಡೆಯುವ ಹಕ್ಕನ್ನು ಹೊಂದಿದ್ದಾನೆ. ಕಲ್ಯಾಣದಲ್ಲಿ ಶರಣರ ಹತ್ಯಾಕಾಂಡ ನಡೆದ ಸಂದರ್ಭದಲ್ಲಿ ಅನೇಕ ಶರಣರು ನೆರೆಯ ದೇಶಗಳಲ್ಲಿ ಆಶ್ರಯ ಪಡೆದರು.

15. ಪ್ರತಿಯೊಬ್ಬನೂ ರಾಷ್ಟ್ರೀಯತೆಯ ಹಕ್ಕನ್ನು ಹೊಂದಿದ್ದಾನೆ (ಇಂದಿನ ರಾಷ್ಟ್ರೀಯತೆಯ ಕಲ್ಪನೆ ಹಿಂದಿನ ಕಾಲದಲ್ಲಿ ಇರದಿದ್ದರೂ ಕಾಶ್ಮೀರದ ಮಹಾದೇವ ಭೂಪಾಲ-ಮೋಳಿಗೆ ಮಾರಯ್ಯ ಮುಂತಾದವರು ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ಸ್ಥಾನ ಪಡೆದಿದ್ದರು).

16. ವಿವಾಹವನ್ನು ಮಾಡಿಕೊಳ್ಳುವ ಮತ್ತು ಕುಟುಂಬವೊಂದನ್ನು ಸ್ಥಾಪನೆ ಮಾಡಿಕೊಳ್ಳುವ ಹಕ್ಕು (ದೇಶ, ಕುಲ ಮತ್ತು ಧರ್ಮಗಳನ್ನು ಮೀರಿ ಮದುವೆ ಮಾಡಿಕೊಳ್ಳುವ ಹಕ್ಕಿದೆ. ಈ ಹಕ್ಕನ್ನು ಶರಣರು ಚಲಾಯಿಸಿದ ಕಾರಣ ಹರಳಯ್ಯ ಮಧುವರಸರಿಗೆ ಶಿಕ್ಷೆ ವಿಧಿಸಲಾಯಿತು.)

17. ಪ್ರತಿಯೊಬ್ಬರಿಗೂ ಆಸ್ತಿಯ ಹಕ್ಕಿದೆ (ನಾನು ಆರಂಬವ ಮಾಡುವೆನಯ್ಯಾ ಗುರು ಪೂಜೆಗೆಂದು, ನಾನು ಬೆವಹಾರವ ಮಾಡುವೆನಯ್ಯ ಲಿಂಗಾರ್ಚನೆಗೆಂದು, ನಾನು ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು ಎಂದು ಬಸವಣ್ಣನವರು ಹೇಳಿರುತ್ತಾರೆ. ಅವರು ಆಸ್ತಿಯ ಹಕ್ಕಿನೊಂದಿಗೆ ಸಾಮಾಜಿಕ ಜವಾಬ್ದಾರಿಯ ಬಗ್ಗೆಯೂ ತಿಳಿಸುತ್ತಾರೆ.

18. ಯೋಚಿಸುವ, ವಿವೇಚಿಸುವ ಮತ್ತು ಧಾರ್ಮಿಕ ಹಕ್ಕು (ಪ್ರತಿಯೊಬ್ಬರೂ ವಿಚಾರ ಸ್ವಾತಂತ್ರ್ಯ ಮತ್ತು ಧಾರ್ಮಿಕ ಸ್ವಾತಂತ್ರ್ಯ ಪಡೆದಿದ್ದಾರೆ. ಬಸವ ಧರ್ಮ ವಿಚಾರ ಸ್ವಾತಂತ್ರ್ಯದ ಮೇಲೆ ನಿಂತಿದೆ. 'ಗಂಡ ಶಿವಲಿಂಗ ದೇವರ ಭಕ್ತ, ಹೆಂಡತಿ ಮಾರಿ ಮಸಣಿಯ ಭಕ್ತೆ', ಗಂಡ ಕೊಂಬುದು ಪಾದೋದಕ ಪ್ರಸಾದ, ಹೆಂಡತಿ ಕೊಂಬುದು ಸುರೆಮಾಂಸ, ಭಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ' ಹೆಂಡದ ಮಡಿಕೆಯ ಹೊರಗೆ ತೊಳೆದಂತೆ ಕೂಡಲ ಸಂಗಮದೇವಾ' ಎಂದು ಬಸವಣ್ಣನವರು ಹೇಳುವಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಸೂಚನೆ ಇದೆ).

19. ಪ್ರತಿಯೊಬ್ಬರೂ ಅಭಿಪ್ರಾಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಪಡೆದಿದ್ದಾರೆ (ಪ್ರತಿಯೊಬ್ಬ ಶರಣರು ಅನುಭವ ಮಂಟಪದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅನುಭವಿಸಿದ್ದು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಿದ್ದಾರೆ).

20. ಶಾಂತಯುತವಾಗಿ ಸಭೆ ಸೇರುವ ಮತ್ತು ಸಂಘ ಸ್ಥಾಪನೆಯ ಸ್ವಾತಂತ್ರ್ಯದ ಹಕ್ಕುಗಳು. ಪ್ರತಿಯೊಬ್ಬರೂ ಶಾಂತಿಯುತವಾಗಿ ಸಭೆ ಸೇರುವ ಸ್ವಾತಂತ್ರ್ಯ ಹೊಂದಿದ್ದಾರೆ. (ಅನುಭವ ಮಂಟಪವು ಶಾಂತಿಯುತವಾಗಿ ಸಭೆ ಸೇರುವ ತಾಣವಾಗಿದ್ದಿತು. ಈ ಸ್ವಾತಂತ್ರ್ಯವನ್ನು ಶರಣರು ತಮ್ಮ ಜವಾಬ್ದಾರಿಯುತ ನಡವಳಿಕೆಯಿಂದ ಸಾಧಿಸಿದ್ದರು.)

21. ಸರ್ಕಾರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಹಕ್ಕು ನಮ್ಮ ದೇಶದ ಸರ್ಕಾರದಲ್ಲಿ ಭಾಗಿಯಾಗುವ ಹಕ್ಕನ್ನು ಪ್ರತಿಯೊಬ್ಬರೂ ಪಡೆದಿದ್ದಾರೆ (ಬಸವಣ್ಣನವರು ಬಿಜ್ಜಳನ ಪ್ರಧಾನಿಯಾಗಿದ್ದರು).

ಸಾಮಾಜಿಕ ಮತ್ತು ಆರ್ಥಿಕ ಮಾನವ ಹಕ್ಕುಗಳು :

22. ಸಾಮಾಜಿಕ ಭದ್ರತೆ ಮತ್ತು ವ್ಯಕ್ತಿತ್ವದ ವಿಕಸನದ ಹಕ್ಕು (ಪ್ರತಿಯೊಬ್ಬರೂ ಸಾಮಾಜಿಕ ಭದ್ರತೆಯ ಹಕ್ಕನ್ನು ಪಡೆದಿದ್ದಾರೆ) ಶರಣ ಸಂಕುಲದಿಂದಾಗಿ ಶರಣರು ಸಾಮಾಜಿಕ ಭದ್ರತೆ ಹೊಂದಿದ್ದರು.

23. ಯಾವುದೇ ಉದ್ಯೋಗವನ್ನು ಆರಿಸಿಕೊಳ್ಳುವ ಮತ್ತು ದುಡಿಯುವ ಹಕ್ಕು. (ಪ್ರತಿಯೊಬ್ಬರೂ ದುಡಿಯುವ ಮತ್ತು ಕಾರ್ಮಿಕ ಸಂಘವನ್ನು ರಚಿಸುವ ಹಕ್ಕನ್ನು ಪಡೆದಿದ್ದಾರೆ. (ಬಸವಣ್ಣನವರಿಂದಾಗಿ ಕಾಯಕವು ಪ್ರತಿಯೊಬ್ಬರ ವ್ಯಕ್ತಿತ್ವದ ಭಾಗವಾಗಿತ್ತು. ಕಾಯಕ ಜೀವಿಗಳ ಸಮೂಹವೇ ಶರಣ ಸಂಕುಲ)

24. ವಿಶ್ರಾಂತಿಯನ್ನು, ವಿರಾಮವನ್ನು ಹೊಂದುವ ಹಕ್ಕು ಪ್ರತಿಯೊಬ್ಬರೂ ವಿಶ್ರಾಂತಿಯ ಹಕ್ಕನ್ನು ಪಡೆದಿದ್ದಾರೆ. (ಬಸವಣ್ಣನವರ ಕಾಲದಲ್ಲಿ ಸ್ವತಂತ್ರ ಕಾಯಕವು ಸಹಜವಾಗಿಯೇ ವಿಶ್ರಾಂತಿಯ ಹಕ್ಕನ್ನು ಒದಗಿಸಿತ್ತು).

25. ತನ್ನ ಮತ್ತು ಕುಟುಂಬದ ಆರೋಗ್ಯ ರಕ್ಷಣೆಯ ಹಕ್ಕು ಅಥವಾ ಜೀವನ ಸುಧಾರಣೆಯ ಹಕ್ಕು. (ಗುಣ ಮಟ್ಟದ ಬದುಕುವ ಹಕ್ಕನ್ನು ಪ್ರತಿಯೊಬ್ಬರೂ ಪಡೆದಿದ್ದಾರೆ. (ಮನೆ ನೋಡಾ. ಬಡವರು, ಮನ ನೋಡಾ ಘನ, ಸೋಂಕಿನಲ್ಲಿ ಶುಚಿ, ಸರ್ವಾಂಗ ಕಲಿಗಳು, ಪಸಾರಕ್ಕನುವಿಲ್ಲ. ಬಂದ ತತ್ಕಾಲಕ್ಕೆ ಉಂಟು ಕೂಡಲಸಂಗನ ಶರಣರ ಸ್ವತಂತ್ರ ಧೀರರು' ಎಂದು ಬಸವಣ್ಣನವರು ಶರಣರ ಘನತೆವೆತ್ತ ಸರಳ ಬದುಕನ್ನು ಕೊಂಡಾಡುತ್ತಾರೆ)

26. ಪ್ರಾಥಮಿಕ ಮತ್ತು ಉನ್ನತ ಶಿಕ್ಷಣವನ್ನು ಸಾಮರ್ಥ್ಯಕ್ಕೆ ಅನುಗುಣವಾಗಿ ಪಡೆಯುವ ಹಕ್ಕು. ಪ್ರತಿಯೊಬ್ಬರಿಗೂ ಶಿಕ್ಷಣ ಪಡೆಯುವ ಹಕ್ಕಿದೆ. (ಎಲ್ಲಾ ಕಾಯಕ ಜೀವಿಗಳು ವಚನ ರಚನೆ ಮಾಡುವ ಸಾಮರ್ಥ್ಯದ ಶಿಕ್ಷಣವನ್ನು ಪಡೆಯುವ ವ್ಯವಸ್ಥೆಯನ್ನು ಬಸವಣ್ಣನವರು ಮಾಡಿದ್ದರು)

27. ಸಮುದಾಯದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಹಕ್ಕು (ಸಮಾಜದ ಸಾಂಸ್ಕೃತಿಕ ಬದುಕಿನಲ್ಲಿ ಪಾಲ್ಗೊಳ್ಳುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ಜಾತಿಮತಗಳನ್ನು ಮೀರಿದ

ಶರಣರು ಹೊಸ ಸಮಾಜದ ಸಂಸ್ಥೆಯನ್ನು ನಿರ್ಮಿಸಿ ಇತಿಹಾಸ ಸೃಷ್ಟಿಸಿದರು).

28. ಮಾನವ ಹಕ್ಕುಗಳ ಜಾಗತಿಕ ಘೋಷಣೆ ಪ್ರಕಾರ ಸಾಮಾಜಿಕ ಮತ್ತು ಅಂತರರಾಷ್ಟ್ರೀಯ ವ್ಯವಸ್ಥೆಯನ್ನು ಬಯಸುವ ಹಕ್ಕು ಪ್ರತಿಯೊಬ್ಬರಿಗೂ ಇದೆ (ಶರಣರು ತಮ್ಮ ಈ ಸರ್ವ ಸಮಾನತೆಯ ಸಮಾಜ ಲೋಕದಲ್ಲಿ ಹಬ್ಬಲಿ ಎಂದು ಆಶಿಸಿದರು. ಆ ಕಾಲದ ಬೇರೆಬೇರೆ ದೇಶಗಳ ಜನರು ಕಲ್ಯಾಣಕ್ಕೆ ಬಂದು ಶರಣ ಜೀವನ ಸಾಗಿಸಿದರು).

29. ಸಮಾಜಕ್ಕೆ ಸೇವೆ ಸಲ್ಲಿಸುವ ಕರ್ತವ್ಯ ಪ್ರತಿಯೊಬ್ಬರದಾಗಿದೆ.

30. ಮೇಲೆ ತಿಳಿಸಿದ ಮಾನವ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಹಾಳು ಮಾಡುವಂತಹ ವ್ಯಾಖ್ಯಾನ ಮಾಡಬಾರದು. ಶರಣರು ತಮ್ಮ ಬಲಿದಾನ ಮಾಡಿದರೇ ಹೊರತು ತಮ್ಮ ತತ್ವಗಳಿಂದ ವಿಮುಖರಾಗಲಿಲ್ಲ. ಹೀಗೆ ಬಸವಾದಿ ಪ್ರಮಥರು 12ನೇ ಶತಮಾನದಲ್ಲೇ ಮಾನವ ಹಕ್ಕುಗಳ ಪ್ರತಿಪಾದಕರಾಗಿ ಕಂಗೊಳಿಸುತ್ತಿದ್ದಾರೆ.

ಈ ಬಸವ ತತ್ವದ ವಿಚಾರಗಳು ಪಾಶ್ಚಿಮಾತ್ಯ ಜಗತ್ತಿಗೆ ಹೊಳೆಯಲು 20ನೇ ಶತಮಾನದವರೆಗೆ ಕಾಯಬೇಕಾಯಿತು. ಅಲ್ಲದೆ ಎರಡು ಮಹಾ ಯುದ್ಧಗಳನ್ನು ಎದುರಿಸಬೇಕಾಯಿತು. ದೇಶದ ಸಮಗ್ರ ಆರ್ಥಿಕ ಸಾಮಾಜಿಕ ಸಮೃದ್ಧ ಅಭಿವೃದ್ಧಿಗಾಗಿ ಎಲ್ಲರ ಸುಖ ನೆಮ್ಮದಿ ಕ್ಷೇಮಾಭಿವೃದ್ಧಿಗಾಗಿ ಮಾನವ ಹಕ್ಕುಗಳ ಪ್ರಗತಿಗಾಗಿ ಆಯೋಗದ ರಚನೆಯನ್ನು ಮಾಡುವುದು ಅತ್ಯಗತ್ಯ ಎಂದು ವಿಶ್ವಸಂಸ್ಥೆಯು ಭಾವಿಸಿತು. 1946ರಲ್ಲೂ ಮಾನವ ಹಕ್ಕುಗಳ ಸ್ವಾತಂತ್ರ್ಯಗಳ ಜಾರಿಗಾಗಿ ಹಾಗೂ ಅಭಿವೃದ್ಧಿಗಾಗಿ ಅಂತರರಾಷ್ಟ್ರೀಯ ಹಂತದಲ್ಲಿ ಮಾನವ ಹಕ್ಕುಗಳ ಆಯೋಗದ ರಚನೆಯಾಗಿದೆ. ಭಾರತದ ಈ ಆಯೋಗಕ್ಕೆ ಸರ್ವೋಚ್ಚ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶರೊಬ್ಬರು ಅಧ್ಯಕ್ಷರಾಗಿದ್ದು ಸದಸ್ಯರನ್ನು ಹೊಂದಿರುತ್ತಾರೆ. ಇವರ ಅಧಿಕಾರದ ಅವಧಿ 5 ವರ್ಷಗಳು. ಇದು ದೂರನ್ನು ಸ್ವೀಕರಿಸಿ ತನಿಖೆ ನ್ಯಾಯ ವಿಚಾರಣೆಯನ್ನು ಮಾಡಿ ಉಲ್ಲಂಘನೆಗಾಗಿ ಪರಿಹಾರೋಪಾಯವನ್ನು ನೀಡುತ್ತಿದೆ. ರಾಜ್ಯಗಳಲ್ಲಿಯೂ ಈ ಆಯೋಗ ಸ್ಥಾಪನೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಸ್ತ್ರೀಯರ ಸ್ಥಾನಮಾನ, ಮಾಹಿತಿ ಸ್ವಾತಂತ್ರ್ಯ ಶೋಷಣೆಗೆ ಒಳಗಾಗಿರುವ ಅಲ್ಪಸಂಖ್ಯಾತರ ರಕ್ಷಣೆ, ತಾರತಮ್ಯ ಅಥವಾ ಭೇದಭಾವವನ್ನು ಇದು ತಡೆಯುವುದು. ಮಾನವ ಹಕ್ಕುಗಳಿಗೆ ಸಂಬಂಧಿಸಿದ ಯಾವುದೇ ವಿಷಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಗಳೊಡನೆ ಸಹಕರಿಸುವುದು, ಹಕ್ಕು ಉಲ್ಲಂಘನೆಯಾದವರ ಬಗ್ಗೆ ದೂರು ಬಂದರೆ ವರದಿ ತರಿಸಿಕೊಂಡು ನಿಷ್ಪಕ್ಷಪಾತವಾಗಿ ತನಿಖೆ ಮಾಡುವುದು. ಅದರಲ್ಲಿ ತೊಂದರೆಗೆ ಒಳಗಾದವರಿಗೆ ಪರಿಹಾರವನ್ನು ನೀಡುವುದು ಮಾತ್ರವಲ್ಲದೆ ಶಿಕ್ಷಣ, ತರಬೇತಿ ಸಂಶೋಧನೆಯಂಥವುಗಳ ಮೂಲಕ ಮಾನವ ಹಕ್ಕುಗಳ ಪ್ರಜ್ಞೆಯನ್ನು ಮೂಡಿಸುವ ಪ್ರಯತ್ನ ಸಹ ನಡೆದಿದೆ. ಆ ಆಯೋಗವು ಮಾನವ ಹಕ್ಕುಗಳನ್ನು ರಕ್ಷಣೆ ಮಾಡುವ ಹಾಗೂ ಉತ್ತೇಜನ ನೀಡುವ ಸ್ವ-ಸಾಮರ್ಥ್ಯ ಹೊಂದಿದೆ. ಯಾವುದೇ ವ್ಯಕ್ತಿಯನ್ನು ಪ್ರಶ್ನೆ ಮಾಡುವ, ಮಾಹಿತಿಯನ್ನು ಪಡೆಯುವ ಮತ್ತು ದಾಖಲೆಗಳನ್ನು ಪರಿಶೀಲನೆ ಮಾಡುವ ಅಧಿಕಾರವನ್ನು ಹೊಂದಿದೆ. ಇದು ಯಶಸ್ವಿಯಾಗಬೇಕಾದರೆ ಇದಕ್ಕೆ ಎಲ್ಲರ ಸಹಕಾರ ಅತ್ಯಗತ್ಯ. *****

ಸಾಸಲಟ್ಟಿಯಲ್ಲಿ ಪೂಜ್ಯ ಮಾತಾಜಿ ಅಭಿನಂದನೆ

ಚಿತ್ರದುರ್ಗ ನಗರದಿಂದ ಕೇವಲ 7 ಕಿ.ಮಿ. ದೂರದಲ್ಲಿರುವ ಪೂಜ್ಯ ಮಾತಾಜಿ ಜನಿಸಿದ ಗ್ರಾಮವಾದ ಸಾಸಲಟ್ಟಿಯಲ್ಲಿ ಅಕ್ಕಮಹಾದೇವಿ ಮಠವನ್ನು ಸ್ಥಾಪಿಸಿದ್ದು ದೇವ(ಭಾನು)ವಾರ ದಿ. 24-3-2013ರಂದು ಬೆಳಿಗ್ಗೆ 10-30ರಿಂದ ಪೂಜ್ಯ ಮಾತಾಜಿಯವರಿಗೆ ಅಭಿನಂದನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಆಗಮಿಸಬೇಕಾಗಿ ಕೋರುತ್ತೇನೆ.

ಶರಣೆ. ವನಜಾಕ್ಷಮ್ಮ, ಮೇಲ್ವಿಚಾರಕರು 9741259273

26ನೆಯ ಶರಣ ಮೇಳ

ಸುವರ್ಣ ಮಹೋತ್ಸವಕ್ಕೆ ನಾಂದಿ ಹಾಡಿದ ಪ್ರಥಮ ಉತ್ಸವ

ವಿಶ್ವಗುರು ಮಂತ್ರಪುರುಷ ಲಿಂಗಾಯತ ಧರ್ಮ ಸಂಸ್ಥಾಪಕರಾದ ಶ್ರೀ ಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ ಹಾಗೂ ಐಕ್ಯ ಕ್ಷೇತ್ರವಾಗಿರುವ ಕೂಡಲಸಂಗಮ ಸುಕ್ಷೇತ್ರದಲ್ಲಿ ಕಳೆದ ಜನವರಿ 11, 12, 13, 14 ಮತ್ತು 15ರಂದು 26ನೆಯ ಐತಿಹಾಸಿಕ ಶರಣ ಮೇಳವು ಅತ್ಯಂತ ಯಶಸ್ವಿಯಾಗಿ ಜರುಗಿತು.

ಕಳೆದ ವರ್ಷ ಅತ್ಯಂತ ಯಶಸ್ವಿಯಾಗಿ ಭಕ್ತಿವೈಭವದಿಂದ, ಸಂಭ್ರಮದಿಂದ ಶರಣ ಮೇಳದ ಬೆಳ್ಳಿಹಬ್ಬ ಜರುಗಿದಂತೆ ಈ ಸಲದ 26ನೆಯ ಶರಣ ಮೇಳವು ಸುವರ್ಣ ಮಹೋತ್ಸವಕ್ಕೆ ನಾಂದಿ ಹಾಡಿದ ಪ್ರಥಮ ಉತ್ಸವವಾಯಿತು. ಕೇವಲ 2 ತಿಂಗಳ ಹಿಂದಷ್ಟೇ ಶರಣಭೂಮಿ ಬಸವಕಲ್ಯಾಣದಲ್ಲಿ ಜರುಗಿದ 'ನ ಭೂತೋ' ಎಂಬಂಥ ಅದ್ಭುತವಾದ ಕಲ್ಯಾಣಪರ್ವ ಹಾಗೂ ಜಗತ್ತಿನ ಅತೀ ಎತ್ತರದ ಮೂರ್ತಿಯಾಗಿರುವ ಗುರು ಬಸವ ಪುತ್ಥಳಿಯ ಅನಾವರಣ ಜರುಗಿತ್ತು. ಅಂದು ಸಾಗರದಂತೆ ಹರಿದು ಬಂದ ಶರಣ ಸಮೂಹವು ಕೂಡಲಸಂಗಮದ ಶರಣ ಮೇಳಕ್ಕೂ ಹರಿದು ಬಂದಿರುವುದು ಬಸವ ಭಕ್ತರ ಭಕ್ತಿ, ಶ್ರದ್ಧೆ ಮತ್ತು ನಿಷ್ಠೆ ಎಂಥದ್ದು ಮತ್ತು ಅವರನ್ನು ತಯಾರಿಸಿದ ಪರಮ ಪೂಜ್ಯ ಮಹಾಜಗದ್ಗುರು ಮಾತಾಜಿಯವರ ಶಕ್ತಿಯನ್ನು ಬಣ್ಣಿಸಲು ಸಾಧ್ಯವಿಲ್ಲ.

ದಿನಾಂಕ 11-1-2013ರಂದು ಬೆಳಿಗ್ಗೆ 10-30ಕ್ಕೆ ಪ್ರಥಮ ಚಿಂತನಗೋಷ್ಠಿ ಆರಂಭವಾಯಿತು. ಚಿಂತನೆಗೆ ಇಡಲಾದ ವಿಷಯ "ಲಿಂಗಾಯತ ಒಂದು ಜಾತಿಯಲ್ಲ, ಸ್ವತಂತ್ರ ಧರ್ಮ. ಇದಕ್ಕೆ ಸಾಂವಿಧಾನಿಕ ಮನ್ನಣೆ ಪಡೆಯಲು ಹಾಕಿಕೊಳ್ಳಬೇಕಾದ ಪ್ರಯತ್ನದ ರೂಪುರೇಷೆ". ದಿವ್ಯ ಸಾನ್ನಿಧ್ಯ ವಹಿಸಿದ ಪೂಜ್ಯ ಶ್ರೀ ಮಹಾಜಗದ್ಗುರು ಮಾತಾಜಿಯವರು ಪ್ರಾಸ್ತಾವಿಕವಾಗಿ ವಿಷಯ ಮಂಡಿಸಿ ಭಾರತದಲ್ಲಿಯೇ ಹುಟ್ಟಿರುವ ಜೈನ, ಬೌದ್ಧ ಹಾಗೂ ಸಿಖ್ ಧರ್ಮಕ್ಕೆ ಯಾವ ಕಾರಣಗಳಿಂದಾಗಿ ಸ್ವತಂತ್ರ ಧರ್ಮದ ಮನ್ನಣೆ ಕೊಡಲಾಗಿದೆಯೋ ಆ ಎಲ್ಲ ಲಕ್ಷಣಗಳು ವಿಶ್ವಗುರು ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟ ಲಿಂಗಾಯತ ಧರ್ಮಕ್ಕಿವೆ. ಆದ್ದರಿಂದ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಸಂವಿಧಾನಾತ್ಮಕ ಮನ್ನಣೆ ದೊರೆಯಬೇಕು ಎಂದು ಆಗ್ರಹಿಸಿದರು.

ಧರ್ಮ ಸಂಸ್ಥಾಪಕರು- ವಿಶ್ವಗುರು ಬಸವಣ್ಣನವರು, ಧರ್ಮ ಸಂಹಿತೆ - ವಚನ ಸಾಹಿತ್ಯ, ಧರ್ಮಲಾಂಛನ - ದೇವನ ಕುರುಹಾದ ಇಷ್ಟಲಿಂಗ, ಸಂಸ್ಕಾರಗಳನ್ನು ಗುರು-ಲಿಂಗ -ಜಂಗಮ ಸಾಕ್ಷಿಯಾಗಿ ಮಾಡಲಾಗುತ್ತದೆ. ಹಿಂದೂ (ವೈದಿಕ) ಧರ್ಮದ ಪ್ರಕಾರ ಅಗ್ನಿ ಸಾಕ್ಷಿಯಾಗಿ ಮದುವೆ ಮಾಡುತ್ತಾರೆ. ವೈದಿಕ ಹಿಂದೂ ಧರ್ಮದಲ್ಲಿ ಸಸ್ಯಾಹಾರ, ಮಾಂಸಾಹಾರ ಎರಡಕ್ಕೂ ಅವಕಾಶವಿದೆ. ಆದರೆ ಲಿಂಗಾಯತ ಧರ್ಮವು ಶುದ್ಧ ಸಸ್ಯಾಹಾರಿ ಹಾಗೂ ಅಹಿಂಸಾವಾದಿ ಧರ್ಮವಾಗಿದೆ ಮತ್ತು ಏಕದೇವೋಪಾಸನೆಯ ತತ್ತ್ವ ಹೇಳಿದೆ ಎಂದು ಪೂಜ್ಯ ಮಾತಾಜಿಯವರು ವಿವರಿಸಿದರು.

ಗುರುಬಸವ ಪೂಜೆಯನ್ನು ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ನೆರವೇರಿಸಿದರು. ಬಸವ ಧ್ವಜಾರೋಹಣ ಮಾಡಿದ ವಿಜಾಪುರದ ನಿವೃತ್ತ ಕೃಷಿ ಅಧಿಕಾರಿಗಳಾದ ಶರಣ ಸಿ.ಬಿ.ಬೇವನೂರ ಅವರು ಮಾತನಾಡಿ, ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕ ಮನ್ನಣೆ ಪಡೆಯಲು ನಾವೆಲ್ಲ ಪ್ರತಿಜ್ಞಾಬದ್ಧರಾಗಬೇಕು ಮತ್ತು ಬಸವ ಧರ್ಮ ಪೀಠದ ಕರಪತ್ರಗಳನ್ನು ಪ್ರತಿಹಳ್ಳಿಗೂ ತಲುಪಿಸುವ ಕಾರ್ಯವನ್ನು ಮಾಡಬೇಕೆಂದು ನುಡಿದರು.

ಗೋಷ್ಠಿಯ ಉದ್ಘಾಟನೆಯನ್ನು ನೆರವೇರಿಸಿದ ಗುಲಬರ್ಗಾದ ಮರುಳುಶಂಕರದೇವರ

ಮಠದ ಪೂಜ್ಯ ಶ್ರೀ ಸಿದ್ಧಬಸವ ಕಬೀರ ಸ್ವಾಮಿಗಳು ಮಾತನಾಡುತ್ತಾ, "ಪೂಜ್ಯ ಮಾತಾಜಿಯವರ ಪ್ರವಚನದಿಂದ ಪ್ರಭಾವಿತನಾಗಿ ನಾನು ಇಸ್ಲಾಂ ಧರ್ಮದಿಂದ ಲಿಂಗಾಯತ ಧರ್ಮಕ್ಕೆ ಬಂದಿರುವೆ. ಬಸವ ತತ್ತ್ವ ಪರಿಪಾಲನೆ ಮಾಡುವಾಗ ಅನೇಕ ರೀತಿಯ ತೊಂದರೆಗಳು ಎದುರಾಗುತ್ತವೆ. ಸಂಪ್ರದಾಯವಾದಿಗಳು ನಮ್ಮನ್ನು ವಿರೋಧಿಸುತ್ತಾರೆ. ಇಂದು ಸಂಪ್ರದಾಯವಾದಿ ಲಿಂಗಾಯತ ಮಠಾಧೀಶರು ಮಾಡುತ್ತಿರುವ ಆಚರಣೆಗಳೆಲ್ಲ ಶೈವ ಮತ್ತು ವೈದಿಕ ಧರ್ಮದ್ದಾಗಿವೆ. ಸ್ವಾಮಿಗಳು ಅವುಗಳನ್ನು ಬಿಡಬೇಕು. ಲಿಂಗಾಯತ ಧರ್ಮ ಸ್ವತಂತ್ರ ಧರ್ಮ; ಇದರ ಮಾನ್ಯತೆಗಾಗಿ ಪೂಜ್ಯ ಮಾತಾಜಿಯವರ ನೇತೃತ್ವದಲ್ಲಿ ಹೋರಾಡಲು ತಾವು ಸಿದ್ಧರಾಗಿದ್ದೇವೆ" ಎಂದು ಮಾರ್ಮಿಕವಾಗಿ ಅಭಿಮಾನದಿಂದ ಹೇಳಿದರು.

ಬೆಂಗಳೂರಿನ ಹಿರಿಯ ನ್ಯಾಯವಾದಿಗಳಾದ ಜೆ.ಜಯರಾಜ್ ಅವರು ಮಾತನಾಡಿ, ಎಲ್ಲ ದೃಷ್ಟಿಯಿಂದಲೂ ಲಿಂಗಾಯತ ಧರ್ಮ ಸ್ವತಂತ್ರ ಧರ್ಮವೆ ಆಗಿದೆ. ಆದರೆ ಸಾಂವಿಧಾನಿಕ ಮಾನ್ಯತೆ ಪಡೆಯುವ ಅಗತ್ಯವಿದೆ. ಹಿಂದೂ ವಿವಾಹ ಕಾಯ್ದೆ ಲಿಂಗಾಯತರಿಗೆ ಅನ್ವಯವಾಗುವುದಿಲ್ಲ. ಲಿಂಗಾಯತರಿಗಾಗಿ 'ಲಿಂಗಾಯತ ಮ್ಯಾರೇಜ್ ಆಕ್ಟ್' ಎಂದೇ ಕಾಯ್ದೆ ಮಾಡುವ ಅಗತ್ಯವಿದೆ. ಮಾನ್ಯತೆ ಪಡೆಯುವುದಕ್ಕಾಗಿ ಬೇಕಾಗುವ ಎಲ್ಲ ದಾಖಲೆ ಹಾಗೂ ಸಿದ್ಧತೆಗಳನ್ನು ಪೂಜ್ಯ ಮಾತಾಜಿ ಮಾಡಿಕೊಂಡಿದ್ದಾರೆ. ನಾವೆಲ್ಲರೂ ಹೋರಾಟವನ್ನು ಆರಂಭಿಸಬೇಕಾಗಿದೆ" ಎಂದು ಕರೆಕೊಟ್ಟರು.

ರಾಷ್ಟ್ರೀಯ ಬಸವ ದಳದ ರಾಜ್ಯಾಧ್ಯಕ್ಷ ಶರಣ ವೀರಣ್ಣ ಲಿಂಗಾಯತ, ರಾಷ್ಟ್ರೀಯ ಬಸವ ದಳ ಬೆಂಗಳೂರಿನ ಸಂಚಾಲಕ ಕೆ.ವೀರೇಶ್, ಧಾರವಾಡದ ಯುವ ಮುಖಂಡ ಕರಿಬಸಪ್ಪ ಕೋರಿಶೆಟ್ಟರ್ ಅವರು ವಿಷಯ ಮಂಡಿಸಿದರು. ಬೀದರಿನ ಹಿರಿಯ ನ್ಯಾಯವಾದಿಗಳಾದ ಶರಣ ಗಂಗಶೆಟ್ಟಿ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷರಾದ ಕೆ.ಬಸವರಾಜ ಅವರು ಸ್ವಾಗತ ಕೋರಿ ಪ್ರಾಸ್ತಾವಿಕವಾಗಿ ನುಡಿದರು.

ಬೀದರ ಜಿಲ್ಲಾ ರಾಷ್ಟ್ರೀಯ ಬಸವ ದಳದ ಪ್ರಧಾನ ಕಾರ್ಯದರ್ಶಿ ಶರಣ. ಸುರೇಶಕುಮಾರ ಸ್ವಾಮಿ ಸಭಾನಿರ್ವಹಣೆ ಮಾಡಿದರು. ದಿವ್ಯ ಸಾನ್ನಿಧ್ಯ ವಹಿಸಿದ ಪರಮ ಪೂಜ್ಯ ಮಾತಾಜಿಯವರು ಪ್ರವಚನ ನೀಡುತ್ತ ಅಕ್ಕಮಹಾದೇವಿ ತಾಯಿಯವರು ತಮ್ಮ ಒಂದು ವಚನದಲ್ಲಿ ಕೊಂಡಾಡಿರುವ ಗುರು ಬಸವಣ್ಣನವರ 52 ಗುಣಗಳನ್ನು ಕುರಿತು ವಿವರಿಸಿದರು.

ಆದಿ-ಅನಾದಿಗಳಿಲ್ಲದ ನಿರವಯವ ದೇವನ ನಿಜವನರಿದು ಆ ಲಿಂಗದೇವನನ್ನು ಇಷ್ಟಲಿಂಗದ ರೂಪದಲ್ಲಿ ಪೂಜಿಸಲು ಕಲಿಸಿದವರು ಗುರು ಬಸವಣ್ಣನವರು. ಗುರು ಕಾರುಣ್ಯವೇದ್ಯನು, ವಿಭೂತಿ-ರುದ್ರಾಕ್ಷಿಧಾರಕನು, ಪಂಚಾಕ್ಷರಿ ಭಾಷಾ ಸಮೇತನು, ನಿತ್ಯಲಿಂಗಾರ್ಚಕನು, ಅರ್ಪಿತದಲ್ಲಿ ಅವಧಾನಿ ಪಾದೋದಕ-ಪ್ರಸಾದ ಗ್ರಾಹಕನು-ಹೀಗೆ ಐವತ್ತೆರಡು ಗುಣಗಳ ಬಗ್ಗೆ ವಿವರವಾಗಿ ಪೂಜ್ಯ ಮಾತಾಜಿಯವರು ಅರ್ಥವಿವರಣೆ ಮಾಡಿದರು.

ಶೇಗುಣಸಿಯ ಶರಣ. ರಾಚಪ್ಪಗೌಡ ಗೌಡಪ್ಪನವರು ಮಾತನಾಡಿ, ಪೂಜ್ಯ ಮಾತಾಜಿಯವರಲ್ಲಿ ಭಕ್ತರನ್ನು ಉದ್ಧರಿಸಬೇಕೆಂಬ ಕಳಕಳಿಯಿದೆ. ಭಕ್ತರಲ್ಲಿ ಸಹ ಮಾತಾಜಿಯವರನ್ನ ಕಾಣಬೇಕೆಂಬ ತಳಮಳ ಇದೆ. ಅಂತೆಯೇ ನಾವೆಲ್ಲ ಇವತ್ತು ಲಕ್ಷ ಲಕ್ಷ ಸಂಖ್ಯೆಯಲ್ಲಿ ಕೂಡಿದ್ದೇವೆ. ನಮಗೆಲ್ಲ ಲಿಂಗಾಯತ ಧರ್ಮದ ಬಗ್ಗೆ ಜ್ಞಾನ ಸಿಕ್ಕಿದ್ದೇ ಈ ಶರಣ ಮೇಳದಿಂದ ಎಂದು ಮನಬಿಚ್ಚಿ ಮಾತನಾಡಿದರು.

ಎಲ್ಲ ಒಳಪಂಗಡದವರು ಒಂದಾಗಿ ಹೋರಾಟ ಮಾಡಲು ಮುಂದಾಗಬೇಕೆಂದು ಕರಿಬಸಪ್ಪ ಕೋರಿಶೆಟ್ಟರ್, ಧಾರವಾಡ ಕರೆಕೊಟ್ಟರು. ಆಶ್ರಮದ ಮಕ್ಕಳಿಂದ ವಚನ ನೃತ್ಯ ಜರುಗಿತು.

ದಿ.11 ರಂದು ಸಂಜೆ 6-30ಕ್ಕೆ ಮಹಿಳಾಗೋಷ್ಠಿ ಏರ್ಪಡಿಸಲಾಗಿತ್ತು. 'ಆಧುನಿಕ ಪರಿಸರದಲ್ಲಿ ಮಹಿಳೆ ಎದುರಿಸುತ್ತಿರುವ ಮತ್ತು ಎದುರಿಸಬೇಕಾದ ಪರಿಸ್ಥಿತಿ' ಕುರಿತು ಚಿಂತನೆ

ನಡೆಯಿತು.

ಪರಮ ಪೂಜ್ಯ ಮಹಾಜಗದ್ಗುರು ಮಾತಾಜಿಯವರು ದಿವ್ಯಸಾನ್ನಿಧ್ಯ ವಹಿಸಿದ್ದರು. ಬೆಂಗಳೂರು ರಾಷ್ಟ್ರೀಯ ಬಸವ ದಳದ ಗಣನಾಯಕಿ ಶರಣೆ ದೇವಿಕಾ ಶರಣಪ್ಪನವರು ಗುರು ಪೂಜೆ ನೆರವೇರಿಸಿದರು. ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಜ್ಯೋತಿ ಬೆಳಗಿಸಿ ಉದ್ಘಾಟನೆ ಮಾಡಿ ಮಾತನಾಡುತ್ತ, 'ಇಂಥ ಆಧುನಿಕ ಪರಿಸರದಲ್ಲಿಯೂ ಮಹಿಳೆ ನಾನಾ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ಆದರೆ ಎಲ್ಲ ಸಮಸ್ಯೆಗಳಿಗೂ ವಚನ ಸಾಹಿತ್ಯದಲ್ಲಿ ಪರಿಹಾರವಿದೆ. ನಾವೆಲ್ಲ ವಚನ ಸಾಹಿತ್ಯವನ್ನು ಅಳವಡಿಸಿಕೊಂಡು ನಡೆದರೆ ಸಮಸ್ಯೆಗಳೆಲ್ಲ ದೂರವಾಗುತ್ತವೆ ಎಂದರು.' ಪೂಜ್ಯ ಮಾತೆ ಸತ್ಯಾದೇವಿಯವರು ಧ್ವಜಾರೋಹಣ ಮಾಡಿದರು. ಬಳ್ಳಾರಿ ರಾಷ್ಟ್ರೀಯ ಬಸವ ದಳದ ಶರಣೆ ಶಾರದಾತಾಯಿಯವರು, ಭದ್ರಾವತಿಯ ಶರಣೆ ವಿಜಯಾರಾಜು ಮತ್ತು ಶಾರದಾ ಬಸವರಾಜ ಅವರು ವಿಷಯ ಮಂಡಿಸಿದರು. ಧಾರವಾಡದ ಶರಣೆ ನೀಲಾಂಬಿಕಾ ಇಂಗಳಳ್ಳಿಯವರು ಅಧ್ಯಕ್ಷತೆ ವಹಿಸಿದ್ದರು.

ಪೂಜ್ಯ ಮಾತೆ ನೀಲಾಂಬಿಕಾದೇವಿ ಬಳ್ಳೋಬಾಳ, ಬೀದರ್ ರಾಷ್ಟ್ರೀಯ ಬಸವ ದಳದ ಅಧ್ಯಕ್ಷೆ ಶರಣೆ ಚಂದ್ರಮ್ಮ ಪಾಟೀಲ ಗಾದಗಿ, ಲಿಂಗಾಯತ ಸಮಾಜದ ಮಹಿಳಾ ಅಧ್ಯಕ್ಷೆ ಶರಣೆ ಸುಷ್ಮಾ ಚಂದ್ರಶೇಖರ ಪಾಟೀಲ ಬೀದರ, ಡಾ.ಅನ್ನಪೂರ್ಣ ಹಿರಲಿಂಗಣ್ಣನವರು ಸವದತ್ತಿ, ಶರಣೆ ಸರೋಜಮ್ಮ ನಾಗರಾಜು ಮೈಸೂರು, ಶರಣೆ ಜಯಶ್ರೀ ಶಿವಪೂರ ಹಾವೇರಿ ಅವರು ಮುಖ್ಯ ಅತಿಥಿಗಳಾಗಿದ್ದರು. ಶರಣೆ ವಚನ ಸುಧಾ, ಶಿಕ್ಷಕಿ, ಬೀದರ್ ಅವರು ಸ್ವಾಗತ ಕೋರಿದರು. ಶರಣೆ ಲೀಲಾವತಿ ಕರಡಿ ಬೆಂಗಳೂರು ಅವರು ಸಭಾನಿರ್ವಹಣೆ ಮಾಡಿದರು.

ರಾಷ್ಟ್ರೀಯ ಬಸವ ದಳದ 26ನೇ ಅಧಿವೇಶನವು ದಿ.12ರಂದು ಬೆಳಿಗ್ಗೆ 10-30ಕ್ಕೆ ಆರಂಭವಾಯಿತು. ದಿವ್ಯ ಸಾನ್ನಿಧ್ಯ ವಹಿಸಿದ್ದ ಪೂಜ್ಯ ಮಹಾಜಗದ್ಗುರು ಮಾತಾಜಿಯವರು ರಾಷ್ಟ್ರೀಯ ಬಸವ ದಳದ ಧ್ಯೇಯ-ಉದ್ದೇಶಗಳನ್ನು ಹೇಳುತ್ತ, "ರಾಷ್ಟ್ರೀಯ ಮೌಲ್ಯಗಳ ಉದ್ದೀಪನೆ ಮತ್ತು ಧರ್ಮದಲ್ಲಿ ಶ್ರದ್ಧೆ ಬೆಳೆಸುವುದು ರಾಷ್ಟ್ರೀಯ ಬಸವ ದಳದ ಮುಖ್ಯ ಉದ್ದೇಶವಾಗಿದೆ. ಧರ್ಮ ವೈಯಕ್ತಿಕ ಉನ್ನತಿಗೆ ಸಹಕಾರಿ ಆದರೆ ರಾಷ್ಟ್ರ ಸರ್ವಜನಾಂಗದ ಕಲ್ಯಾಣತತ್ತ್ವ ಎಂದು ವಿವರಿಸಿದರಲ್ಲದೆ, ರಾಷ್ಟ್ರೀಯ ಮತ್ತು ಧಾರ್ಮಿಕ ಮೌಲ್ಯಗಳ ಸಂಯೋಗವಾಗಬೇಕು' ಎಂದು ಕರೆಕೊಟ್ಟರು.

ಸಾಮೂಹಿಕ ಪ್ರಾರ್ಥನೆಯು ಮನುಷ್ಯನಿಗೆ ವೈಯಕ್ತಿಕವಾಗಿ ಮತ್ತು ಸಾಮುದಾಯಿಕ ಶಕ್ತಿ ನೀಡುತ್ತದೆ. ಪ್ರತಿಯೊಬ್ಬರು ಜಾತೀಯತೆ ತೊರೆದು ಸಮಾಜ ಸೇವೆಗೆ ಮುಂದಾಗಬೇಕು. ಸಂಸ್ಕಾರ, ಸಂಘಟನೆ ಮತ್ತು ಸಹೋದರತ್ವ ಇವು ಧರ್ಮದ ಮುಖ್ಯ ಉದ್ದೇಶ. ನಮ್ಮದು ಅನುಭವ ಮಂಟಪ ಸಂಸ್ಕೃತಿ, ಮಂದಿರ ಸಂಸ್ಕೃತಿಯಲ್ಲ. ಮಂದಿರ ಸಂಸ್ಕೃತಿಯಲ್ಲಿ ಭೇದವಿದೆ. ಮಂಟಪ ಸಂಸ್ಕೃತಿಯಲ್ಲಿ ಸಮಾನತೆಯಿದೆ. ಈ ಸಮಾನತೆಯ ತಳಹದಿಯ ಮೇಲೆ ನಾವು ಎಲ್ಲ ಕಡೆ ರಾಷ್ಟ್ರೀಯ ಬಸವ ದಳ ಮತ್ತು ಬಸವ ಮಂಟಪಗಳನ್ನು ಕಟ್ಟುತ್ತಿರುವುದಾಗಿ ವಿವರಿಸಿದರು.

ರಾಷ್ಟ್ರೀಯ ಬಸವ ದಳದ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಸರ್ಕಾರದ ಕೃಷಿ ಮಾರುಕಟ್ಟೆ ಸಚಿವರಾದ ಎಸ್.ಕೆ.ಬೆಳ್ಳುಬ್ಬಿ, ಕನ್ನಡ ಸಾಹಿತ್ಯಕ್ಕೆ ಭಾರತೀಯ ಸಂಸ್ಕೃತಿಗೆ ಬಸವಾದಿ ಶರಣರು ಅಪಾರವಾದ ಕೊಡುಗೆ ನೀಡಿದ್ದಾರೆ. ಸಮಾನತೆ, ಸಹಬಾಳ್ವೆಯ ಜೊತೆಗೆ ಅಂಧಶ್ರದ್ಧೆ, ಅಸ್ಪೃಶ್ಯತೆಯ ನಿವಾರಣೆಗಾಗಿ ಶರಣರು ತಮ್ಮ ಬದುಕನ್ನೇ ಮುಡಿಪಾಗಿಟ್ಟರು. ಶ್ರೀಮಂತ-ಧೀಮಂತವಾದ ವಚನ ಸಾಹಿತ್ಯವನ್ನು ನಮಗೆ ಕೊಟ್ಟು ಹೋಗಿದ್ದಾರೆ. ಅದರಲ್ಲಿ ಅದ್ಭುತವಾದ ಶಕ್ತಿಯಿದೆ ಎಂದರಲ್ಲದೆ ಬಸವ ತತ್ತ್ವವನ್ನು ಪೂಜ್ಯ ಲಿಂ. ಲಿಂಗಾನಂದ ಮಹಾಸ್ವಾಮೀಜಿಯವರು ಹಾಗೂ ಪೂಜ್ಯ ಮಾತಾಜಿಯವರು ವ್ಯಾಪಕವಾಗಿ ಪ್ರಚಾರ ಮಾಡಿದ್ದಾರೆ ಎಂದು ಬಣ್ಣಿಸಿದರು. ಅಕ್ಕಮಹಾದೇವಿತಾಯಿಯವರ ವಚನವೊಂದನ್ನು ಜಾನಪದ

ದಾಟಿಯಲ್ಲಿ ಹಾಡಿ ಸಚಿವರು ತಮ್ಮ ಭಾಷಣ ಪೂರ್ಣಗೊಳಿಸಿದರು.

ಆಲಮಟ್ಟಿಯ ಶರಣ ಹರ್ಡೇಕರ್ ಮಂಜಪ್ಪ ಕಾಲೇಜಿನ ಪ್ರಾಚಾರ್ಯ ಎಸ್.ಬಿ.ಪಾಟೀಲರು "ಅಂಬಿಗರ ಚೌಡಯ್ಯನವರ ವಚನಗಳು" ಎಂಬ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಹೆಚ್.ಎಸ್.ಪಾಟೀಲ ಬಾಗಲಕೋಟೆ ಅವರು "ಹಡಪದ ಅಪ್ಪಣ್ಣ ಹಾಗೂ ಲಿಂಗಮ್ಮನವರ ವಚನಗಳು" ಹೊತ್ತಿಗೆಯನ್ನು ಬಿಡುಗಡೆ ಮಾಡಿದರು. ಈ ಪುಸ್ತಕಗಳ ಸಂಪಾದಕರಾದ ಶರಣ ಸಚ್ಚಿದಾನಂದ ಚಟನಳ್ಳಿಯವರನ್ನು ಹಾಗೂ ಗ್ರಂಥ ದಾನಿಗಳಾದ ಬೆಂಗಳೂರಿನ ಶರಣೆ ಲೀಲಾವತಿ ಕರಡಿ, ಶರಣೆ ಪುಷ್ಪ ಜಯದೇವ ತುಮಕೂರು, ಶರಣೆ ಸರೋಜಮ್ಮ ನಾಗರಾಜು ಮೈಸೂರು, ಶರಣೆ ಶಾರದಾತಾಯಿ ಬಳ್ಳಾರಿ, ಶರಣೆ ಜಯಶ್ರೀ ಸುರೇಂದ್ರ ಪಾಟೀಲ್, ರಟೇಗಲ್, ಬಸವಕಲ್ಯಾಣ ಅವರನ್ನು ಪೂಜ್ಯ ಮಾತಾಜಿಯವರು ಸತ್ಕರಿಸಿ ನೆನಪಿನ ಕಾಣಿಕೆಗಳನ್ನು ನೀಡಿದರು. ಇದೇ ಸಂದರ್ಭದಲ್ಲಿ ಪರಮ ಪೂಜ್ಯ ಮಾತಾಜಿಯವರು ಗುರು ಬಸವಣ್ಣನವರ ವಚನಗಳಿಗೆ ಭಾವಾರ್ಥ ಬರೆದು ಪ್ರಕಟಿಸಿರುವ 1008 ವಚನಗಳ "ಬಸವ ವಚನಾಮೃತ" ಗ್ರಂಥವನ್ನು ಬಿಡುಗಡೆ ಮಾಡಲಾಯಿತು. ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ ಗ್ರಂಥ ಬಿಡುಗಡೆ ನೆರವೇರಿಸಿ ಆ ಗ್ರಂಥದ ಮಹತ್ವವನ್ನು ವಿವರಿಸಿದರು. ಪತ್ರಕರ್ತರಾದ ಪ್ರಭುಪ್ರಸಾದ (ಮಂಜುನಾಥ) ಬಂಡಿಯವರು ಸಭಾ ನಿರ್ವಹಣೆ ಮಾಡಿದರು. ಕೃಷ್ಣಾ ಕಣಿವೆ ರೈತ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಬಸವರಾಜ. ಕುಂಬಾರ ವಿಶೇಷ ಆಹ್ವಾನಿತರಾಗಿದ್ದರು. ಅವರನ್ನು ಈ ಸಂದರ್ಭದಲ್ಲಿ ಸತ್ಕರಿಸಲಾಯಿತು.

ದಿ.12ರಂದು ಸಂಜೆ 6-30ಕ್ಕೆ ಯುವಜನ ಗೋಷ್ಠಿಯನ್ನು ಆಯೋಜಿಸಲಾಗಿತ್ತು. ಹೈದ್ರಾಬಾದ್ ಕರ್ನಾಟಕ ಭಾಗಕ್ಕೆ ವಿಶೇಷ ಸ್ಥಾನಮಾನ ಕೊಡಿಸುವ ಸಲುವಾಗಿ ಮತ್ತು ಆ ಭಾಗದ ಸರ್ವಾಂಗೀಣ ಅಭಿವೃದ್ಧಿಗಾಗಿ 371ನೇ ಕಲಂ ನ ತಿದ್ದುಪಡಿಗೋಸ್ಕರ ಅವ್ಯಾಹತವಾಗಿ ಹೋರಾಡಿ ಜಯಶಾಲಿಗಳಾದ ಹಿರಿಯ ಚೇತನ ವೈಜನಾಥ ಪಾಟೀಲರು ಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡುತ್ತಾ, ಪೂಜ್ಯ ಮಾತಾಜಿಯವರಲ್ಲಿ ಅದ್ಭುತವಾದ ದೈವೀಶಕ್ತಿಯಿದೆ. ಅವರು ಬಸವಕಲ್ಯಾಣದಲ್ಲಿ ನಿರ್ಮಿಸಿರುವ 108 ಅಡಿ ಎತ್ತರದ ಬಸವ ಪುತ್ಥಳಿ ಐತಿಹಾಸಿಕವಾಗಿದೆ. ಅನೇಕ ರೀತಿಯ ವಿರೋಧಗಳು, ತೊಂದರೆಗಳು ಇದ್ದರೂ ಯಾವುದನ್ನೂ ಲೆಕ್ಕಿಸದೆ, ಧೈರ್ಯವಾಗಿ ಮುನ್ನುಗ್ಗುತ್ತಿರುವವರು ಮಾತಾಜಿಯವರು. ಸಮಾಜದಲ್ಲಿ ವಿರೋಧಗಳು, ವಿವಾದಗಳು ಇರಬೇಕು. ಸಂಘರ್ಷವಾದಾಗಲೆ ಸತ್ಯ ಗೊತ್ತಾಗುತ್ತದೆ. ಪೂಜ್ಯ ಮಾತಾಜಿಯವರು ಸತ್ಯವನ್ನು ನಂಬಿದವರಷ್ಟೆ ಅಲ್ಲ ಸತ್ಯದ ಪ್ರತಿಪಾದಕರು. ಅಂಕಿತನಾಮ ವಿಷಯದಲ್ಲಿ ಹೈಕೋರ್ಟ್ ಆದೇಶವನ್ನೂ ಲೆಕ್ಕಿಸದೆ, ಸತ್ಯದ ಪ್ರತಿಪಾದನೆ ಮಾಡುತ್ತಿರುವ ಅವರ ಧೈರ್ಯ, ಸಾಹಸ ಮೆಚ್ಚುವಂಥದ್ದು. ಕರ್ನಾಟಕದಲ್ಲಿ ಎಲ್ಲ ಮಠಗಳಿಗಿಂತ ಹೆಚ್ಚು ಅನುಯಾಯಿಗಳನ್ನು ಪೂಜ್ಯ ಮಾತಾಜಿಯವರು ಹೊಂದಿದ್ದಾರೆ" ಎಂದು ಪಾಟೀಲರು ಹೃದಯತುಂಬಿ ನುಡಿದರು.

ದಿವ್ಯ ಸಾನ್ನಿಧ್ಯ ವಹಿಸಿದ ಪೂಜ್ಯ ಮಹಾಜಗದ್ಗುರು ಮಾತಾಜಿಯವರು ಆಶೀರ್ವಚನ ನೀಡುತ್ತ, ಯುವಕರು ಇಂದು ದುರ್ವ್ಯಸನ ದುರಾಚಾರಗಳಿಗೆ ಬಲಿಯಾಗಿ ದಾರಿ ತಪ್ಪುತ್ತಿದ್ದಾರೆ. ಯುವತಿಯರು, ಹೆಣ್ಣುಮಕ್ಕಳು ಮೈಪ್ರದರ್ಶಿಸುವ ತುಂಡುಡುಗೆ ತೊಟ್ಟು ದಾರಿ ತಪ್ಪುತ್ತಿದ್ದಾರೆ. ಯುವಕ – ಯುವತಿಯರಿಗೆ ಧಾರ್ಮಿಕ ಸಂಸ್ಕಾರ ಮುಖ್ಯವಾಗಿಬೇಕು. ದೇಹಕ್ಕೆ ಸಾತ್ವಿಕ ಆಹಾರ, ಮನಸ್ಸಿಗೆ ಸುಜ್ಞಾನ ಹಾಗೂ ಆತ್ಮೋನ್ನತಿಗೆ ಧ್ಯಾನ ಪ್ರತಿಯೊಬ್ಬರಿಗೂ ಬೇಕು ಎಂದು ನುಡಿದರು. ಯುವಕರು ಧರ್ಮ ಸಂಸ್ಕಾರ ಪಡೆದುಕೊಂಡು ಪ್ರತಿ ಹಳ್ಳಿಯಲ್ಲೂ ರಾಷ್ಟ್ರೀಯ ಬಸವ ದಳದ ಶಾಖೆ ತೆರೆಯಬೇಕೆಂದು ಪೂಜ್ಯ ಮಾತಾಜಿಯವರು ಕರೆ ನೀಡಿದರು.

ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ ಕೃಷ್ಣಾ ಭಾಗ್ಯ ಜಲನಿಗಮದ ಮುಖ್ಯ ಲೆಕ್ಕಾಧಿಕಾರಿ ಶರಣ ಎಸ್.ದಿವಾಕರ್ ಅವರು ಮಾತನಾಡಿ, 'ಮಡೆಸ್ನಾನ, ಪ್ರಾಣಬಲಿ, ಬೆತ್ತಲೆ

ಸೇವೆಯಂಥ ಅಮಾನವೀಯ ಆಚರಣೆಗಳನ್ನು ತೊಡೆದು ಹಾಕಲು ಕೇವಲ ಬಸವ ತತ್ತ್ವದಿಂದ ಮಾತ್ರ ಸಾಧ್ಯ ಎಂದರಲ್ಲದೆ, ಪ್ರಜಾತಂತ್ರದ ಮಾದರಿಯಲ್ಲಿ ಧರ್ಮಗ್ರಂಥ ಅಂದರೆ ವಚನ ಸಂಹಿತೆಯನ್ನು ರಚಿಸಿಕೊಟ್ಟ ಏಕೈಕ ಧರ್ಮ ಲಿಂಗಾಯತ ಧರ್ಮ' ಎಂದು ತಮ್ಮ ಹಾಸ್ಯಭರಿತ ಶೈಲಿಯಲ್ಲಿ ಉಪನ್ಯಾಸ ನೀಡಿ ಹಲವಾರು ವಿಷಯಗಳನ್ನು ಮನದಟ್ಟು ಮಾಡಿದರು.

ಹೈದ್ರಾಬಾದ್ ಬಸವ ಮಂಟಪದ ಪೂಜ್ಯ ಶ್ರೀ ಸದ್ಗುರು ಪ್ರಭುಲಿಂಗ ಸ್ವಾಮೀಜಿ ಗುರುಪೂಜೆ ನೆರವೇರಿಸಿದರು. ಕಿತ್ತೂರು ತಾಲ್ಲೂಕಿನ ನೇಗಿನಹಾಳ ಗ್ರಾಮದ ಗುರು ಮಡಿವಾಳೇಶ್ವರ ಮಠಾಧೀಶರಾದ ಪೂಜ್ಯ ಶ್ರೀ ಬಸವ ಸಿದ್ಧಲಿಂಗ ಸ್ವಾಮಿಗಳು ಬಸವ ಧ್ವಜಾರೋಹಣ ಮಾಡಿದರು. ಪೂಜ್ಯ ಶ್ರೀ ಬಸವಲಿಂಗ ಸ್ವಾಮೀಜಿ, ಅಲ್ಲಮಪ್ರಭು ಯೋಗಪೀಠ ಅಲ್ಲಮಗಿರಿ, ಮಹಾರಾಷ್ಟ್ರ, ಡಾ.ವಿದ್ಯಾಧರ ಕಾಮಶೆಟ್ಟಿ ಉದಗೀರ, ಡಾ.ವಿಶ್ವಾಸಾನಂದ ಸ್ವಾಮಿಗಳು, ಶರಣ ಡಾ.ಸತ್ಯೇಂದ್ರ ಚೆನ್ನೈ, ಶರಣ ವಿನೋದಭಾಯಿ, ಭದ್ರತಾ ಅಧಿಕಾರಿ ಕ್ಯಾಪ್ಟನ್ ವಿಶ್ವನಾಥ, ಕೂಡಲ ಸಂಗಮದ ಹಿರಿಯ ಮುಖಂಡರಾದ ಶರಣ ಜಿ.ಜಿ.ಪಾಟೀಲ ಅವರನ್ನು ಸತ್ಕರಿಸಲಾಯಿತು.

ಆಂಧ್ರಪ್ರದೇಶ ರಾಷ್ಟ್ರೀಯ ಬಸವ ದಳ ಅಧ್ಯಕ್ಷರಾದ ಶರಣ ಧನರಾಜ ಜೀರ್ಗೆಯವರು ಅಧ್ಯಕ್ಷತೆ ವಹಿಸಿದ್ದರು. ಗುಲಬರ್ಗಾ ರಾಷ್ಟ್ರೀಯ ಬಸವ ದಳದ ಪ್ರಧಾನ ಕಾರ್ಯದರ್ಶಿ ಆರ್.ಜಿ.ಶೆಟಗಾರ್ ಸ್ವಾಗತಿಸಿದರು. ಶರಣ ಕರಿಬಸಪ್ಪ ಕೋರಿಶೆಟ್ಟರ್ ಧಾರವಾಡ ಅವರು ಸಭಾ ನಿರೂಪಣೆ ಮಾಡಿದರು. ಕುಮಾರಿ ವಚನಾ ಮೋಹನಕುಮಾರ, ಕಿಶನ್ ಅವರು ವಚನ ನೃತ್ಯ ಮಾಡಿದರು.

ದಿ.13ರಂದು ಬೆಳಿಗ್ಗೆ 10-30ಕ್ಕೆ ಐತಿಹಾಸಿಕ ಶರಣ ಮೇಳದ ಉದ್ಘಾಟನೆಯನ್ನು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಗೋವಿಂದ ಕಾರಜೋಳ ಅವರು ನೆರವೇರಿಸಿ, ಬಸವಣ್ಣನವರ ತತ್ತ್ವಗಳನ್ನು ಜಗತ್ತಿನಾದ್ಯಂತ ಪ್ರಚಾರ ಮಾಡಬೇಕಾದ ಅಗತ್ಯವಿದೆ. ಪೂಜ್ಯ ಮಾತಾಜಿಯವರ ಪ್ರವಚನದಿಂದ ಪ್ರಭಾವಿತನಾದವರಲ್ಲಿ ನಾನೂ ಒಬ್ಬ. ಕಾಲೇಜಿನಲ್ಲಿ ಓದುವಾಗಲೆ ನನಗೆ ಪೂಜ್ಯ ಮಾತಾಜಿಯವರ ಪ್ರವಚನ ಕೇಳುವ ಅವಕಾಶ ಸಿಕ್ಕಿತು. ಅದರಿಂದ ನಮ್ಮ ಜೀವನ ಸಾರ್ಥಕವಾಗಿದೆ ಎಂದರಲ್ಲದೆ, ಸರ್ಕಾರದ ವತಿಯಿಂದ ವಚನ ಸಾಹಿತ್ಯವನ್ನು ಎಲ್ಲ ಭಾಷೆಗಳಿಗೆ ಭಾಷಾಂತರಿಸಲಾಗುತ್ತಿದೆ. ಇಂಗ್ಲೆಂಡಿನಲ್ಲಿ ನಿರ್ಮಿಸಲಾದ ಬಸವೇಶ್ವರ ಪುತ್ಥಳಿಗಾಗಿ 3 ಕೋಟಿ ರೂ. ಅನುದಾನ ನೀಡಿದ್ದೇವೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಕಾರ್ಯವನ್ನು ಮಾಡಲಾಗುವುದು ಎಂದು ಭರವಸೆ ನೀಡಿದರು.

ಹುನಗುಂದ ಶಾಸಕ ದೊಡ್ಡನಗೌಡ ಪಾಟೀಲ ಅವರು ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದರು. ಸಮ್ಮುಖ ವಹಿಸಿದ್ದ ಲಿಂಗಾಯತ ಪಂಚಮಸಾಲಿ ಪೀಠದ ಪೂಜ್ಯ ಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮೀಜಿ ಮಾತನಾಡಿ, "ಲಿಂಗಾಯತ ಧರ್ಮ ಸ್ವತಂತ್ರ ಧರ್ಮ ಎಂಬುದನ್ನು ಎಲ್ಲ ರಾಜಕೀಯ ಪಕ್ಷದವರಿಗೂ ಮನವರಿಕೆ ಮಾಡಿಕೊಡಬೇಕು. ಈ ಧರ್ಮದ ಮಾನ್ಯತೆಗಾಗಿ ಹೋರಾಡಲು ಪೂಜ್ಯ ಮಾತಾಜಿಯವರು ನೇತೃತ್ವ ವಹಿಸಿಕೊಳ್ಳಲಿ ನಾವೆಲ್ಲರೂ ಸೈನಿಕರಾಗಿ ದುಡಿಯಲು ಸಿದ್ಧರಾಗಿದ್ದೇವೆ" ಎಂದರು.

ಹುಬ್ಬಳ್ಳಿ ಹೊಸಮಠದ ಪೂಜ್ಯ ಡಾ.ಚಂದ್ರಶೇಖರ ಮಹಾಸ್ವಾಮಿಗಳು ಮಾತನಾಡುತ್ತಾ, "ಪೂಜ್ಯ ಮಾತಾಜಿ ಒಬ್ಬ ವ್ಯಕ್ತಿಯಲ್ಲ ಅದೊಂದು ದೈವೀ ಶಕ್ತಿ ಎಂದು ಬಣ್ಣಿಸಿದರಲ್ಲದೆ. ಯಾವ ಸ್ವಾಮಿಗಳೂ ಮಾಡದೇ ಇರುವ ಕಾರ್ಯವನ್ನು ಪೂಜ್ಯ ಮಾತೆಯವರು ಮಾಡಿ ತೋರಿಸಿದ್ದಾರೆ" ಎಂದು ನುಡಿದರು. ಇಂದಿರಾ ಪ್ರಿಯದರ್ಶಿನಿ ಪುರಸ್ಕಾರವನ್ನು ನವದೆಹಲಿಯಲ್ಲಿ ಪಡೆದ ಹೊಸಮಠದ ಪೂಜ್ಯರನ್ನು ಸನ್ಮಾನಿಸಲಾಯಿತು.

ಅಂಕೋಲದ ಗೋಖಲೆ ಮಹಾವಿದ್ಯಾಲಯದ ಡಾ.ಸಿದ್ಧಲಿಂಗ ಸ್ವಾಮಿ ವಸ್ತ್ರದ ಅವರು ಪೂಜ್ಯ ಮಾತಾಜಿಯವರ ಕೃತಿ 'ತರಂಗಿಣಿ' ಕಾದಂಬರಿಯ 9ನೆಯ ಆವೃತ್ತಿಯನ್ನು ಬಿಡುಗಡೆ

ಮಾಡಿ ಮಾತನಾಡುತ್ತಾ, ಎಲ್ಲ ಸಾಹಿತ್ಯಗಳು ಪ್ರಕಟವಾದ ನಂತರ ವಿಮರ್ಶೆಗೆ ಒಡಪಡುತ್ತವೆ. ಆದರೆ ಬಸವಾದಿ ಶರಣರ ವಚನ ಸಾಹಿತ್ಯ ವಿಮರ್ಶೆಯಾದ ನಂತರ ಹೊರಬಂದ ಸಾಹಿತ್ಯವಾಗಿದೆ ಎಂದು ತುಂಬ ಮಾರ್ಮಿಕವಾಗಿ ತಿಳಿಸಿದರು.

ಬೀದರ್ ಲಿಂಗಾಯತ ಸಮಾಜದ ಅಧ್ಯಕ್ಷ ಕುಶಾಲರಾವ್ ಪಾಟೀಲ, ಗುಲಬರ್ಗಾ ಜಿಲ್ಲಾ ಪಂಚಾಯತಿ ಮಾಜಿ ಉಪಾಧ್ಯಕ್ಷ ಸುರೇಶ ಸಜ್ಜನ್, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ರಾಜೇಂದ್ರ ಕರೆಕಲ್, ಎಂ.ಎಂ.ಹಿರಲಿಂಗಣ್ಣನವರು ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಯಮಕನಮರಡಿ ಶಾಸಕ ಸತೀಶ ಜಾರಕಿಹೊಳಿಯವರು ಮಾತನಾಡಿ, "ಪೂಜ್ಯ ಮಾತಾಜಿಯವರು ಮಾಡುತ್ತಿರುವ ಕಾರ್ಯ ಅದ್ಭುತವಾಗಿದೆ. ಕಳೆದ ಹದಿನೈದು ವರ್ಷಗಳಿಂದ ಶರಣ ಮೇಳದ ದಾಸೋಹಕ್ಕಾಗಿ ಪ್ರತಿವರ್ಷ 10 ಕ್ವಿಂಟಾಲ್ ಸಕ್ಕರೆ ನೀಡುತ್ತಿದ್ದು, ಇನ್ನು ಮುಂದೆ 20 ಕ್ವಿಂಟಾಲ್ ನೀಡುವುದಾಗಿ" ಸ್ವಯಂ ಪ್ರೇರಣೆಯಿಂದ ಘೋಷಿಸಿದರು. ನಂತರ ಪೂಜ್ಯ ಮಾತಾಜಿಯವರಿಂದ ಅವರನ್ನು, ಸತ್ಕರಿಸಿ ಆಶೀರ್ವದಿಸಲಾಯಿತು. ಬೆಂಗಳೂರು ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಚಂದ್ರಮೌಳಿ ಎಮ್ಮಿಗನೂರು ಸ್ವಾಗತಿಸಿದರು. ಶರಣೆ ಚಂದ್ರಮ್ಮ ಸದಾನಂದಸ್ವಾಮಿ ಧಾರವಾಡ ಅವರು ಸಭಾ ನಿರ್ವಹಣೆ ಮಾಡಿದರು.

ಅಂದು ಸಂಜೆ 6-30ಕ್ಕೆ ಬಸವ ಧರ್ಮದ ಮಹಾಜಗದ್ಗುರು ಪೀಠದ ಇಪ್ಪತ್ತೊಂದನೆಯ ಪೀಠಾರೋಹಣೋತ್ಸವವನ್ನು ಅತ್ಯಂತ ಭಕ್ತಿ-ಶ್ರದ್ಧೆಯಿಂದ ನೆರವೇರಿಸಲಾಯಿತು.

ಮೊದಲಿಗೆ ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆಮಹಾದೇವಿಯವರು ಪೀಠದ ಮೇಲೆ ಶ್ರೀ ಗುರು ಬಸವಣ್ಣನವರ ಮೂರ್ತಿಯನ್ನು ಇರಿಸಿ ಪೂಜೆ ಸಲ್ಲಿಸಿ, ತದನಂತರ ಪ್ರಥಮ ಪೀಠಾಧ್ಯಕ್ಷರಾದ ಲಿಂ.ಪೂಜ್ಯ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ಮೂರ್ತಿಗೆ ಪೂಜೆ ಸಲ್ಲಿಸಿ, ಲಕ್ಷಾಂತರ ಭಕ್ತರ ಸಾಮೂಹಿಕ ಜಯಘೋಷಗಳ ಮಧ್ಯೆ ಪೂಜ್ಯ ಮಾತೆಯವರು ಪೀಠಾರೋಹಣಗೈದರು. ಬಸವ ಧರ್ಮ ಪೀಠದ ಷಡ್‌ಗಣಾಧೀಶರು ರುದ್ರಾಕ್ಷಿ ಮುಕುಟವಿಟ್ಟರು. ನಂತರ ಸುಮಾರು ಎರಡು ಗಂಟೆಗಳ ಕಾಲ ಸಾಲಾಗಿ ಬಂದು ಶಿಸ್ತಿನಿಂದ ಲಕ್ಷಾಂತರ ಶರಣರು ಗುರುದರ್ಶನ ಪಡೆದು, ಮಾಲಾರ್ಪಣೆ ಮಾಡಿ, ಕಾಣಿಕೆಗಳನ್ನು ಸಲ್ಲಿಸಿದರು.

ನಂತರ ಪೀಠಾರೋಹಣದ ಸಂದೇಶ ನೀಡಿದ ಪೂಜ್ಯ ಮಾತಾಜಿಯವರು ಇಂದು ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ ಪಡೆಯುವುದಕ್ಕಾಗಿ ಹೋರಾಟ ಮಾಡಲು ಎಲ್ಲರೂ ಸಂಕಲ್ಪ ತೊಡಬೇಕೆಂದು ಲಿಂಗಾಯತ ಮತ್ತು ಬಸವ ಭಕ್ತ ಶರಣ ಬಂಧುಗಳೆಲ್ಲರಿಗೆ ಕರೆಕೊಟ್ಟರು.

ಶಾಲೆಯಲ್ಲಿ ಮಕ್ಕಳಿಗೆ ವರ್ಷಕ್ಕೊಮ್ಮೆ ಪ್ರಗತಿ ಪತ್ರ (Progress Report) ಕೊಡುವಂತೆ ನಾವು ಸಹ ಇಂದು ಭಕ್ತರ ಮುಂದೆ ಸಾಧನೆಯ ವರದಿ ಸಲ್ಲಿಸಿ ಮತ್ತೆ ಮುಂದಿನ ಕಾರ್ಯ ಮಾಡಲು ಅನುಮೋದನೆ ಮತ್ತು ಅನುದಾನ ಪಡೆಯುತ್ತೇವೆ. ಅನುದಾನ ಅಂದರೆ ಸರಕಾರದಿಂದಲ್ಲ. ನಮ್ಮ ಭಕ್ತವೃಂದ-ನಿಮ್ಮೆಲ್ಲರಿಂದ. ನೀವೇ ನಮಗೆ ಸರಕಾರವಿದ್ದಂತೆ ಎಂದು ನುಡಿದರು. ಹಿಂದಿನ ವರ್ಷದಲ್ಲಿ ನಾವು ಮಹತ್ತರ ಸಾಧನೆಯನ್ನು ತಮ್ಮೆಲ್ಲರ ಸಹಕಾರದಿಂದ ಮಾಡಿ ಪೂರೈಸಿದ್ದೇವೆ. ಅದೆಂದರೆ ಬಸವಕಲ್ಯಾಣದ 108 ಅಡಿ ಬಸವ ಪುತ್ಥಳಿ. ಇನ್ನು ಮುಂದೆ ಬಸವ ಗಂಗೋತ್ರಿಯಲ್ಲಿ 111 ಅಡಿ ಬಸವ ಪುತ್ಥಳಿ ಹಾಗೂ ಕೂಡಲಸಂಗಮದಲ್ಲಿ ಪೂಜ್ಯ ಲಿಂಗಾನಂದ ಅಪ್ಪಾಜಿಯವರ 63 ಅಡಿ ಎತ್ತರದ ಮೂರ್ತಿ ಹಾಗೂ ಸ್ಮಾರಕ ನಿರ್ಮಿಸುವುದು ನಮ್ಮ ಯೋಜನೆಯಾಗಿದೆ. ಇದು ನಮ್ಮೆಲ್ಲರ ಕರ್ತವ್ಯ. ತಾವು ಎಂದಿನಂತೆ ಉದಾರವಾಗಿ ಧನಸಹಾಯ ಮಾಡಿ ಸಹಕರಿಸಿ ಎಂದು ಕೋರಿದರು.

ಐತಿಹಾಸಿಕವಾದ ಈ ಪೀಠಾರೋಹಣದ ವಾರ್ಷಿಕೋತ್ಸವದ ಉದ್ಘಾಟನೆಯನ್ನು ಪೂಜ್ಯರಾದ ಜಗದ್ಗುರು ಬಸವಪ್ರಭು ಸ್ವಾಮಿಗಳು ಲಿಂಗಾಯತ ಧರ್ಮ ಪೀಠ ಬೆಳಗಾವಿ ಅವರು ಉದ್ಘಾಟಿಸಿದರು. ಪೂಜ್ಯ ಶಿವಯ್ಯ ಸ್ವಾಮಿಗಳು ಮರಕಟ್ ಹಾಗೂ ಪೂಜ್ಯರಾದ ಸಿದ್ದೇಶ್ವರಾನಂದ ಸ್ವಾಮಿಗಳು ಚಟ್ನಳ್ಳಿ ಅವರುಗಳು ಪೂಜ್ಯ ಲಿಂಗಾನಂದ ಅಪ್ಪಾಜಿ ಹಾಗೂ ಪೂಜ್ಯ ಮಾತಾಜಿಯವರ ಸಾಧನೆಗಳನ್ನು ಮೆಚ್ಚಿ ಕೊಂಡಾಡಿದರು.

ರಾಷ್ಟ್ರೀಯ ಬಸವ ದಳ ಮಹಾರಾಷ್ಟ್ರ ರಾಜ್ಯ ಘಟಕದ ಕಾರ್ಯಾಧ್ಯಕ್ಷರಾದ ಶರಣ ಕೃಷ್ಣಪ್ಪಣ್ಣ ಮುಸಳೆಯವರು ಬಸವ ಧ್ವಜಾರೋಹಣ ಮಾಡಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಪೀಠಾಧ್ಯಕ್ಷರಾದ ಪರಮ ಪೂಜ್ಯ ಜಗದ್ಗುರು ಮಾತೆ ಗಂಗಾದೇವಿಯವರು– ಪೂಜ್ಯ ಲಿಂಗಾನಂದ ಅಪ್ಪಾಜಿ ಹಾಗೂ ಪೂಜ್ಯ ಮಾತಾಜಿಯವರು ನಮ್ಮಂತೆ ಸಾಮಾನ್ಯರಲ್ಲ. ಬಸವಾದಿ ಶರಣರ ಆಶೋತ್ತರಗಳನ್ನು ಈಡೇರಿಸಲೆಂದೇ ಬಂದಂತಹ ವಿಶೇಷ ಶಕ್ತಿಗಳು. ಧರ್ಮಕ್ಷೇತ್ರವನ್ನು ಗುರುತಿಸಿ, ಕೂಡಲಸಂಗಮದಲ್ಲಿ ಶರಣ ಮೇಳ ಆರಂಭಿಸಿ, ಕಳೆದ 26 ವರ್ಷಗಳಿಂದ ಯಶಸ್ವಿಯಾಗಿ ಲಕ್ಷ ಲಕ್ಷ ಬಸವ ಭಕ್ತರನ್ನು ಆಕರ್ಷಿಸಿ ತರಬೇತಿ ನೀಡುತ್ತಿರುವ ಪೂಜ್ಯ ಮಾತಾಜಿಯವರ ಸಾಧನೆ ಅದ್ಭುತವಾದದ್ದು. ಬಸವ ಧರ್ಮ ಪೀಠದ ಆದೇಶದಂತೆ ನಡೆದು ನಾವು ಜೀವನ ಸಾರ್ಥಕ ಪಡಿಸಿಕೊಳ್ಳೋಣ ಎಂದು ಕರೆಯಿತ್ತರು.

ಉಪನ್ಯಾಸಕರಾಗಿ ಆಗಮಿಸಿದ ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶರಣ ಡಾ॥ ರಾಜಣ್ಣ ವೈದ್ಯ ಅವರು ಮಾತನಾಡುತ್ತ ಸರಕಾರದ ಒಂದು ನಯಾಪೈಸೆ ಅನುದಾನ ಪಡೆಯದೆ ಕೇವಲ ಭಕ್ತರ ಕಾಣಿಕೆಯಿಂದಲೇ ಕೂಡಲಸಂಗಮ, ಬಸವ ಕಲ್ಯಾಣ ಎರಡೂ ಕ್ಷೇತ್ರಗಳ ಅಭಿವೃದ್ಧಿ ಹಾಗೂ ಬೃಹತ್ ಶರಣಮೇಳ, ಕಲ್ಯಾಣ ಪರ್ವ ನಡೆಸುತ್ತಿರುವುದು ದೈವೀ ಶಕ್ತಿ. ಪೂಜ್ಯ ಮಾತಾಜಿಯವರು ಮಾಡಿದ ಕಾರ್ಯವನ್ನು ಯಾರೂ ಮಾಡಲು ಸಾಧ್ಯವಿಲ್ಲ ಎಂದರು.

ಚಂಡಿಗಢದಲ್ಲಿ ಬಸವ ತತ್ತ್ವ ಪ್ರಚಾರ ಮಾಡುತ್ತಿರುವ ಶರಣ ಪ್ರೊ. ಪಂಡಿತರಾವ್ ಧರೆಣ್ಣವರ, ರೇಲ್ವೆ ಇಲಾಖೆಯಲ್ಲಿ ಹಿರಿಯ ವಿಭಾಗೀಯ ಅಭಿಯಂತರರಾಗಿರುವ ಶರಣ ಸಚ್ಚಿದಾನಂದ ಚಟ್ನಳ್ಳಿ ಮತ್ತು ಬೆಳಗಾವಿ ರಾ.ಬ.ದಳದ ಶರಣೆ. ಜಯಶ್ರೀ ಲಿಂಗಾಯತ ಅವರುಗಳಿಗೆ ಅವರ ಸಾಧನೆಯನ್ನು ಪರಿಗಣಿಸಿ ಈ ಸಲದ "ಶರಣ ರತ್ನ" ಪ್ರಶಸ್ತಿಗಳನ್ನು ಬಸವ ಧರ್ಮ ಪೀಠವು ನೀಡಿ ಗೌರವಿಸಿತು. ಪೂಜ್ಯ ಮಹಾಗುರುಗಳು ಮತ್ತು ಷಡ್‌ಗಣಾಧೀಶರು ಪ್ರಶಸ್ತಿ ನೀಡಿ ಮೂವರಿಗೂ ಪುಷ್ಪವೃಷ್ಟಿಗೈದು ಆಶೀರ್ವದಿಸಿದರು.

ಗುಲಬರ್ಗಾ ರಾಷ್ಟ್ರೀಯ ಬಸವ ದಳದ ಗೌರವಾಧ್ಯಕ್ಷರಾದ ಶರಣ. ಬಸವರಾಜ ಮಹಾಂತಗೋಳ, ಬೀದರ ರಾಷ್ಟ್ರೀಯ ಬಸವ ದಳದ ಶರಣೆ ಚಂದ್ರಮ್ಮ ಅಣ್ಣೆಪ್ಪ ಪಾಟೀಲ, ಆಂಧ್ರಪ್ರದೇಶ ರಾ.ಬ.ದಳದ ಅಧ್ಯಕ್ಷ ಶರಣ ಧನರಾಜ್ ಜೀರಗೆ, ಪ್ರಧಾನ ಕಾರ್ಯದರ್ಶಿ ಸುರೇಶ ಕೋರಿ, ಕಾಶೀನಾಥ ಪಾಟೀಲ, ಬೀದರ ಲಿಂಗಾಯತ ಸಮಾಜ ಅಧ್ಯಕ್ಷರಾದ ಶರಣ. ಕುಶಲರಾವ್ ಪಾಟೀಲ್, ಗುಲಬರ್ಗಾ ರಾ.ಬ.ದಳ ಅಧ್ಯಕ್ಷರಾದ ರೇವಣಪ್ಪ ಹೆಗ್ಗಣೆ. ನೃಪತುಂಗ ಕಾಲನಿ ಶಾಖೆಯ ಅಧ್ಯಕ್ಷ ಶರಣ. ಬಸವರಾಜ ಯಾಲಕ್ಕಿ ಮುಂತಾದ ಗಣ್ಯರು ಹಾಗೂ ಬಸವ ಧರ್ಮ ಪೀಠದ ಜಂಗಮಮೂರ್ತಿಗಳು, ಗಣನಾಯಕ–ಗಣನಾಯಕಿಯರು ಉಪಸ್ಥಿತರಿದ್ದರು.

ಶರಣ ಮೇಳದ ಅತ್ಯಂತ ಮಹತ್ವದ ದಿನವೆಂದರೆ ಜನವರಿ 14 ಬಸವಕ್ರಾಂತಿಯ (ಸಂಕ್ರಾಂತಿ) ದಿನ. ಅದು ಲಿಂಗಾಯತ ಧರ್ಮ ಸಂಸ್ಥಾಪನೆಯಾದ ದಿನ. ಇಂದಿಗೆ 849ನೇ ಸಂಸ್ಥಾಪನಾ ದಿನದ ಸಂಭ್ರಮ. ಪ್ರವಾದಿ ಗುರು ಬಸವಣ್ಣನವರಿಗೆ ದಿ. 14-1-1155ರಂದು ಸೃಷ್ಟಿಕರ್ತ ಲಿಂಗದೇವನ ಸಾಕ್ಷಾತ್ಕಾರವಾಗಿ ಇಷ್ಟಲಿಂಗದ ಮೂಲಕ ಹೊಸ ಧರ್ಮ ನೀಡಿದ ಪರಮ ಪವಿತ್ರ ದಿನ. ಅಂದು ಬೆಳಿಗ್ಗೆ ಲಕ್ಷಾಂತರ ಜನ ಒಟ್ಟಿಗೆ ಸೇರಿ ಸಾಮೂಹಿಕವಾಗಿ ಬಸವಾರ್ಚನೆ ಮಾಡುವುದು ನಂತರ ಧರ್ಮದ ಧ್ವಜಾರೋಹಣ, ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ನೇತೃತ್ವದಲ್ಲಿ ಗಣಲಿಂಗ ದರ್ಶನ ಹಾಗೂ ಪೂಜ್ಯ ಶ್ರೀ ಲಿಂಗಾನಂದ ಗುರೂಜಿಯವರ ಶರಣಾಲಯ ದರ್ಶನ ಮಾಡಿಕೊಂಡು ಸಭಾಮಂಟಪಕ್ಕೆ ಪಥ ಸಂಚಲನದ

ಮೂಲಕ ಆಗಮಿಸಿ ಸಮುದಾಯ ಪ್ರಾರ್ಥನೆ ಮಾಡಲಾಯಿತು. ಪೂಜ್ಯ ಮಾತಾಜಿಯವರು ಪ್ರಾರ್ಥನೆ ನಡೆಸಿಕೊಟ್ಟರು.

ನಂತರ ನೆರೆದ ಶರಣರೆಲ್ಲ ಪರಸ್ಪರ ಕುಸುರೆಳ್ಳು ವಿನಿಮಯ ಮಾಡಿಕೊಂಡರು. ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಮಾತಾಜಿಯವರು ಹಾಗೂ ಷಡ್‌ಗಣಾಧೀಶರು ಬಸವ ಜ್ಯೋತಿ ಪ್ರಜ್ವಲನಗೊಳಿಸಿದ ನಂತರ 108 ವಚನ ಪಠಣ ಮಾಡಿಸಿದರು. ಕೂಡಲ ಸಂಗಮದ ಬಸವ ಧರ್ಮ ಪೀಠದ ಮಹಾಮನೆಯ ಮುಂಭಾಗದಲ್ಲಿ ಪೂಜ್ಯರಾದ ಸದ್ಗುರು ಮಾದೇಶ್ವರ ಸ್ವಾಮೀಜಿ ಬಸವ ಧ್ವಜಾರೋಹಣ ಮಾಡಿದರು.

ಮುಂಬೈನ ಆರ್.ಬಿ.ಹೆಬ್ಬಳ್ಳಿ ಲಿಂಗಾಯತ ಧರ್ಮ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಶಿವರಾಜ ಪಾಟೀಲ ಅತಿವಾಳ, ಬೆಳಗಾವಿಯ ಗಣ್ಯ ವ್ಯಾಪಾರಿಗಳಾದ ಶರಣ ಶಂಕರ ಗುಡಸ್, ಸಂಜಯ್ ಬಾವಿಯವರು, ಪುಣೆ ರಾಷ್ಟ್ರೀಯ ಬಸವ ದಳದ ಶರಣ ಸತೀಶ್ ಪಾಟೀಲ ಹಾಗೂ ಪದಾಧಿಕಾರಿಗಳು, ಧಾರವಾಡ ಅಧ್ಯಕ್ಷ ಶರಣ ಸಿದ್ದಣ್ಣ ನಟೆಗಲ್, ಬಳ್ಳಾರಿಯ ಶರಣ ರವಿಶಂಕರ ಅವರು ಉಪಸ್ಥಿತರಿದ್ದರು. ಶರಣ ಸಚ್ಚಿದಾನಂದ ಸಭಾನಿರ್ವಹಣೆ ಮಾಡಿದರು.

ಸಂಜೆ 4 ಗಂಟೆಯಿಂದ 8 ಗಂಟೆಯವರೆಗೆ ಬಸವೈಕ್ಯ ಮಂಟಪದಿಂದ ಮಹಾಮನೆ ವರೆಗೆ ಭವ್ಯವಾದ ಪಥಸಂಚಲನ ಜರುಗಿತು. ಸಂಜೆಯ ಮುಖ್ಯ ಕಾರ್ಯಕ್ರಮವೆಂದರೆ ಸಾಮೂಹಿಕ ಇಷ್ಟಲಿಂಗಾರ್ಚನೆ. ಪರಮ ಪೂಜ್ಯ ಮಾತಾಜಿಯವರು ಪೂಜೆಯ ವಿವರ ಕೊಡುತ್ತ ಪ್ರಾತ್ಯಕ್ಷಿಕೆ ತೋರಿಸಿದರು. ಎಲ್ಲ ಶರಣ ವ್ರತಧಾರಿಗಳು ಮತ್ತಿತರ ಸಹಸ್ರಾರು ಭಕ್ತರು ಇಷ್ಟಲಿಂಗಪೂಜೆಯಲ್ಲಿ ಪಾಲ್ಗೊಂಡು ಪೂಜೆ ಮಾಡಿಕೊಂಡು ಕರುಣೋದಕ ಕರುಣಪ್ರಸಾದ ಪಡೆದು ಧನ್ಯರಾದರು.

ಶರಣೆ ಗಂಗಾಂಬಿಕೆ ಬಸವರಾಜ್, ಭದ್ರಾವತಿ ಹಾಗೂ ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳು ಲಿಂಗಾಂಗ ಯೋಗದ ಕುರಿತು ತಮ್ಮ ಅನುಭವಗಳನ್ನು ಎಲ್ಲರ ಮನಮುಟ್ಟುವಂತೆ ಹೇಳಿದರು.

ದಿ.15ರಂದು ಬಸವಯೋಗಿ ಸಿದ್ಧರಾಮೇಶ್ವರರ ಜಯಂತಿ ಆಚರಿಸಲಾಯಿತು. ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿಯವರು, ಪೂಜ್ಯ ಶ್ರೀ ಮಾತೆ ಸತ್ಯಾದೇವಿಯವರು, ಪೂಜ್ಯ ಶ್ರೀ ಬಸವಕುಮಾರ ಸ್ವಾಮಿಗಳು, ಪೂಜ್ಯ ಶ್ರೀ ಪ್ರಭುಲಿಂಗ ಸ್ವಾಮಿಗಳು ಇಂದೂರಿನ ಪೂಜ್ಯ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳು, ಚಟ್ನಳ್ಳಿಯ ಪೂಜ್ಯ ಶ್ರೀ ಸಿದ್ದೇಶ್ವರಾನಂದ ಸ್ವಾಮಿಗಳು ಅನುಭಾವ ನಿವೇದನೆ ಮಾಡಿದರು.

ದಿ.11ರಿಂದ 15ರವರೆಗೆ ಬೆಳಗಿನ ಜಾವ 5ರಿಂದ 7ರವರೆಗೆ ಅಥಣಿಯ ಡಾ॥ ಶಿವಕುಮಾರ ಕಲ್ಯಾಣಮಠ ಅವರು ಪ್ರಾಣಾಯಾಮ ಹಾಗೂ ಯೋಗ ತರಬೇತಿಯನ್ನು ನಡೆಸಿಕೊಟ್ಟರು. ಸಾವಿರಾರು ಜನ ಇದರ ಲಾಭ ಪಡೆದರು. 7-30ರಿಂದ 9-00ರವರೆಗೆ ಸಾಮೂಹಿಕ ಇಷ್ಟಲಿಂಗ ಪೂಜೆ ಮತ್ತು ಪೂಜ್ಯ ಜಗದ್ಗುರು ಗಂಗಾಮಾತಾಜಿಯವರಿಂದ ದೀಕ್ಷಾ ಕಾರ್ಯಕ್ರಮ ಜರುಗಿತು. ಸಹಸ್ರಾರು ಭಕ್ತರು ಲಿಂಗದೀಕ್ಷೆ, ಮಂತ್ರದೀಕ್ಷೆ ಪಡೆದು ಪುನರ್ಜನ್ಮ ಪಡೆದರು. ಏಳುದಿನಗಳ ಕಾಲ, ವಚನ ಗಾಯನ, ವಚನ ಪಠಣ, ಮಂತ್ರದ ಧ್ವನಿ ಶರಣಲೋಕದಲ್ಲಿ ದೈವೀಪರಿಸರವನ್ನು ನಿರ್ಮಾಣಗೊಳಿಸಿತ್ತು.

ವರದಿ –ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ
ಪೀಠಾಧ್ಯಕ್ಷರು, ಶ್ರೀ ಚನ್ನಬಸವೇಶ್ವರ ಜ್ಞಾನಪೀಠ, ಬಸವ ಗಂಗೋತ್ರಿ, ಬೆಂಗಳೂರು

ರಾಷ್ಟ್ರೀಯ ಬಸವ ದಳದ ಪ್ರಧಾನ ಕಾರ್ಯದರ್ಶಿಯಾಗಿ ಶರಣ ಕೆ.ವೀರೇಶ್ ಆಯ್ಕೆ

ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಪ್ರಧಾನ ಕಾರ್ಯದರ್ಶಿಯನ್ನಾಗಿ ಬಸವ ಗಂಗೋತ್ರಿಯ ಶರಣ. ಕೆ. ವೀರೇಶ್ ಅವರನ್ನು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಯವರು ನೇಮಕ ಮಾಡಿರುತ್ತಾರೆ. ಆದ್ದರಿಂದ ಹೊಸದಾಗಿ ಶಾಖೆಗಳನ್ನು ಪ್ರಾರಂಭಿಸಬಯಸುವವರು ಮತ್ತು ಸಂಘಟನೆ ಕುರಿತಾಗಿ ಶರಣ ವೀರೇಶ್ ಅವರನ್ನು ಸಂಪರ್ಕಿಸಲು ಕೋರಲಾಗಿದೆ. ಕೆ. ವೀರೇಶ್, ಜಂಗಮ ವಾಣಿ : 099644 59500

26ನೇ ಶರಣ ಮೇಳದಲ್ಲಿ ತೆಗೆದುಕೊಂಡ ನಿರ್ಣಯಗಳು

1. ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆಯನ್ನು ಪಡೆಯಲು ತೀವ್ರವಾಗಿ ಪ್ರಯತ್ನಿಸುವುದು. ಮೊದಲನೆ ಹಂತವಾಗಿ ಕರ್ನಾಟಕದ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿ ಸಂಪುಟ ಸಭೆಯಲ್ಲಿ 'ಲಿಂಗಾಯತ ಒಂದು ಸ್ವತಂತ್ರ ಧರ್ಮ' ಎಂಬ ನಿರ್ಣಯ ತೆಗೆದುಕೊಂಡು ಸಂವಿಧಾನಾತ್ಮಕ ಮನ್ನಣೆಗಾಗಿ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡುವಂತೆ ಆಗ್ರಹಿಸುವುದು.

2. ವಿಶ್ವಕಲ್ಯಾಣ ಮಿಷನ್ ಒಡೆತನದ, ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿರುವ ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ ಧರ್ಮಪಿತ ಬಸವಣ್ಣನವರ 111 ಅಡಿ ಎತ್ತರದ ಬೃಹತ್ ಪುತ್ಥಳಿ ನಿರ್ಮಿಸಿ ದೇಶ-ವಿದೇಶಗಳಿಂದ ಆಗಮಿಸುವ ಪ್ರವಾಸಿಗರಿಗೆ ಗುರು ಬಸವಣ್ಣನವರ ತತ್ವಗಳ ಪರಿಚಯ ಮಾಡಿಸುವುದು.

3. ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ ಪ್ರವಚನ ಪಿತಾಮಹರಾದ ಲಿಂ.ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರ 63 ಅಡಿ ಎತ್ತರದ ಪುತ್ಥಳಿ ಮತ್ತು ಸ್ಮಾರಕ ನಿರ್ಮಿಸುವುದು ಕಾರಣ, 63 ವರ್ಷಗಳ ಕಾಲ ಬಸವ ಧರ್ಮವನ್ನೇ ಉಸಿರಾಗಿಸಿಕೊಂಡು ಪ್ರವಚನದ ಮೂಲಕ ಬಿತ್ತರಿಸಿದ ಪೂಜ್ಯರು ಕ್ರಿಯಾವಿಶ್ರಾಂತಿ ಪಡೆದರು. ಅವರ ಗದ್ದುಗೆ ಕೂಡಲಸಂಗಮದಲ್ಲಿಯೇ ಇರುವುದರಿಂದ ಇಲ್ಲಿಯೇ ಈ ಸ್ಮಾರಕ ನಿರ್ಮಿಸಬೇಕೆಂದು ನಿರ್ಣಯಿಸಲಾಯಿತು.

4. ಕರ್ನಾಟಕದ ಏಕೈಕ ಮಹಿಳಾ ವಿಶ್ವವಿದ್ಯಾಲಯ ಇರುವುದು ವಿಜಾಪುರದಲ್ಲಿ ಅಕ್ಕಮಹಾದೇವಿ ವಿಶ್ವವಿದ್ಯಾಲಯವೆಂದು ನಾಮಕರಣ ಮಾಡಬೇಕೆಂದು ಇಡೀ ರಾಜ್ಯದ ಜನತೆಯ ಆಗ್ರಹವಾಗಿದೆ. ಸರ್ಕಾರ ಈ ಬಗ್ಗೆ ಕೂಡಲೆ ನಿರ್ಣಯ ತೆಗೆದುಕೊಂಡು ಆದೇಶ ಹೊರಡಿಸಬೇಕೆಂದು ಒತ್ತಾಯಿಸುವುದು.

5. ಕರ್ನಾಟಕದಲ್ಲಿ ಗೋವಂಶ ಹತ್ಯೆ ನಿಷೇಧ ಕಾಯ್ದೆಯನ್ನು ಜಾರಿಗೆ ತರಬೇಕೆಂದು ಈಗಾಗಲೆ ವಿಧಾನ ಸಭೆ- ವಿಧಾನ ಪರಿಷತ್ ಎರಡೂ ಸದನಗಳಲ್ಲಿ ಮಸೂದೆ ಅಂಗೀಕಾರವಾಗಿ ರಾಜ್ಯಪಾಲರ ಅನುಮೋದನೆಗೆ ಕಳಿಸಲಾಗಿದೆ. ಆದರೆ ಇದುವರೆಗೂ ಅಂಕಿತಹಾಕಿಲ್ಲ. ರಾಜ್ಯಪಾಲರು ಕೂಡಲೆ ಈ ಬಗ್ಗೆ ಗಮನ ಹರಿಸಿ ಮಸೂದೆಗೆ ಅನುಮೋದನೆ ನೀಡಬೇಕೆಂದು ರಾಜ್ಯಪಾಲರಲ್ಲಿ ಆಗ್ರಹಿಸುವುದು.


6. ಕಳೆದ ವರ್ಷದ 25ನೇ ಶರಣಮೇಳದಲ್ಲಿ ಮತ್ತು ಮೂರು ವರ್ಷಗಳಿಂದ ಕೂಡಲಸಂಗಮದ ವೃತ್ತದಲ್ಲಿದ್ದ ಕುರೂಪಿ ಮೂರ್ತಿಯನ್ನು ತೆಗೆದು ಬೇರೆ ಮೂರ್ತಿ ಕೂಡಿಸುವಂತೆ ಬಸವ ಧರ್ಮಪೀಠ ಆಗ್ರಹಿಸಿತ್ತು. ನಮ್ಮ ಮನವಿಯನ್ನು ಮನ್ನಿಸಿ ಕುರೂಪಿಯಾದ ಬಸವ ಮೂರ್ತಿ ತೆಗೆದುಹಾಕಿ ಸುಂದರವಾದ ಹೊಸ ಬಸವ ಪುತ್ಥಳಿ ಪ್ರತಿಷ್ಠಾಪಿಸಿದ್ದಕ್ಕಾಗಿ ಸರ್ಕಾರ ಮತ್ತು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ ಎಲ್ಲ ಸದಸ್ಯರಿಗೆ ಅಭಿನಂದನೆಯನ್ನು ಸಲ್ಲಿಸಲಾಯಿತು.

7. ಪ್ರತಿಯೊಂದು ಹಳ್ಳಿಗಳಲ್ಲಿ ರಾಷ್ಟ್ರೀಯ ಬಸವದಳದ ಶಾಖೆಗಳನ್ನು ತೆರೆದು ವ್ಯಾಪಕ ಸಂಘಟನೆ ಮಾಡುವುದು.

8. ಮದುವೆಯಾಗಿ ಮದುಮಗಳು ಮೊದಲು ಮನೆಯಲ್ಲಿ ಪ್ರವೇಶ ಮಾಡುವಾಗ ಅಥವಾ ಸೊಸೆಯನ್ನು ಮನೆ ತುಂಬಿಸಿಕೊಳ್ಳುವಾಗ ತಲೆಬಾಗಿಲಲ್ಲಿ ಚರಿಗೆ ಅಥವಾ ಸೇರಿನಲ್ಲಿ ಅಕ್ಕಿ ತುಂಬಿಟ್ಟು ಅದನ್ನು ಕಾಲಿನಿಂದ ಒದೆದು ಒಳಗೆ ಬರುವ ಪದ್ಧತಿ ಲಿಂಗಾಯತ ಧರ್ಮಕ್ಕೆ ವಿರುದ್ಧವಾದ ಆಚರಣೆ. ಆದ್ದರಿಂದ ಲಿಂಗಾಯತ ಧರ್ಮದ ಅನುಯಾಯಿಗಳು ಹಾಗೂ ಬಸವಭಕ್ತರು ಯಾರೂ ಈ ತರಹದ ಆಚರಣೆ ಮಾಡಬಾರದೆಂದು ನಿರ್ಣಯಿಸಲಾಯಿತು. ತಿನ್ನುವ ಪದಾರ್ಥ ಅಕ್ಕಿಯನ್ನು ಕಾಲಿನಿಂದ ತುಳಿಯುವುದು ಮಹಾಪಾಪ.

9. ರಾಷ್ಟ್ರೀಯ ಬಸವದಳದ ಕಾರ್ಯಕರ್ತರು ಉತ್ತಮ ಚಾರಿತ್ರ್ಯ ಹಾಗೂ ಸಾಮಾಜಿಕ ಕಳಕಳಿವುಳ್ಳ ಅಭ್ಯರ್ಥಿಗಳನ್ನು ಮುಂದಿನ ಚುನಾವಣೆಯಲ್ಲಿ ಆರಿಸಿ ತರಬೇಕು.

10. ಪ್ರತಿಯೊಂದು ರಾಜಕೀಯ ಪಕ್ಷದ ವರಿಷ್ಠರಿಗೆ ಮನವಿಯನ್ನು ಸಲ್ಲಿಸಿ, ಲಿಂಗಾಯತ ಒಂದು ಜಾತಿಯಲ್ಲ; ಇದು ಸ್ವತಂತ್ರಧರ್ಮ. ಲಿಂಗಾಯತ ಧರ್ಮದ ಸಾಂವಿಧಾನಿಕ ಮಾನ್ಯತೆಗಾಗಿ ಶಾಸನ ಸಭೆಯ ಒಳಗೂ ಮತ್ತು ಹೊರಗೂ ಅದಕ್ಕಾಗಿ ಹೋರಾಡುವುದಾಗಿ ತಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಸೇರಿಸುವಂತೆ ಪಕ್ಷಗಳಿಗೆ ಒತ್ತಾಯಿಸುವುದು. ಅಂಥ ಪಕ್ಷದ ವ್ಯಕ್ತಿಗಳಿಗೆ ಮಾತ್ರ ತಾವು ಮತ ಹಾಕುವುದಾಗಿ ಬಸವ ಧರ್ಮಪೀಠ ಪರಿವಾರದ ರಾಷ್ಟ್ರೀಯ ಬಸವದಳ, ಲಿಂಗಾಯತ ಧರ್ಮ ಮಹಾಸಭಾ, ಕ್ರಾಂತಿಗಂಗೋತ್ರಿ ಮಹಿಳಾಗಣ, ಮತ್ತು ಗಣಾಚಾರದಳ, ವಿದ್ಯಾರ್ಥಿ ಗಣಗಳು ನಿರ್ಣಯಿಸಿವೆ.



ಪೂಜ್ಯ ಶ್ರೀ ಜಗದ್ಗುರು ಗಂಗಾಮಾತಾಜಿಯವರ ನೇತೃತ್ವದಲ್ಲಿ ಗಣಲಿಂಗ ದರ್ಶನ ಹಾಗೂ ಸ್ಪರ್ಶನ



ಶರಣ. ಪಂಡಿತರಾವ ಧರೆಣ್ಣನವರ, ಶರಣ. ಸಚ್ಚಿದಾನಂದ ಚಟ್ನಳ್ಳಿ ಹಾಗೂ ಶರಣೆ. ಜಯಶ್ರೀ ಲಿಂಗಾಯತ್ ಅವರಿಗೆ ಶರಣ ರತ್ನ' ಪ್ರಶಸ್ತಿ ಪ್ರದಾನ



ಶೇಗುಣಸಿ ರಾ.ಬ.ದಳದಿಂದ ದೇಹದಾನ ಮತ್ತು ನೇತ್ರ ದಾನ ಜಾಗೃತಿ ಕಾರ್ಯಕ್ರಮ

CPMG/KA/BGW/50/2012-2014, RNI 19980/70, POSTED AT MBC BANGALORE GPO
ON 3rd,10th,20th, OF EVERY MONTH. LICENCED TO POST WITHOUT PRE PAYMENT
WPP-17, PAGES 32+4 (COVER PAGES)



26ನೇ ಶರಣ ಮೇಳದ ಉದ್ಘಾಟನಾ ಸಮಾರಂಭದ ವೇದಿಕೆ



26ನೇ ಶರಣ ಮೇಳ 2013

ಸಚಿವರಾದ ಗೋವಿಂದ ಕಾರಜೋಳದರು ಶರಣ ಮೇಳ ಉದ್ಘಾಟನೆ ಮಾಡುತ್ತಿರುವುದು



ಶರಣ ಮೇಳದಲ್ಲಿ ಕೂಡಿದ ಬೃಹತ್ ಶರಣ ಸಮೂಹ